ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ

ಕಿರಗೂರಿನ ಗಯ್ಯಾಳಿಗ



ನಾಟಕ ರೂಪಾಂತರ

ಅ. ನಾ. ರಾವ್ ಜಾದವ್

ಅರೆಭಾಷೆ ಅನುವಾದ ಮತ್ತು ರಂಗರೂಪ

ದೇವಜನ ಗೀತಾ ಮೋಂಟಡ್ಕ



ಪೂರ್ಣಚಂದ್ರ ತೇಜಸ್ವಿಯವರ

ಕಿರಗೂರಿನ ಗಯ್ಯಾಳಿಗ

ನಾಟಕ ರೂಪಾಂತರ

ಅ. ನಾ. ರಾವ್ ಜಾಧವ್

ಅರೆಭಾಷೆ ಅನುವಾದ ಮತ್ತು ರಂಗರೂಪ

ದೇವಜನ ಗೀತಾ ಮೋಂಟಡ್ಕ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಡಿಕೇರಿ, ಕೊಡಗು ಜಿಲ್ಲೆ

Decennial Year Publication Series 2022

ಪೂರ್ಣಚಂದ್ರ ತೇಜಸ್ವಿಯವರ
ಕಿರಗೂರಿನ ಗಯ್ಯಾಳಿಗ
Poornachandra Tejaswi's
Kiragurina Gayyaliga

Play Write by
A. N. Rao Jadhav

Arebhase translation by
Devajana Geetha Montadka

ಸಲಹಾ ಸಮಿತಿ:
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಡಾ.ವಿಶ್ವನಾಥ ಬದಿಕಾನ
ಶ್ರೀ ಭರತೇಶ ಅಲಸಂಡೆಮಜಲು

ಪ್ರಕಟಣೆ:
ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಅಕಾಡೆಮಿ

ಪುಸ್ತಕ ದೊರೆಯುವ ಸ್ಥಳ:
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿ ಕೃಪ ಬಿಲ್ಡಿಂಗ್, ರಾಜಾಸೀಟ್ ರಸ್ತೆ, ಮಡಿಕೇರಿ
ದೂ: 08272–223055, ಮೊ: 6362522677

arebaseacademy@gmail.com, www.arebaseacademy.gov.in

ಪ್ರಕಟಣೆಯ ವರ್ಷ : 2022

ಪುಟಗಳು : 96
ಬೆಲೆ : 100/–
ಪ್ರತಿಗಳು : 100

ಆಕಾರ : 1/8 Crown

ಕಾಗದ : 80 ಜಿಎಸ್‌ಎಂ ಮ್ಯಾಪ್ಲಿತೋ

ಮುಖಪುಟ ವಿನ್ಯಾಸ : **ಸಿ.ಮಹೇಶ**

ಅಕ್ಷರ ವಿನ್ಯಾಸ : **ಬಿ.ಎನ್.ಸಿದ್ದುಪ್ರಸನ್ನ**

ಮುದ್ರಣ:
ದಿವ್ಯಾ ಪ್ರಿಂಟರ್ಸ್
ಕಾಮಾಕ್ಷಿಪಾಳ್ಯ, ಬೆಂಗಳೂರು

ಅಧ್ಯಕ್ಷರ ಮಾತ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಕಟಣಾ ಯೋಜನೆ ಅಡಿಲಿ ಶ್ರೀಮತಿ ದೇವಜನ ಗೀತಾ ಮೋಂಟಡ್ಕ ಅವರ ಅನುವಾದಿತ ನಾಟಕ 'ಕಿರಗೂರಿನ ಗಯ್ಯಾಳಿಗ' ಬರ್‌ತಿರ್ದು ಕುಸಿನ ಸಂಗತಿ. ಕನ್ನಡಲಿ ದೊಡ್ಡ ಹೆಸರ್ ಮಾಡ್ದ ಲೇಖಕರಾದ ಪೂರ್ಣಚಂದ್ರ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕೃತಿನ ಕನ್ನಡಲಿ ನಾಟಕದ ರೂಪಕ್ಕೆ ತಂದವು ಅ.ನಾ.ರಾವ್ ಜಾದವ್ ಅವು. ಆ ನಾಟಕನ ತುಂಬಾ ಲಾಯ್ಕಲಿ ಅರೆಬಾಸೆಗೆ ತಂದವು ಗೀತಾ ಅವು. ಅವು ಒಬ್ಬ ರಂಗ ಕಲಾವಿದೆಯಾಗಿರುವ ಕಾರಣದಿಂದ ಈ ನಾಟಕನ ಅರೆಬಾಸೆಗೆ ಒಗ್ಗುವ ರೀತಿಲಿ ಬಾರೀ ಪೊರ್ಲುಲಿ ಅರೆಬಾಸೆನ ಸೊಗಡ್‌ನ ಉಳ್ಸಿಕಂಡ್ ಇದ್ ಅರೆಬಾಸೆದೆ ನಾಟಕಂತೇಳುವ ರೀತಿಲಿ ಅವು ಬರ್ದೊಳೊ. ಅರೆಬಾಸೆಲಿ ನಾಟಕ ರಚನೆಗ, ರಂಗಭೂಮಿಯ ಚಟುವಟಿಕೆಗ ತುಂಬಾ ಕಮ್ಮಿ ಇರುವ ಕಾರಣಂದ ಇಂತ ನಾಟಕಗ ಅರೆಬಾಸೆಗೆ ತುಂಬಾ ಅಗತ್ಯ ಉಟ್ಟು. ಈ ನಾಟಕನ ಓದಿ ಆದ ಮೇಲೆ ಇಂತ ಕೃತಿಗ ನಮ್ಮ ಅರೆಬಾಸೆ ಪರಿಸರಲಿ ಹುಟ್ಟಿಕಣುವಂಗಾದರೆ ನಮ್ಮ ಕೆಲ್ಸ ಸಾರ್ಥಕ. ಒಂದೊಳ್ಳೆ ಕೃತಿನ ಹುಡ್ಕಿ ಅರೆಬಾಸೆಗೆ ತಂದ ದೇವಜನ ಗೀತಾ ಮೋಂಟಡ್ಕ ಅವ್ಕೆ ಅಭಿನಂದನೆಗ.

ಲಕ್ಷ್ಮೀನಾರಾಯಣ ಕಜೆಗದ್ದೆ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ನಾಟ್ಕ ಓದಿಕೆ ಮುಂಚೆ....

ಕಿರಗೂರಿನ ಗಯ್ಯಾಳಿಗ ಇದ್ ಶ್ರೀ ಪೂರ್ಣಚಂದ್ರ ತೇಜಸ್ವಿಯವರ ಕೃತಿ. ಸುರುಂದಲೇ ತೇಜಸ್ವಿಯವರ ಅಭಿಮಾನಿ ನಾ. ಅವರ ಕಥೆ ಪುಸ್ತಕಗಳ ಓದುದೂಂತೇಳ್ರೆ .... ನಾವೇ ಅವರ ಕಥೆಯಾದ ಅನುಭವಗ...

ರಂಗಭೂಮಿ ನನ್ನ ವೃತ್ತಿ ಬದುಕು. ಒಂದಷ್ಟು ಮಕ್ಕಳ ನಾಟಕನ ನಾನೇ ಬರ್ದು ನಿರ್ದೇಶನ ಮಾಡ್ದ ಅನುಭವ ಉಟ್ಟು. ಈಗ ಇದರೊಟ್ಟಿಗೆ ಹೊಸದಾಗಿ ನನ್ನ ಮಾತೃಭಾಷೆಲಿ ನಾಟಕ ಬರ್ಯಕು ಅಂತ ಅರೆಭಾಸೆಲಿ ಇದರ ಬರ್ದಳೆ. ಮಾತ್ರ ಆಡುನುಡಿ ನನ್ನ ಅವಿಭಾಜ್ಯ ಅಂಗ.

ಈ ನಾಟ್ಕ ಪ್ರಕಟಿಸಕೆ ಒಪ್ಪಿಕಂಡ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಅದರ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಅವ್ಕೆ, ರಿಜಿಸ್ಟ್ರಾರ್ ಶ್ರೀ ಚಿನ್ನಸ್ವಾಮಿ ಅವ್ಕೆ ಮತ್ತು ಅಕಾಡೆಮಿ ಸರ್ವ ಸದಸ್ಯರಿಗೆ ನಾ ಋಣಿ.

ನಾ ನಾಟ್ಕ ಬರ್ಯಕೆ ಸ್ಫೂರ್ತಿ ಆದ ಅ.ನಾ.ರಾವ್ ಜಾದವ್ ಇವರ ನೆನಪಿಸಿ ಕಂಡನೆ.

ಅರೆಭಾಸೆಲಿ ನಾಟಕ ಬರೆಯುವ ನನ್ನ ಯೋಚನೆಗೆ ಹೆಗಲಾಗಿ ನಿಂತ್ ನೀ ಇದರ ಅರೆಭಾಷೆಗೆ ಅನುವಾದ ಮಾಡಿ ನಾಟಕ ರೂಪಲಿ ಬರ್‌ದೇ ಬರ್ಯಕು ಅಂತ ಪಟ್ಟ್ ಹಿಡ್ದ್ ನನ್ನ ಪ್ರೋತ್ಸಾಹ ಮಾಡಿ, ಪ್ರೀತಿಲಿ ಬರ್ಸಿ, ಮುನ್ನುಡಿನೂ ಬರ್ದವು ಖ್ಯಾತ ಲೇಖಕಿ, ಸಾಹಿತಿ, ಹಂಗೇ ಕೇಂದ್ರ ಮತ್ತು ವಾರ್ತಾ ಪ್ರಸಾರ ಇಲಾಖೆ ಅಧಿಕಾರಿಣಿ, ನನ್ನ ಆತ್ಮೀಯ ಅಕ್ಕಯ ಡಾ.ಟಿ.ಸಿ. ಪೂರ್ಣಿಮಾ, ಇವ್ಕೆ ಹೃದಯಪೂರ್ವಕ ಕೃತಜ್ಞಳ್ ನಾನು.

ಮಾರ್ಗದರ್ಶನದ ಜೊತೆಗೆ ಸಲಹೆ ಸೂಚನೆಗಳ ಕೊಡ್ತಿದ್ದ ಕೆ.ಇ.ಬಿ.ಲಿ ಅಧಿಕಾರಿಯಾಗಿ ನಿವೃತ್ತರಾದ ಶ್ರೀ ಕಿಲಾರ್ ರತನ್ ಇವ್ಕೂ, ಸದಾ ನನ್ನ ಬೆನ್ನ ತಟ್ಟಿ ಪ್ರೋತ್ಸಾಹಿಸ್ತಿದ್ದ ಶ್ರೀಮತಿ ಮಂಜುಳಾ ಹುಲ್ಲಹಳ್ಳಿ ಇವ್ಕೂ ಗೌರವದ ಕೃತಜ್ಞತೆಗ.

ಇದ್ ಕನ್ನಡಲಿ ಸಿನಿಮಾ ಬಾಕೆ ಮುಂದೇನೆ ನಾಟ್ಕ ಮಾಡ್ಸಿದ್ದೆ. ಇದ್ಕೆ ಅನುವು ಮಾಡಿ ಕೊಟ್ಟಿದ್ದ್ ಮೈಸೂರ್‌ನ ಹೊಸಮಠ ನಟರಾಜ್ ಕಾಲೇಜ್. ಅಲ್ಲಿನ ಸ್ವಾಮೀಜಿಗ, ಆಡಳಿತ ಮಂಡಳಿ, ಪ್ರಾಂಶುಪಾಲರ್, ಹಾಂಗೇ ಮಹಿಳಾ ಕಾಲೇಜ್‌ನ ಎಲ್ಲಾ ಮಕ್ಕಳ ಪ್ರೀತಿಂದ ನೆನಪಿಸಿ ಕಂಡನೆ.

ಐದು ವರ್ಷದ ಹಿಂದೆ ಇದರ ಬರ್ಯಕೆ ಅನುಮತಿ ಕೊಡಕು ಅಂತ ಕಾಗ್ದ ಬರ್ದ್‌ದಲ್ಲದೇ ಫೋನ್‌ಲೂ ಮಾತಾಡ್‌ದಕ್ಕೆ ಅನುಮತಿ ನೀಡ್ದ ಶ್ರೀಮತಿ ರಾಜೇಶ್ವರಿ ತೇಜಸ್ವಿಯವ್ಕೆ, ಹಾಂಗೆ ಇದರ ಕರಡು ಪ್ರತಿನ ಓದಿ ತಿದ್ದಿದ ಡಾ.ಕೊಳಂಬೆ ಚಿದಾನಂದ ಗೌಡ್ರಿಗೂ ನನ್ನ ಗೌರವದ ನಮನಗ.

ಮೌನ ಆಗಿಯೇ ನನ್ನೆಲ್ಲಾ ಕೆಲ್ಸ ಕಾರ್ಯಕ್ಕೆ ಪ್ರೋತ್ಸಾಹ ಕೊಡುವ ಪತಿ ದೇವಜನ ಶ್ರೀ ಗಣೇಶ್ ಹಾಂಗೂ ಮಗಳ್ ಜಗತಿ ಡಿ.ಜಿ., ಅಲ್ಲದೇ ನಾ ಬರ್ಯತಾ ಬಳೆ ಅಂತೇಳಿ ಕಾಕನ ಪ್ರೀತಿ ತೋರ್ಸಿದ ನನ್ನ ಆತ್ಮೀಯ ಬಳಗಕ್ಕೆ ಸಂಬಂಧಿಕರಿಗೆ, ಪರ ವಿರೋಧದ ಮನಸ್ಸುಗಳ ಇಲ್ಲಿ ನಾ ನೆನಪಿಸಿ ಕಂಡನೆ.

ಇದ್ ತಾಳ್ಮೆಲಿ ಟೈಪ್ ಮಾಡಿಕೊಟ್ಟ ಬಿ.ಎನ್.ಸಿದ್ದುಪ್ರಸನ್ನ ಅವ್ಕೆ, ಚೆಂದದ ಮುಖಪುಟ ಮಾಡ್ದ ಸಿ.ಮಹೇಶ್ ಅವ್ಕೆ, ಮುದ್ರಣ ಮಾಡ್ದ ದಿವ್ಯ ಪ್ರಿಂಟರ್ಸ್ ಅವ್ಕೆ ವಂದನೆಗ.

ದೇವಜನ ಗೀತಾ ಮೋಂಟಡ್ಕ

ಮೈಸೂರು.

ಮುನ್ನುಡಿ

ಕಿರಗೂರಿನ ಗಯ್ಯಾಳಿಗಳು ಪೂರ್ಣಚಂದ್ರ ತೇಜಸ್ವಿ ಅವರ ಪ್ರಸಿದ್ಧ ಕಾದಂಬರಿಗಳಲ್ಲಿ ಒಂದು. ಇದನ್ನು ನಾಟಕ ಸಿನೆಮಾ ರೂಪಗಳಲ್ಲೂ ತಂದಾಗಿದೆ. ಈಗ ಮೈಸೂರು ರಂಗಾಯಣದ ಹಿರಿಯ ಕಲಾವಿದೆ ಶ್ರೀಮತಿ ದೇವಜನ ಗೀತಾ ಮೋಂಟಡ್ಕ ಮತ್ತೊಂದು ಹೊಸ ಪ್ರಯತ್ನಕ್ಕೆ ಇದನ್ನು ಕೊಂಡೊಯ್ದಿದ್ದಾರೆ. ಉಪಭಾಷೆಯಾದ ಅರೆಭಾಷೆ ಕನ್ನಡದಲ್ಲಿ ಕಿರಗೂರಿನ ಗಯ್ಯಾಳಿಗಳು ಕಾದಂಬರಿ ಯನ್ನು ನಾಟಕರೂಪಕ್ಕೆ ತಂದಿದ್ದಾರೆ. ಅರೆಭಾಷೆ ಬಳಸುವವರು ಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಇದನ್ನು ಸಂರಕ್ಷಿಸುವ ಹೊಣೆಗಾರಿಕೆ ಈ ಭಾಷಾ ಬಳಕೆದಾರರ ಮೇಲಿದೆ. ಜೊತೆಗೆ ಸ್ವತಃ ಓರ್ವ ಹೆಸರಾಂತ ನಟಿಯಾಗಿ, ರಂಗಕರ್ಮಿಯಾಗಿ, ಸಂಗೀತಗಾರ್ತಿಯಾಗಿ, ಮಿಮಿಕ್ರಿ ಕಲಾವಿದೆಯಾಗಿ, ಕವಿಯಾಗಿ, ಸುಳ್ಯದ ಅರೆಭಾಷೆ ಸಮುದಾಯಕ್ಕೆ ಸೇರಿದ ಬಹುಮುಖ ಪ್ರತಿಭೆ ಹೊಂದಿರುವ ಶ್ರೀಮತಿ ಗೀತಾ ಓರ್ವ ಹೆಸರಾಂತ ಸಾಹಿತಿಯ ಕಾದಂಬರಿಯನ್ನು ರಂಗರೂಪಕ್ಕೆ ಅಳವಡಿಸಿ, ಅರೆಭಾಷೆಗೆ ಅನುವಾದಿಸಿ ಕೃತಿರೂಪದಲ್ಲಿ ಹೊರತಂದಿ ದ್ದಾರೆ. ಒಂದು ಉಪಭಾಷೆಯ ಸಂರಕ್ಷಣೆ ಮತ್ತು ಬಳಕೆಯ ದೃಷ್ಟಿಯಿಂದ ಅವರು ಮಾಡಿರುವ ಈ ಪ್ರಯತ್ನ ಒಂದು ಮಹತ್ತರ ಕೊಡುಗೆಯಾಗಿದೆ.

ಅಷ್ಟೇ ಹೇಳಿದರೆ ಸಾಕಾಗುವುದಿಲ್ಲ. ಏಕೆಂದರೆ ಅವರು ಇಲ್ಲಿ ಭಾಷಿಕ ದೃಷ್ಟಿಯಿಂದಷ್ಟೇ ಕೃತಿ ಯಶಸ್ವಿಯಾಗುವುದಿಲ್ಲ. ಸ್ವತಃ ರಂಗಕರ್ಮಿಯಾಗಿದ್ದುಕೊಂಡು ಕಾದಂಬರಿಯನ್ನು ರಂಗರೂಪಕ್ಕೆ ಅಳವಡಿಸಿರುವ ಹಿನ್ನೆಲೆಯಲ್ಲೂ ಅವರ ಶ್ರಮ ಸಾರ್ಥಕವೇ ಆಗಿದೆ. ಈ ಕೃತಿ ಸಿದ್ಧವಾಗುವ ಹಂತದಿಂದಲೂ ಜೊತೆಜೊತೆಗೇ ಇದ್ದು ಅದರ ಮೊದಲ ಓದನ್ನು ಕೇಳಿರುವ ನನಗೆ ಶ್ರೀಮತಿ ಗೀತಾ ಅವರ ಪರಿಶ್ರಮ ಮತ್ತು ಕೆಲಸದಲ್ಲಿನ ಅಚ್ಚುಕಟ್ಟುತನದ ಅರಿವಾಗಿದೆ. ಹಾಗಾಗಿಯೇ

ಡಾ. ಮಂಜುಳಾ ಹುಲ್ಲಹಳ್ಳಿಯವರು ಮತ್ತು ನಾನು ಮೂಡಿಗೆರೆಯಲ್ಲಿ ಶ್ರೀಮತಿ ರಾಜೇಶ್ವರಿ ತೇಜಸ್ವಿಯವರನ್ನು ಭೇಟಿ ಮಾಡಿದಾಗ ಕಿರಗೂರಿನ ಗಯ್ಯಾಳಿಗಳು ಕಾದಂಬರಿಯನ್ನು ಶ್ರೀಮತಿ ಗೀತಾ ಅವರು ಅರೆಭಾಷೆಗೆ ಅದರಲ್ಲೂ ರಂಗರೂಪದಲ್ಲಿ ತರುತ್ತಿರುವ ಬಗ್ಗೆ ಹೇಳಿ, ಇದಕ್ಕೆ ಅನುಮತಿ ನೀಡಬೇಕಾಗುತ್ತದೆ ಎಂದೂ ತಿಳಿಸಿದ್ದೆವು. ನಂತರ ಅವರನ್ನು ಕೃತಿಕಾರರು ಸಂಪರ್ಕಿಸಿ ಅನುಮತಿ ಪಡೆದಿದ್ದಾರೆ. ಅರೆಭಾಷೆಯ ಈ ಕೃತಿ ಈಗ ಬೆಳಕು ಕಾಣುತ್ತಿದೆ.

ಅರೆಭಾಷೆಯ ಅತೀವ ಅಭಿಮಾನಿಯಾದ ಶ್ರೀಮತಿ ಗೀತಾ ಮೋಂಟಡ್ಕ ಅವರಿಂದ ಇನ್ನೂ ಹೆಚ್ಚುಹೆಚ್ಚಾಗಿ ಈ ಭಾಷೆಯಲ್ಲಿ ನಾಟಕ, ಕಾವ್ಯಾದಿಗಳ ರಚನೆಯಾಗಲಿ ಎಂದು ಹಾರೈಸುತ್ತೇನೆ. ಅರೆಭಾಷೆಯ ಕೃತಿಗಳ ಪ್ರಕಾಶನಕ್ಕೆ ಹೆಚ್ಚು ಪ್ರೋತ್ಸಾಹ ನೀಡಿ ಕ್ರಿಯಾತ್ಮಕ ಕೆಲಸಗಳನ್ನು ಮಾಡುತ್ತಿರುವ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಅಭಿನಂದಿಸುತ್ತೇನೆ.

ಡಾ. ಟಿ.ಸಿ.ಪೂರ್ಣಿಮಾ, ಐ.ಐ.ಎಸ್

ಪ್ರಸಿದ್ಧ ಸಾಹಿತಿಗಳು,

ಪಾತ್ರಗ

ಭೂತವೈದ್ಯ ಹೆಗ್ಡೆ	– ರಾಮಣ್ಣ
ಗ್ರಾಮ ಸೇವಕ ಶಂಕರಪ್ಪ	– ಸೋನ್ಸ್
ಮಾರ	– ಮಲಯಾಳಿ
ಸಿದ್ಧ	– ಕುಳ್ವಾಡಿ ಕರಿಯ
ದಾನಮ್ಮ	– ನಂಬೂದಿರಿ ಪಂಡಿತ
ಸುಬ್ಬಯ್ಯ	– ಪೊಲೀಸ್ ಇನ್ಸ್‌ಪೆಕ್ಟರ್
ಸೀಗೇಗೌಡ	– ಪೊಲೀಸ್ ಕಾನ್‌ಸ್ಟೇಬಲ್
ಭೈರಪ್ಪ	– ಬಿಡಿಒ
ಕಾಳೇಗೌಡ	–ತಾಸೀಲ್ದಾರ್ ಮತ್ತು ಸಹಾಯಕರ್

(ಉಳ್ದ ಹಾಂಗೆ ಈರಿ, ರುದ್ರಿ, ಕಾಳಿ, ಸುಬ್ಬಮ್ಮ, ನಾಗಮ್ಮ, ಗುಳೆ ಹೋಗುವು, ಕುಡುಕ, ಬೇರೆ ಹೆಂಗಸ್ಗ ಮತ್ತು ಗಂಡಸ್ಗ)

ದೃಶ್ಯ– 1

(ಸಹ್ಯಾದ್ರಿ ಗುಡ್ಡೆ ಮದ್ಯಲಿ ಸಿಕ್ಯಾಕಂಡ ನಾಡ್ ಕಿರ್‌ಗೂರು. ಆ ನಾಡ್‌ನ ಗಂಡ್ ಮಕ್ಕ ಎಷ್ಟು ಪಾಪನೋ, ಅದ್ಕೆ ವಿರುದ್ಧವಾಗಿ ಹೆಣ್ಣು ಮಕ್ಕ ಭಯಂಕರ ಜೋರ್‌ನವು. ಯಾರೇ ಆರೂ ಹೆಣ್‌ಮಕ್ಕಳ ಸುದ್ದಿಗೆ ಮಾತ್ರ ಹೋದು ಬೇಡಾಂತ ಹೇಳ್‌ಕಂತಿದ್ದ. ಅವರ ದೊಡ್ಡ ಗುಂಪು ಹಾಂಗೆ ಮಾತಾಡಿಕಂಡ್ ಬರ್‍ತಾ ಉಟ್ಟು.. ಎದುರಿಗೆ ಒಂದಷ್ಟು ಜನ ಎತ್ತನೋ ಊರು ಬುಟ್ಟು ಹೋದವರಂಗೆ ಕಂಡತ್. ಇವು ಅವರ ಮಾತಾಡ್ಸುವೆ. ನಾಡ್‌ನ ಗದ್ದೆ ಪುಣಿಲಿ ಹೋಗ್ತಾ ಒಳ)

ಸೀತಕ್ಕ: ರಾಮಕ್ಕ ಅಲ್ಲಿ ನೋಡ್, ಗುಂಪು ಕಟ್ಟಿಕಂಡ್ ಯಾರೋ ಹೋಗ್ತಾ ಒಳ.

ರಾಮಕ್ಕ: ಹೌದು ಸೀತಕ್ಕ ಯಾರೋ ಊರ್‍ನ ಬುಟ್ಟ್ ಎತ್ತನೋ ಹೋದಾಂ ಗುಟ್ಟು. ಇರ್ ಹಕ್ಕಲೆ ಹೋಗಿ ಕೇಳ್ಮ.

ಸವಿತಕ್ಕ: ಇದೆಂಥದ್? ಎಲ್ಲವೂ ಹಿಂಗೆ ಎಲ್ಲಿಗೆ ಹೋಗ್ತಾ ಒಳರಿ? ನಾಡ್‌ನ ಖಾಲಿ ಮಾಡ್ಕಂಡ್ ಬಂದಾಂಗುಟ್ಟು... (ಯಾರೂ ಮಾತಾಡುದ್ಲೆ ಸುಮ್ಮನಿದ್ದವೆ. ಈ ಗೂಡೆಗ ಮೋರೆ ನೋಡಿಕಂಡವೆ)

ಸೀತಕ್ಕ: ಏಯ್ ನಿಲ್ಲ್‌ನೆ. ಆಗಾಂದಿತ್ತ ಕೇಳ್ತಾ ಒಳ ನೋಡ್ತಾ ಒಳ ಹೂಂ... ಹಾಂ....ಅಂತನೂ ಹೇಳ್ದೇ ಆಕಾಶನೇ ತಲೆ ಮೇಲೆ ಬಿದ್ದ್... ಅದರ ನೀವೆ ಹೊತ್ತ್‌ಕಂಡ್ ಹೋದವರಂಗೆ ಮಾಡ್ತಾ ಒಳರಲ್ಲಾ...

ಉಗ್ಗಪ್ಪ: ಅಕ್ಕಾ.... ಎಂತಾಂತ ಹೇಳ್ದು ನಮ್ಮ್ ಕಷ್ಟನಾ? ಎಲ್ಲಾ

ನಮ್ಮ ಹಣೆಬರ. ಸುಟ್ಟ ಮಳೆ ಬಾರದೆ, ಬೆಳೆ ಬೆಳ್ಯಕ್ಕಾಗದೆ, ಕುಡ್ಯಕೆ ನೀರು ಕೂಡಾ ಇಲ್ಲದೆ, ಈ ನರಕದ ಬದ್ಕು ಅನುಭವಿಸಿದ. ನಾಡ್‌ಗೆ ಬರ್‌ಗಾಲ ಬರ್‌ಗಾಲ ಬಂದು ಟವ್ವ.

ಅನಿತ: ಅದ್ಕೆ ಊರು ಬುಟ್ಟು ಹೋದಾ?

ಶೀನಣ್ಣ: ಹೂ ಮತ್ತೆ, ಎಷ್ಟು ದಿನಾಂತ ಈ ಬರಗಾಲನ ಸಹಿಸಿಕಂಡ್ ಇರ್ದು ಹೇಳಿ? ಮನೇಲಿ ಹೆಣ್ಣು ಮಕ್ಕಳ್ಗೆ ಹೊಟ್ಟೆಗೆ ತಿಂಬಕೆ ಕೊಡದೆ ಎಷ್ಟು ದಿನಾಂತೇಳಿ ಹಾಂಗೇ ಇರಿಕಾದೆ? ಹಸುಕರು ಗಂತೂ ಹುಲ್ಲು ಇಲ್ಲದೆ ರೋಗ ಬಂದ್ ಸತ್ತ್ ಹೋಗ್ತಾ ಒಳ. ಹಾಂಗಿರಿಕನ ಈ ಊರ್‌ಲಿ ಇದ್ದ್ ನಾವೆಂತ ಮಾಡ್ದೂಂತ ನಾಡ್‌ನ್ನೇ ಬುಟ್ಟು ಖಾಲಿ ಮಾಡಿಕಂಡ್ ಹೊರ್‌ಟಳ.

ರಾಮಕ್ಕ: ಅಲ್ಲಣ್ಣ... ಮಾಡ್ದ ತಪ್ಪುನೆಲ್ಲಾ ನೀವೇ ಮಾಡಿಕಂಡ್ ಬರಗಾಲ ಬಾತ್ ಅಂತ ನಾಡ್‌ನೇ ಬುಟ್ಟು ಹೋದು ಸರಿನಾ ಹೇಳಿ?

ಸೀತಕ್ಕ: ಹೌದು ಮತ್ತೆ, ಕಾಡ್‌ಗೆ ಹೋಗಿ, ಮರಗಿಡನೆಲ್ಲ ಕಡ್ದು ಬೇಕಾದಕ್ಕಿಂತ ಜಾಸ್ತಿ ಹಾಳ್ ಮಾಡ್ತಾ ಒಳರಿ, ದೊಡ್ಡ ದೊಡ್ಡ ಕಟ್ಟಡಗಳ ಮನೆಗಳ ಕಟ್ತಾ ಒಳರಿ, ಪ್ರಾಣಿಗಳ ಬೇಟೆ ಆಡಿ ಅದರ ಸಾಯಿಸ್ತಾ ಒಳರಿ, ಇರುವ ತೋಟಾನ ಗದ್ದೆನ ಉಳ್‌ಸ್‌ಕಂಡ್, ಬೆಳೆನ ಬೆಳ್ಸಿಕಂಡ್ ಬೇಸಾಯ ಮಾಡ್ದು ಬುಟ್ಟು..... ಬಾಯ್ ಬುಟ್ಕಂಡ್ ನೋಡಿಕಂಡ್ ಸೋಮಾರಿಗಳ ಹಾಂಗೆ ಬೇಸಾಯ ಮಾಡ್ದೇ ಕುದ್ದು ತಿಂದ್‌ಕಂಡ್ ಆಕಾಶ ನೋಡಿಕಂಡ್ ಕುದ್ದರೆ.... ಅದ್ ಅದೇನಾ ಹೇಳಿ?

ಗಣೇಶ: ಅಕ್ಕಾ ಎಂತಾ ಹೇಳ್ತಾ ಒಳ ನೀ...?

ಅನಿತ: ಎಂಥತೇಂಳ್ರೆ...? ಅನ್ನ ನೀರು ಕೊಡ್ದು ಈ ಭೂಮಿ

ತಾಯಿ ಅಲ್ಲಾ...? ಅದರ ನಂಬಿ ಈ ಭೂಮಿಲಿ ಇರುವ ಎಲ್ಲಾ ಜೀವಕ್ಕೂ ನೀರೇ ಬೇಕು ಅಲ್ಲಾ... ಅದೇ ಮೂಲ. ಉಸಿರಾಡುವ ಜೀವಕ್ಕೆಲ್ಲಾ ಜೀವ ಜಲವೇ ಅಲ್ಲಾ...? ಆ ಭೂಮಿ ತಾಯಿನ ಉಳ್‌ಸುಮ ಬೆಳ್‌ಸುಮ. ಮಳೆಗಾಲಲಿ ಮಳೆ ಬಾಕನ ದೊಡ್ಡ ದೊಡ್ಡ ಗುಂಡಿ ತೆಗ್ದು, ನೀರ್‌ನ ತೆಗ್ದ್ ಇಸ್‌ಮ. ಬಾವಿಗಳ ತೆಗ್ಸ್‌ಮಾ. ತೆಗ್ದ್ ಇಸಿದ ನೀರ್‌ನ ಮಳೆ ಬಾರದೇ ಇದ್ದ ಹೊತ್ತ್‌ಲಿ ಅದರ ತಕಮ, ಉಪಯೋಗ ಮಾಡುಮ. ಹೀಂಗೆ ಮಾಡಿರೆ ನಾವು ಊರ್‌ನ ಬುಡಕೂಂತ ಇಲ್ಲೆ, ಬರಗಾಲನೂ ಬಾಕಿಲೆ.

ರಾಮಕ್ಕ: ಮತ್ತೆ... ಎಲ್ಲವೂ ಒಂದೇ ರೀತಿಯ ವ್ಯವಸಾಯ ಬೆಳೆನ ಮಾಡ್‌ದಲ್ಲ, ಹಾಂಗೆ ಮಾಡಿರೆ ಕೆಲವು ಸರ್ತಿ ಅದ್ಕೆ ಸರಿಯಾಗಿ ದುಡ್ಡು ಇರ್‌ದುಲೆ. ಆಗ ನಾವು ಪರ್‌ದಾಡಕ್ಕಾದೆ. ನಾವು ಆಯಾಯ ಕಾಲಕ್ಕೆ ತಕ್ಕಂಗೆ ಬೆಳೆನ ಬೆಳ್‌ಸುಮಾ ವ್ಯವಸಾಯ ಮಾಡುಮ. ಕಾಫಿ ಬೆಳ್ಯಕನ ಕಾಫಿ, ಭತ್ತ ಬೆಳ್ಯಕನ ಭತ್ತ, ಅಡಿಕೆ ಬೆಳ್ಯಕನ ಅಡಿಕೆ ತರಕಾರಿಗ, ಹಣ್ಣ್‌ಗ.. ಹೀಂಗೆ. ನಾವ್ಯಾಕೆ ಅವ್ಕೆ ಇವ್ಕೆ ಅಂತ ಕಾಯೋದು? ನಮ್ಮ ಊಟನ ನಾವೆ ನೋಡಿಕಣ್‌ಮ, ತಿಂಬಮ. ಒಂದೇ ಬೆಳೆನ ಎಲ್ಲವೂ ಬೆಳ್ಯಕನ ನಾವ್ಗೆ ನಷ್ಟ ಆತೂಂತ ಸಾಲ ಮಾಡಿಕೆ ಹೋದವೆ. ಮಾಡ್ದ ಸಾಲನ ತೀರ್ಸಿಕೆ ಆಗದೆ ಎಷ್ಟು ಜನ ಸಾಯೊದ್ಲೆ ಹೇಳಿ? ಎಲ್ಲದಕ್ಕೂ ನಾವು ಸರಕಾರನೇ ನಂಬಿ ಯಾಕೆ ಕುದ್ರುದು? ಇದ್ ಎಲ್ಲವ್ಕೂ ಆಗುವ ಸಮಸ್ಯೆನೇ. ಇದ್ಕೆ ನಾಡ್ ಬುಟ್ಟು ಹೋದರೆ ಆದೆನಾ? ವಿಷ ಕುಡ್ಕಂಡು ಕುತ್ತಿಗೆಗೆ ಹಗ್ಗ ಹಾಕಿ ನೇತಾಡಿ ಸತ್ತರೆ ಎಲ್ಲಾ ಸರಿ ಹೋದೆನಾ? ಹೇಳ್ ಅಣ್ಣ ಸರಿನಾ?

ಸೀತಕ್ಕ: ನೀವೇನೋ ಸತ್ತು ಬುಟ್ಟಿರಿ. ಆದ್ರೆ ನಿಮ್ಮ ಕಟ್ಟಿಕಂಡ್ ನಂಬಿಕಂಡ್ ಇರುವ ಹೆಣ್ಣು, ಮಕ್ಕ ಒಳ ಅಲ್ಲಾ ಅಣ್ಣಾ.... ಅವರ ಕಥೆ ಎಂಥ ಹೇಳಿ? ಅವರ ಯಾರ್ ನೋಡಿ

ಕಂಡವೆ? ಎಲ್ಲದಕ್ಕೂ ನಾವ್ ಸರ್‌ಕಾರ ಕೊಟ್ಟದೆ ಸರ್‌ಕಾರ ಕೊಟ್ಟದೆ ಅಂತ ನಂಬಿ ಕುದ್ದರೆ ಅದೇನಾ? ಮತ್ತೆ... ಸರ್‌ಕಾರಕ್ಕೆ ನಮ್ಮ ಮೇಲೆ ಜವಾಬ್ದಾರಿ ಗಮನ ಇಲ್ಲೆ ಅಂತ ಹೇಳ್‌ದಕ್ಕಿಂತ... ಅಲ್ಲಿ ಇರುವುವು ಕೂಡ ಭೂಮಿತಾಯಿನ ಮಕ್ಕ ಅಲ್ಲಾ ಹೇಳಿ? ತಾಳ್ಮೆಂದ ಕಾಯಮು. ಈಗ ಸರಕಾರ ಬೇಕಾದಷ್ಟ್ ಸವಲತ್ತ್‌ಗಳ ಮಾಡಿಟು. ಅದರ ಸರಿಯಾಗಿ ತಿಳ್ಕಂಡು ಅದರ ಪ್ರಯೋಜನ ಪಡ್‌ಕಮು. ಒಬ್ಬ ಕೈ ಬುಟ್ಟು ಸೋಮಾರಿ ಆತ್‌ತೇಂಳ್ರೆ ಎಲ್ಲವೂ ಕೈ ಬುಡಕೂಂತೇನಿಲ್ಲ. ಹೇಳಣ್ಣ ನಾವ್ ಮಾತಾಡ್‌ದರ್‌ಲಿ ನೀವ್ಗೆ ಎಂಥಾರ್ ತಪ್ಪು ಕಂಡತಾ... ಹೇಳೀ.

ಉಗ್ಗಪ್ಪ: ಇಲ್ಲೆ ಅಕ್ಕ, ನೀವ್ ಹೇಳ್ದು ಸರಿ ಉಟ್ಟು, ನಾವ್ಗೆ ಗೊತ್ತಿಲ್ಲದಂಗೆ ನಾವೆ ತಪ್ಪು ಮಾಡಿಕಂಡ್ ನಾಡೇ ಇಲ್ಲದಂಗೆ ಮಾಡಿ ಬುಡ್ತಿದ್ದ. ಇನ್ನು ಮುಂದೆ ಹಾಂಗೆ ಮಾಡ್‌ದ್ಲೆ. ನೀವು ಹೇಳ್ದಂಗೆ ಹುಷಾರಾಗಿದ್‌ಕಂಡ್ ಈ ಬರಗಾಲ ಬರದ ಹಾಂಗೆ ನಾವೆ ನೋಡಿಕಂಡವೆ.

ಸೀತಕ್ಕ: ಹೂ.... ಸರಿ ಸರಿ ಬನ್ನಿ ನಾಡ್‌ಗೆ ಪೋಯಿ. ಇಂದ್ ಸೋಮವಾರ, ಸೊಸೈಟಿಲಿ ಅಕ್ಕಿ, ಬಿತ್ತನೆ ಬೀಜ, ಸೀಮೆಣ್ಣೆ ಎಲ್ಲಾ ಕೊಟ್ಟವೆಗಡ. ಬನ್ನಿ ಪೋಯಿ ತಕಮ ಪೋಯಿ.

ದೃಶ್ಯ–2

(ಗಡಂಗ್– ಬೆಳ್ಳು ಬಾಕನ ರೇಡ್ಯಲಿ ಪದ್ಯ ಕೇಳ್ತಾ ಇದ್ದದೆ. ಹೆಗ್ಡೆ ಅಂಗಡಿಲಿ ಪೂಜೆ ಮಾಡ್ತಾ ಉಟ್ಟು. ಊರಳ್ಳಿ ಭೂತವೈದ್ಯ ಹೆಗ್ಡೆ, ಗ್ರಾಮಸೇವಕ ಶಂಕರಪ್ಪನೂ ಸೇರ್ರಿ ನಡ್ಸುವ ಗಡಂಗ್ ಅದ್. ಸರಕಾರ ಕೆಲ್ಸದ ಶಂಕರಪ್ಪ ಕದ್ದು ಮುಚ್ಚಿ ನಡ್ಸುವ ಅಂಗಡಿಗೆ ಭೂತವೈದ್ಯ ಹೆಗ್ಡೆ ಯಜಮಾನ. ಆಗಲೇ ಒಂದೆರಡು ಜನ ಕಳ್ಳ್ ಕುಡ್ಯತಾ ಒಳ ಹೊರಗೆ ಹೋಗಿದ್ದ ಶಂಕರಪ್ಪ ಬಂದದರ ವ್ಯಾಪಾರದ ವಹಿವಾಟ್‌ಲಿ ಹೆಗ್ಡೆ ಗಮನಿಸುದ್ಲೆ. ವ್ಯಾಪಾರ ಕಡಿಮೆ ಆದಂಗೆ ಹೆಗ್ಡೆ ಶಂಕರಪ್ಪನ ನೋಡ್ದೆ.)

ಹೆಗ್ಡೆ: ಓ..... ಹೋ..... ಹೋ... ಗ್ರಾಮ ಸೇವಕ ಶಂಕರಪ್ಪನವು. ಬರಕು... ಬರಕು... ಈ ಗಲಾಟೆಲಿ ನಿಮ್ಮ ನೋಡ್ತೇ ಇಲ್ಲ. ದಯಮಾಡಿ ಕ್ಷಮಿಸಕು ನನ್ನ.

ಶಂಕರಪ್ಪ: ಯಾಗ ನೋಡಿರೂನು ನಿಂದ್ ಬರೀ ತಮಾಷೆನೆ ಆತ್.

ಹೆಗ್ಡೆ: ಅದ್ಯಾಕೆ ಹಂಗೆ ಸಪ್ಪೆ ಮೋರೆಲಿ ನಿಂತೊಳ? ಬಾ ಇಲ್ಲಿ ಕುದ್ದುಕಂಡ್ ಅದ್ ಎಂತಾತೂಂತ ಹೇಳ್.

ಶಂಕರಪ್ಪ: (ಬಂದು ಕುದ್ದದೆ)

ಹೆಗ್ಡೆ: ಈಗ ಹೇಳ್ ಅದು ಎಂತದೂಂತ

ಶಂಕರಪ್ಪ: ಏನಂತೇಳ್ಳಿ ಮಾರಾಯ, ಅದೇ ವ್ಯವಸಾಯ ಇಲಾಖೇದ್.

ಹೆಗ್ಡೆ: ವ್ಯವಸಾಯ ಇಲಾಖೆ ಎಂಥದ್ದ್?

ಶಂಕರಪ್ಪ: ಅದೇ ಆಧುನಿಕ ಬೇಸಾಯ ಪದ್ಧತಿ.

ಹೆಗ್ಡೆ: ಓ... ಹೋ.. ಹೋ.. "ಸಾಂದ್ರ ಬೇಸಾಯ ಕ್ರಮಾ"

ಅಂತೇಳ್...

ಶಂಕರಪ್ಪ: ಹೂ... ಅದೇ ಅದೇ ಹಾಳಾದ್ದ್..

ಹೆಗ್ಡೆ: ಅದ್ಕೆ ಯಾಕೆ ಇಷ್ಟೊಂದು ತಲೆ ಕೆಡ್ಸಿಕಂದು?

ಶಂಕರಪ್ಪ: ಯಾಕೇಂತೇಳ್ರೆ ಈಗ ಅದ್ ನನ್ನ ಕುತ್ತಿಗೆಗೆ ಬಂದುಟು.

ಹೆಗ್ಡೆ: ಅದ್ ಎಂತಾಂತೂಂತ ಬುಡ್ಸಿ ಹೇಳ್ ಮಾರಾಯ.

ಶಂಕರಪ್ಪ: ಈ ಸರ್ತಿ 'ಸಾಂದ್ರ ಬೇಸಾಯ ಕ್ರಮ'ನ ರೈತರಿಗೆ ತೆ–ೞೀರ್ಸಿ ಕೊಡಿಕೆ ಕಿರ್‌ಗೂರ್‌ಲಿ ಒಬ್ಬನಾರ್ ಒಪ್ಪಿಸಿ, ಒಂದು ಎಕರೆನಾರ್ ಮಾಡ್ಸಕು ಅಂತ ಇಲಾಖೆಯವು ಟಾರ್ಗೆಟ್ ಕೊಟ್ಟಿದ್ದ.

ಹೆಗ್ಡೆ: ಇದ್ ಇದ್ದದ್ದೆ. ಅವು ಟಾರ್ಗೆಟ್ ಕೊಡ್ದು, ನೀ ಗುಳುಂ ಮಾಡ್ದು, ರೈತರ್‌ಂದ ಸುಳ್ಳು ಸಹಿ ತಕಂದು ಸರ್ಕಾರ ಕೊಡ್ವ ಸಬ್ಸಿಡಿ, ಒಟ್ಟಿಗೆ ಔಷಧಿ–ಗೊಬ್ಬರನ್ನೆಲ್ಲಾ ಮಾರಿಕಂಡ್ ಮಜಾ ಮಾಡ್ತಾ ಒಳ ಅಲ್ಲಾ ಇನ್ನೇಂಥ ಬೇಕು ನಿಂಗೆ?

ಶಂಕರಪ್ಪ: ಆರೆ ಈ ಸರ್ತಿ ಹಂಗೆ ಮಾಡಿಕಾದ್ಲೆಪ್ಪ.

ಹೆಗ್ಡೆ: ಯಾಕೆ ಮಾಡಿಕಾದ್ಲೆ?

ಶಂಕರಪ್ಪ: ಯಾಕೇಂತೇಳ್ರೆ... ಕಿರ್‌ಗೂರ್‌ಲಿ 'ಫೀಲ್ಡ್ ಡೇ ಇಟ್ಟುಕಂಡವೆ ಅಂತ ಮೇಲೆ ಇರುವ ಅಧಿಕಾರಿಗಳ ಹೇಳ್ಯಳ. ಅದೇ ಪೀಕಲಾಟ ಆಗಿರ್ದು. ಈ ಸರ್ತಿ ಸುಳ್ಳು ಸಹಿ ತಕಂಡ್ ಡೋಂಗಿ ಮಾಡುವ ಪ್ರಶ್ನೇನೇ ಇಲ್ಲೆ.

ಹೆಗ್ಡೆ: ಅಲ್ಲ ಶಂಕರಪ್ಪ ಕಿರಗೂರ್‌ನ ರೈತರಕ್ಕಲ್ಲೆ ಎಂಥ ಬಾರೀ ಗದ್ದೆ ಉಟ್ಟು? ಏಂಥದೋ ಅವ್ಕೆ ಉಂಬಕೆ ಆಗುವಷ್ಟು ಭತ್ತ ಬೆಳ್‌ಕಂತ ಒಳ ಅಷ್ಟೆ. ಅಂತದ್ರಲ್ಲಿ ನಿನ್ನ ಸಾಂದ್ರ ಬೇಸಾಯ ಕ್ರಮಕ್ಕೆ ಯಾರ್ ಒಪ್ಪುವೆ ಹೇಳ್? ಒಪ್ಪಿಕೊಂಡರೆ ಒಪ್ಪತ್ತ್‌ನ ಊಟಕ್ಕೂ ಎಲ್ಲಿ ಪೆಟ್ಟು ಬಿದ್ದದೆ

ಅಂತ ಹೆದರಿಕೆ ಅವ್ಕೆ.

ಶಂಕರಪ್ಪ: ಸುರುಗೆ ಯಾರು ಒಪ್ಪಿತ್ಲೆ ಆಮೇಲೆ ಭಾರೀ ಕಷ್ಟಪಟ್ಟ್ ನಮ್ಮ ಕುಳ್ವಾಡಿ ಕರಿಯನ ಒಪ್ಪಿಸಿದೆ.

ಹೆಗ್ಡೆ: ಒಪ್ಪಿತಾ?

ಶಂಕರಪ್ಪ: ಒಪ್ಪದೆ ಏನ್ ಮಾಡ್ದೆ? ಸರ್ಕಾರಂದ ಅವಂಗೆ ಮನೆಗೆ ಹಂಚು ಮರಮುಟ್ಟುನ ಕೊಡ್ಸಿತ್ಲೆನಾ? ಆ ನಾಮಸಿಗೆ ಸಿಕ್ಕಿ ಕಡೇಗೆ ಮನಸ್ಸ್ ಇಲ್ಲದ ಮನ್‌ಸ್‌ಲಿ ಒಪ್ಪಿತ್.

ಹೆಗ್ಡೆ: ಓ... ಹೌದಾ...? ಆಮೇಲೆ ಏನಾತ್?

ಶಂಕರಪ್ಪ: ಸರಿ ನಂಗಂತೂ ಸಾಂದ್ರ ಬೇಸಾಯದ ಬಗ್ಗೆ ಸುಟ್ಟು ತಿಂಬಕ್ಕೆ ಗೊತ್ತಿಲ್ಲೆ. ಅದ್ಕೆ ಇಲಾಖೆಯವು 'ಸಾಂದ್ರ ಬೇಸಾಯ'ದ ಬಗ್ಗೆ ಅಚ್ಚುಹಾಕಿದ್ದ ಪುಸ್ತಕ ಓದಿಕಂಡ್ ಕರಿಯಂಗೆ ಏನು ಮಾಡಕು, ಹೇಂಗೆ ಮಾಡಕು ಅಂತ ಹೇಳ್ಕಂಡು ಬಂದೆ. ಆದರೆ ಕರಿಯನ ಗದ್ದೆ ಬೇರೆಯವರ ಗದ್ದೆ ಹಾಂಗೆ ಬಾತೇ ಇಲ್ಲೆ.

ಹೆಗ್ಡೆ: ಯಾಕೆ?

ಶಂಕರಪ್ಪ: ಕರ್ಮ! ಅದೆಂಥ ಕಥೆನೋ ದೇವರಿಗೇ ಗೊತ್ತು. ನಾ ಮಾಡಕಾದರ ಎಲ್ಲಾ ಮಾಡ್ದೆ.. ಯಾರ್ಯಾರೋ ತಿಳ್ಕಂಡವರ ಕರ್ಕಂಡು ಬಂದ್ ತೋರ್ಸಿ ಅವ್ ಹೇಳ್ದ ಗೊಬ್ಬರ, ಮದ್ದ್ ಎಲ್ಲಾ ಹಾಕಿ ನೋಡ್ದೆ. ಎಂಥ ಬದನೆಕಾಯ್‌ನೂ ಆತ್ಲೆ. ಬೇರೆಯವರ ಗದ್ದೆಗೆಲ್ಲಾ ಬಾರೀ ಪೋರ್ಲುಲಿ ಲ್ಯಾಕ್‌ಲಿ ಬೆಳ್ದು ಬೆಳೆ ಬಂದು ಭತ್ತ ಬರ್‍ತಾ ಇದ್ದರೆ, ಈ ಕರಿಯನ ಗದ್ದೆ ಮಾತ್ರ ಹಳ್ತ್ ಮಾಯಿಪ್‌ನ ಹಾಂಗೆ ನೀರ್‌ಲಿ ನಿಂತುಟು. 'ಫೀಲ್ಡ್ ಡೇ' ಇನ್ನೂ ದೂರ ಉಟ್ಟು. ಅಷ್ಟೊತ್ತಿಗೆ ಸರಿ ಆದೂಂತ ಕಾದರೆ ಸುಟ್ಟಿದ್ದು ಎಂತನೂ ಆತ್ಲೆ.

ಹೆಗ್ಡೆ: ಇದರ್ಲಿ ನಿನ್ನ ತಪ್ಪು ಎಂತದ್ದೂ ಇಲ್ಲೆ ಬುಡು.

ನೀ ಮಾಡಕಾದರ ಎಲ್ಲಾ ಮಾಡ್ತ್ಯಳ ಅಲ್ಲಾ... ಏನ್ ಮಾಡಿಕಾದೆ? ಹಾಂ... ಒಂದು ಕೆಲ್ಸ ಮಾಡು, ಇದ್ದದರ ಇದ್ದ ಹಾಂಗೆ ಇಲಾಖೆಗೆ ಹೇಳಿ ಬುಡ್, ಅದೆಂತ ಮಾಡಿಕಂಡೆವೆಯೇ ಮಾಡಿಕಣಲಿ.

ಶಂಕರಪ್ಪ: ಹಾಂಗೆ ಮಾಡಿಕಾದ್ಲೆಪ್ಪ!

ಹೆಗ್ಡೆ: ಯಾಕಾದ್ಲೆ?

ಶಂಕರಪ್ಪ: ತೋರ್ಸಿಕಿರುವ ಪ್ರದರ್ಶನದ ಗದ್ದೆಗ ಬಾರಿ ಲಾಯ್ಕ ಬಂದುಟು ಅಂತ ಇಲಾಖೆಯವ್ಕೆ ಸುಳ್ಳು ಹೇಳ್ಯಳೆ. ಅದ್ಕೆ ತಲೆ ಬೆಚ್ಚಂಗಾಗಿರ್ದು!

ಹೆಗ್ಡೆ: ಮಾಡ್‌ದೆಲ್ಲಾ ಮಾಡಿಕಂಡ್ ಆಮೇಲೆ ಸುಮ್ಮನೆ ಸಿಕ್ಕಾಕಂಡ್ ಒದ್ದಾಡಿ ಬುಟ್ಟಿಯಾ ನೋಡು.

ಶಂಕರಪ್ಪ: ಆತ್... ಈಗ ಏನು ಮಾಡಕೂಂತ ಹೇಳ್ ಮಾರಾಯ.

ಹೆಗ್ಡೆ: (ಯೋಚಿಸಿ) ಹೂಂ.. ಒಂದು ಕೆಲ್ಸ ಮಾಡ್..

ಶಂಕರಪ್ಪ: ಒಂದಲ್ಲ ಹತ್ತ್ ಮಾಡೀನೇ ಹೇಳ್ ಹೆಗ್ಡೆ.

ಹೆಗ್ಡೆ: ಕರಿಯನ ಗದ್ದೆಲಿ ಇರ್‍ವ ಇಲಾಖೆ ಬೋರ್ಡ್‌ನ ತಕಂಡ್ ಹೋಗಿ ಯಾರ್‌ದಾರ್ ಲಾಯ್ಕಲಿ ಬೆಳ್‌ದಿರುವ ಗದ್ದೆಲಿ ಕುತ್ತಿ ಬುಡು. 'ಫೀಲ್ಡ್ ಡೇ' ಆದ ಮೇಲೆ ಆ ಬೋರ್ಡ್‌ನ ತೆಗ್ದು ಬಿಸಾಡಿರೆ ಆತ್ ಹೇಂಗುಟ್ಟು ಉಪಾಯ?

ಶಂಕರಪ್ಪ: ಓಹ್... ಬಡ್ಡಿ ಮಗನೆ.... ಈ ಊರುಳ್ಳಿ ಭೂತವೈದ್ಯನ ತಲೇಂತೇಳ್ರೆ ತಲೆ ಸರಿ. ನೀ ಹೇಳ್ದಂಗೆ ಮಾಡೀನೆ ಬುಡು. ಹೋನೆ ನಾ.. (ಖುಷಿಲಿ ಮಿಂಚ್‌ನ ಹಾಂಗೆ ಹೋಗಿ ಮಾಯ ಆದೆ. ಹೆಗ್ಡೆ ಅವನತ್ತಲೇ ನೋಡಿ ನಗಾಡ್‌ದೆ ಐದಾರ್ ಜನ ಬಂದ್ ಕಳ್ಳ್ ಕೇಳಿ ಕುಡ್ಯತಾ ಇದ್ದವೆ)

ಪೊಣಚ್ಚ: ಅಣ್ಣಂಗೆ ನಮಸ್ಕಾರ..

ಗೋಪಾಲ: ಅಲ್ಲ ಅಣ್ಣ... ನಮ್ಮ ಸರ್ಕಾರ ಬಡವ್ಕೆ 1 ಕೆ.ಜಿ. ಅಕ್ಕಿಗೆ 1 ರೂ ಕೊಟ್ಟದ್ದ್ ಸರಿಯಾ ತಪ್ಪೋ...?

ಗಣೇಶ: ಅದೆಲ್ಲ ಈಗ ಯಾಕೆ ಅಣ್ಣ? ಸುಮ್ಮಂಗೆ ಏರ್ರು...!

ಪರಶು: ನಾ ಹೇಳ್ದುಂತಾರೆ... ಅದು ಒಳ್ಳೆದೇನೆ. 1 ಕೆ.ಜಿ. ಅಕ್ಕಿಗೆ 1 ರೂ ಅಂತ ಮಾಡ್ದು ನಮ್ಮಾಂಗೆ ಇರುವ ಬಡಸ್ತನದ ಕುಟುಂಬಕ್ಕೆ ಒಳ್ಳೆದಾತು ನೋಡಿ.

ಅಜ್ಜ: ಹೂಂ... ಅಣ್ಣ ನಮ್ ಹೆಣ್ಣ್ ಮಕ್ಕ ಎಲ್ಲ ತಿಂಬಕ್ಕಿಲ್ಲದೆ ಉಪವಾಸ ಬೀಳ್ದು ತಪ್ಪಿತಾ. ಮೂರು ಹೊತ್ತು ಏನೂ ಕೆಲ್ಸ ಮಾಡಿಕಣದೇ ಹೊಟ್ಟೆ ತುಂಬಾ ತಿಂಬೋ ಹಂಗೆ ಆತ್!

ಗಣೇಶ: ಸರಕಾರ ನಮ್ಮಂತವ್ಕೆ ಅಕ್ಕಿ ಕೊಡಿ ಅಂತ ಹೇಳ್ತ್. ನಾವ್ಗೆ ಉಪಕಾರ ಮಾಡ್ತ್. ಆದರೆ ಆ ಅಕ್ಕಿನ ದೊಡ್ಡವು ತಕಂಡ್, ನಾವ್ಗೆ ಕಲಬೆರ್ಕೆ ಮಾಡಿನೇ ಕೊಟ್ಟವೆ. ಒಳ್ಳೆ ಅಕ್ಕಿ ಇರ್ದೇ ಇಲ್ಲೆ. ಮೂಸಿರೆ ವಾಸನೆ ಬಂದದೆ. ಎಲ್ಲಾ ಬೂಸ್ ಹಿಡ್ದ್ ಹೋಗಿದ್ದದೆ. ಹೀಂಗೆ ಕೊಡ್ದುಂತಾದರೆ ನಾವ್ಗೆ ಇದ್ ಬೇಕಾಂತ ನನ್ನ ಪ್ರಶ್ನೆ..

ಪರಶು: ಅದು ಸತ್ಯನೂ ಕೂಡ. ನ್ಯಾಯಬೆಲೆ ಅಂಗಡಿಲಂತೂ ನ್ಯಾಯನೇ ಇಲ್ಲೆ. ನಾವು ಕೇಳ್ವಂಗೇ ಇಲ್ಲೆ. ಸರಕಾರ ಕೊಡುವ ಒಳ್ಳೆ ಅಕ್ಕಿನ ಬೇರೆ ಅಂಗಡಿಗೆ ಮಾರಿ, ನಾವ್ಗೆ ಇಂಥ ಹೊಟ್ಟು, ಬೂಸಕ್ಕಿನ ಕೊಟ್ಟವೆ ನೋಡು! ತಿಂಬಕೇ ಆದ್ಲೆ.

ಪೂಣಚ್ಚ: ಇದ್ಕೆ ಏನಾರ್ ಒಂದು ಗತಿ ಕಾಣ್ಸಕು, ಹೇಳ್ದಂಗೆ ಈ ನ್ಯಾಯ, ನೀತಿ, ಧರ್ಮಾಂತ ಹೇಳಿಕಂಡ್ ಓಡಾಡಿಕಂಡ್ ಇರುವ ನಮ್ಮ ನಾಡ್‌ನ ಗಯ್ಯಾಳಿಗ ಒಳ ಅಲ್ಲಾ...

ದೃಶ್ಯ–3

(ಸಾಮಾನು ತಕಣಿಕೆ ಸೊಸೈಟಿಲಿ ಎಲ್ಲಾ ಸಾಲಾಗಿ ನಿಂತೊಳ. ಸಾಮಾನು ಅಳ್ದು ಕೊಡುವವ ಸರಿಯಾಗಿ ಅಳ್ತೆ ಮಾಡ್ತಾ ಇಲ್ಲೆ. ಸಾಲುಲಿ ಬಂದ್ ನಿಂತ ಗಯ್ಯಾಳಿ ಹೆಣ್ಮಕ್ಕ ನೋಡ್ತಾ ಒಳ ಕೋಪ ಬಂದದೆ ಅವ್ಕೆ)

ಈರಿ: ಎಷ್ಟೊ ಹೊತ್ತ್‌ಂತ ಕಾಯೋದು... ಇನ್ನೂ ಸಾಮಾನು ಕೊಡಿಕೆ ಶುರು ಮಾಡ್‌ತ್ಲೆ.

ರುದ್ರಿ: ಭಾಷೆ ಇಲ್ಲದವ ಎಲ್ಲಿ ತಿರ್ಗಿಕಂಡ್ ಹೋವುಟೋ ಏನೋ?

(ಅಷ್ಟಾಕನ ಗ್ರಾಮ ಸೇವಕ ಶಂಕರಪ್ಪ ಒಳಗೆ ಬಂದದೆ. ಕುರ್ಚಿ ಮೇಲೆ ಕುದ್ದುಕಂಡ್ ಫೈಲ್ ತಕಂಡ್ ಆಚೀಚೆ ನೋಡದೆ ಸುಮ್ಮನೆ ಪುಟ ಬುಡ್ಸಿಕಂಡ್ ಕುದ್ದದೆ. ಆಗ ಈರಿ ಕೋಪಲಿ ಬೈಕಂತಾ...)

ಈರಿ: ಏಯ್ ಪುಣ್ಯಾತ್ಮ ಏನ್ ಮಾಡ್ತಾ ಒಳ. ಮರ್ಯಾದೆಲಿ ಬೇಗ ಬೇಗನೆ ಸಾಮಾನು ಕೊಡಿಕೆ ಆದ್ಲೆನಾ? ಎಷ್ಟೊಂತ ಸುಮ್ಮಂಗೆ ನಮ್ಮ ಕಾಯ್ಸುದು?

ಶಂಕರಪ್ಪ: ಇರುನೆ! ಅದ್ಯಾಕೆ ಹಾಂಗೆ ಬೊಬ್ಬೆ ಹಾಕ್ತಾ ಒಳಾ?

ರುದ್ರಿ: ಬೊಬ್ಬೆ ಅಲ್ಲ... ಮರ್ಯಾದೆಲಿ ನಿನ್ನ ಕೆಲ್ಸನ ಸರಿಯಾಗಿ ಮಾಡ್

(ಅಷ್ಟಾಕನ ಒಬ್ಬ ಕುಡ್ದವ ಸರತಿ ಸಾಲ್‌ಲಿ ನಿಲ್ಲುದ್ ಬುಟ್ಟು ಹೆಂಗಸರ ಮಧ್ಯೆ ಬಂದ್ ನಿಲ್ಲಿಕೆ ಹೋದೆ)

ಕಾಳಿ: ಓಯ್ ಅಣ್ಣ... ನೆಟ್ಟಂಗೆ ಸಾಲುಲೇ ಬಾ... ಕುಡ್ಕಂಡ್ ಬಾದ್ ಬೇರೆ! (ಕುಡ್ದವ ಹೊಣ್ಕಿ ಮೈಮೇಲೆ ಬಿದ್ದದೆ) ಮೈಮೇಲೆ ಬೇರೆ ಬಿದ್ದಿಯಾ... (ಒಂದ್ ಇಸಿದೆ).

ಕುಡ್‌ದವ: ಅಕ್ಕ ನಮಸ್ಕಾರಕ್ಕ.... (ಅಂತೇಳಿ ಹಿಂದೆ ಹೋದೆ. ಅಷ್ಟರಲ್ಲಿ

ಸಾಮಾನು ಅಳ್ದ್ ಹಾಕುವವ ಸರಿಯಾಗಿ ತೂಕ ಮಾಡದೆ ಹಾಕುದರ ಸುಬ್ಬಮ್ಮ ನೋಡ್ದೆ)

ಸುಬ್ಬಮ್ಮ: ಏಯ್... ಸರಿಯಾಗಿ ತೂಗಿ ಹಾಕ್.

ತೂಗುವವ: ಅದರ ಹೇಳಿಕೆ ನೀ ಯಾರ್? ನಿಂಗೆ ಎಷ್ಟು ಕೆಲ್ಸ ಉಟ್ಟೋ ಅಷ್ಟು ನೀ ನೋಡಿಕ.

ಈರಿ: ಎಂಥ ಹೇಳ್ದಾ...?

ತೂಗುವವ: ಏನಿಲ್ಲೆ... ಏನಿಲ್ಲೆ...

ನಾಗಮ್ಮ: ಹಂಗಾರೆ ಸರಿಯಾಗಿ ಹಾಕ್ (ಅಕ್ಕಿನ ಮೂಸಿ ನೋಡಿ) ಓ ದೇವ್ರೇ.. ಇಂದೆಂಥಾ ಅಕ್ಕಿ? ಬೂಸ್ ಬಂದುಟು. ಮೂಸಿರೆ ಕಕ್ಕಿಕೆ ಬಂದದೆ.

ಶಂಕರಪ್ಪ: ಓ.... ಬೇಕಾರೆ ತಕ. ಇಲ್ಲಾಂತೇಳ್ರೆ ಇಲ್ಲಿಂದ ನಡಿ.

ಈರಿ: ಎಂಥಾ.. ಎಂಥ ಹೇಳ್ದ ಸುಟ್ಟವಾ... ನಿನ್ನಪ್ಪನ ಮನೆದಾ ಇದ್. ಅವಂಗೆ ಸರಿಯಾಗಿ ಹಾಕ್‌ಬೇಡಾಂತ ಬೇರೆ ಹೇಳಿ ಕೊಟ್ಯಾನಾ? ನಿನ್ನಾ.... (ಎಲ್ಲಾ ಸೇರಿ ಹೊಡ್ಯಕೆ ಹೋದವೆ. ಶಂಕರಪ್ಪ ಒಂದೇ ಬರ ಓಡ್ದೆ)

(ರಂಗದ ಮೇಲೆ ಕತ್ತಲಾದೆ)

ದೃಶ್ಯ–4

(ಜೋರಾಗಿ ಬಿರುಗಾಳಿ ಬೀಸ್ತಾ ಉಟ್ಟು. ಸಹ್ಯಾದ್ರಿ ಪರ್ವತದ ಮಧ್ಯೆ ಸಿಕ್ಕಿ ಹಾಕ್ಯಂಡಿದ್ದ ಹಳ್ಳಿ ಕಿರಗೂರು. ಈ ಗಾಳಿಗೆ ಇದ್ದ ಮರ ಗಿಡಗೆಲ್ಲಾ ಕಂತಮುಟ್ಟಿ ಮಗ್ಚಿ. ಮಾಡ್‌ಗ ಎಲ್ಲಾ ಹಾರಿ ಹೋಗಿದ್ದದೆ. ಮೂರು ದಿನ ಇದರ ರಂಪಾಟ ಆಗಿ ನಿತ್ತು ಹೋಗಿದ್ದದೆ. ಗದ್ದೆ ಬಯಲ್. ದಾನಮ್ಮ, ಸುಬ್ಬಮ್ಮ, ರುದ್ರಿ, ಕಾಳಿ, ಈರಿ.... ಹೀಂಗೆ ಒಂದಷ್ಟು ಹೆಣ್ಣು ಜನಂಗ ಗದ್ದೆಲಿ ಪದ್ಯ ಹೇಳಿಕಂಡ್, ಮಾತಾಡಿ ನೆಗಾಡಿ ಕಂಡ್ ನೇಜಿ ತೆಗ್ಯತಾ ಒಳ. ಆಗ ಆ ಊರ್‌ನ ಊರ್‌ಗೌಡ ಕಾಳೇಗೌಡ ಹೆಣ್ಮಕ್ಳ ಜೊತೆಗೆ ಮಾತಾಡುವೆ. ಜೋರ್ ಗಾಳಿ ಬಂದದೆ)

ಕಾಳೇಗೌಡ: ಅಬ್ಬಬ್ಬಾ.... ನಾ ಹುಟ್ಟಿದಾಗಂದ ಇಂಥ ಗಾಳಿನ ಮಾತ್ರ ನೋಡ್ತ್‌ಲೆ. ಎಂಥೆಂಥ ಮಳೆಗಾಳಿನ ನೋಡ್ಯಳೆ. ಆದರೆ ಇಂಥ ಗಾಳಿನ ನೋಡ್ದು ಮಾತ್ರ ನೆಂಪಿಲ್ಲೆ.

ಈರಿ: ಅಜ್ಜ ಮಳೆ ಬಂದದ್ದಾರ್ ಅಷ್ಟರ್ಲೆ ಉಟ್ಟು. ಆದರೆ ಗಾಳಿ ಮಾತ್ರ ದಶಾವತಾರ ತೋರ್ಸಿ ಬುಡ್ತ್. ಹೆಚ್ಚಿನಂಶ ಈ ಗಾಳಿ ದೆಸೆಂದೆನೆ ಮಳೆ ಬೀಳ್ಸುವಂತ ಮೋಡಗೆಲ್ಲಾ ಸರಿಯಾಗಿ ಮಳೆ ಬೀಳ್ಸದೆ ಅತ್ತಂದಿತ್ತ ಇತ್ತಂದತ್ತ ದಿಕ್ಕು ಪಾಲಾಗಿ ಓಡಿ ಹೋತ್.

ಕಾಳೇಗೌಡ: ನೀ ಹೇಳ್ದ್ ಸರಿನೆ ಮಗ. ಗಾಳಿ ಬಂದ್ ಮಳೆನನ್ನೇ ನಿಲ್ಸಿ ಬುಡ್ತ್. ಮಳೆ ಬಾರದಿದ್ದರೆ ತೋಡ್‌ಲಿ ನೀರು ತುಂಬಕಲೆ! ನೀರ್ ತುಂಬುದಾರ್ ಯಾಗ ಹೀಂಗೆ ಗಾಳೀನೇ ಬೀಸಿರೆ... ಈ ಬಾಳೆ ಗಿಡಗ ಒಂದೂ ಉಳ್ಯದುಲೆ ಎಲೆಗ ಪೂರಾ ಚೀಂತ್ ಚೀಂತಾದೆ. ಕಾಡು ಮಾವಿನ ಕಾಯಿಗಂತೂ ಹಣ್ಣಾಗದೆ ಪಟಪಟಾಂತ ಉದುರ್ತಾ ಉಟ್ಟು ಇರ್ಲಿ... ದೇವ್ರು

ಒಳ. ಸರಿ ಸರಿ ನಿಮ್ಮ ಕೆಲ್ಸನ ನೀವು ನೋಡಿಕಣಿ.

ಈರಿ: ಸರಿ ಆತ್ ಆತ್ (ಕಾಳೇಗೌಡ ಹೋದೆ. ಇವು ಪದ್ಯ ಹೇಳ್‌ವೆ ಮತ್ತೆ)

(ಒಳ. ಇದ್ದಕ್ಕಿದ್ದಂಗೆ ಮತ್ತೆ ಗಾಳಿ ಬೀಸಿಕೆ ಶುರು ಆತ್. ಈರಿ ಬಂದ್ ಸೇರಿಕಂದತ್)

ಸುಬ್ಬಮ್ಮ: ಇದೆಂಥ ಸುಟ್ಟ ಗಾಳಿ! ಯಾಗಲೂ ಇಲ್ಲದೇ ಇದ್ದದ್ ಇಂದ್ ಹಿಂಗೆ ಬೀಸ್ತಾ ಉಟ್ಟಲ್ಲ.

ಕಾಳಿ: ಮಳೆಗಾಲಾಂತೇಂಳ್ದ ಮೇಲೆ ಯಾಗಾರ್ ಒಮ್ಮೊಮ್ಮೆ ಭರ್ರೋ... ಅಂತ ಗಾಳಿ ಬೀಸಿದೆ. ಅದು ಕ್ರಮ. ಆದರೆ ಯಾಗಲೂ ಬರದಿದ್ದ ಗಾಳಿ ಇಂದ್ ಇಷ್ಟು ಜೋರಾಗಿ ಬೀಸ್ತಾ ಉಟ್ಟಲ್ಲ.. ಆಂ...

ರುದ್ರಿ: ನೀ ಸರಿಯಾಗಿ ಹೇಳ್ದ! ಅಲ್ಲಾ.... ಇಷ್ಟು ಜೋರಾಗಿ ಗಾಳಿ ಬೀಸಿ ಮೋಡಗ ಎಲ್ಲಾ ಅತ್ತಂದಿತ್ತ ಇತ್ತಂದತ್ತ ಹೋದ ಮೇಲೆ ಮಳೆ ಬಾದಾರು ಎಲ್ಲಿ ಅಪ್ಪನ ಮನೆಗೆ. (ಬಿರುಗಾಳಿ ಇನ್ನು ಜೋರಾಗಿ ಬೀಸಿದೆ)

ಈರಿ: ಈಗ ನಿಲ್ಲುದು ಆಗ ನಿಲ್ಲುದು ಅಂತೇಳಿಕಂಡ್ರೆ ಇದೆಂಥ ಹೆಚ್ಚಾಗ್ತನೆ ಉಟ್ಟು!

ಸುಬ್ಬಮ್ಮ: ಓ.... ಇದು ಒಳ್ಳೆ ಕಥೆ ಆತಲ್ಲಾ... ಓಯಿ ಎಲ್ಲವೂ ಸೀರೆನ ಗಟ್ಟಿ ಹಿಡ್ಕಣಿಯಪ್ಪ.. ಎಂಥದೋ ಈ ಗಾಳಿಗೆ ನಮ್ಮ ಸೀರೆ ಮೇಲೆ ಕೋಪ ಬಂದಾಗುಟ್ಟು...

ದಾನಮ್ಮ: ಏಯ್.... ಇಲ್ಲಿ ಯಾರೂ ಗಂಡು ಜನಂಗ ಇಲ್ಲೇಂತೇಳ್ದ ಮೇಲೆ ಸೀರೆ ಹಾರ್ರು, ಮಾನ–ಮರ್ಯಾದೆ ಇದ್ಯಾವುದಕ್ಕೂ ಹೆದುರ್‌ದ್ಲೆಲೆ ಬುಡು. (ಬರ್ತಾ ಬರ್ತಾ ಬಿರುಗಾಳಿ ಜಾಸ್ತಿ ಆಗ್ತನೇ ಹೋತ್. ಎಲ್ಲವೂ ಅವರವರ ಸೀರೆನ ಗಟ್ಟಿಯಾಗಿ ಹಿಡ್ಕಣಿಕೆ ಪರ್‌ದಾಡ್ತ ಒಳ. ಹಾಂಗೆ ಒಂದ್ ಹೆಣ್ಣ್ ಗೂಡೆ ಪರ್‌ದಾಡ್‌ದರ ನೋಡಿ ಮತ್ತೊಂದು ಜೋರಾಗಿ

ನೆಗಾಡಿಕೆ ಶುರು ಮಾಡ್ದೆ. ಮಾತ್‌ಗೆ ಮಾತ್ ಶುರು ಆಗಿ ಜೋರ್ ಜಗಳ ಆದೆ)

ಹೆಣ್ಣು 1: ಅದೆಂಥ ಕಂಡತ್‌ನೆ ನಿಂಗೆ ಹಲ್ಲು ಬುಡಿಕೆ?

ಹೆಣ್ಣು 2: ಏನು ಮಾಡ್ದು? ಗಾಳಿ ಮಹಿಮೆ! (ವ್ಯಂಗ್ಯ) ಕಾಣದೆ ಯಾರಾರ್ ಹಲ್ಲು ಬುಟ್ಟವೆನಾ? ಕಂಡದಕ್ಕೆ ಹಲ್ಲ್ ಬುಟ್ಟದ್.

ಹೆಣ್ಣು 3: (ಕೈಲಿದ್ದ ನೇಜಿ ಕಂತೆನ ಅದರ ಮುಸುಡಿಗೆ ರಪ್ಪಂತ ಬಿಸಾಡಿ) ಅದ್ ಎಂತದ್‌ನೆ ಅಂತದ್ದ್ ನಿಂಗೆ ಕಂಡದ್ದ್? ಪೆಸಲ್ಲಾಗಿ ಕಂಡತಾ? ಎಲ್ಲವ್ಕ ಇರ್‌ದೇ ನಾವ್ಗೂ ಇರ್ದು.

ಹೆಣ್ಣು 2: ಎಲ್ಲವ್ಕೆ ಇದ್ದಂತದೆ ಇದ್ದರೆ ನಾ ಯಾಕೆ ನಗಾಡಲಿ?

ಹೆಣ್ಣು 3: ಹಂಗಾರೆ ತೆಗಿ ನೋಡ್‌ಮ. ನಿಂದ್ ಹೇಂಗೆ ಉಟ್ಟುಂತ ನೋಡೇ ಬುಡುಮ. (ಹಾಂಗೆ ಹೇಳಿಕಂಡ್ ಅದರ ಸೊಂಟಕ್ಕೆ ಕೈ ಹಾಕಿ ಸೀರೆ ಎಳ್ಯಕೆ ಹೋದೆ. ಜಗಳ ಜೋರಾದೆ. ಬೇರೆಯವ್ರು ಬುಡ್ಸಿಕೆ ಪ್ರಯತ್ನ ಪಟ್ಟವೆ)

ದಾನಮ್ಮ: ಇದು ಎಂತದ್‌ನೆ ತಮಾಷೆಲಿ ಮಾತಾಡಿಕಂಡ್ ಮಾತಾಡಿಕಂಡ್ ಎಂತದಾತ್ ರೋಗ! ಎಲ್ಲಾ ಒಟ್ಟಿಗೆ ನಿತ್ತ್‌ಕಂಡ್ ಕೆಲ್ಸ ಮಾಡ್ದು ಬುಟ್ಟು ನಂದ್ ನಿಂದ್ ತೋರ್ಸ್ ಏರ್ಸ್ ಅಂತ ಸುರು ಮಾಡಿಕಂಡರಲ್ಲ... ಥತ್...

ಸುಬ್ಬಮ್ಮ: (ಆಕಾಶ ನೋಡಿಕಂಡ್ ಇವರ ಗಲಾಟೆ ಕಂಡ್ ಗಾಳಿ ಬೀಸುದರ ನೋಡಿ) ಇಂದ್ ಕೆಲ್ಸ ಮಾಡ್ದಂಗೆ... ಸುಮ್ಮನೆ ದಿನ ಹಾಳಾತ್ ಇನ್ನ್ ಕೆಲ್ಸ ಮಾಡ್‌ದಾರೆ ಗಾಳಿ ನಿಂತ ಮೇಲೆನೆ. ನಡ್ಯನಿ ನಡ್ಯನಿ ಎಲ್ಲ. (ಹೊರ್‌ಟವೆ ಬಿರುಗಾಳಿ ಬೀಸಿಕಂಡೇ ಇದ್ದದೆ)

(ರಂಗದ ಮೇಲೆ ಕತ್ತಲಾದೆ)

ದೃಶ್ಯ–5

(ಸೀಗೇಗೌಡನ ಮನೆ. ಬೀಸುವ ಗಾಳಿಗೆ ರಂಗದ ಒಂದು ಮೂಲೆಲಿರುವ ದೊಡ್ಡ ಹಡ್ಗ ಹೆಬ್ಬಲಸ್ನ್ ಮರ ತಲೆಕೆಟ್ಟವರಂಗೆ ಓಲಾಡ್ತುಟ್ಟು. ಸೀಗೇಗೌಡ ಮತ್ತೆ ಅವನ ಮಗ ಸುಬ್ಬಯ್ಯ ಹೆದರಿಕಂಡ್ ಒಂದ್ ಕಡೇಲಿ ಮುರ್‌ಂಟಿ ಕುದ್ದಳೊ. ಅವರ ಸೊಸೆ ದಾನಮ್ಮ ಸ್ವಲ್ಪನೂ ಹೆದರಿಕಣದೆ ಬಾಯಿಗೆ ಬಂದ ಹಾಗೆ ಶಾಪ ಹಾಕಿಕಂಡ್ ಓಡಾಡ್ತ ಉಟ್ಟು. ಗಾಳಿ ಬೀಸಿದೆ ಜೋರಾಗಿ)

ದಾನಮ್ಮ: ಮೂರು ರಾತ್ರಿ ಮೂರು ಹಗಲ್ ಬೀಸಿರು ಇದ್ಕೆ ಸಮಾಧಾನ ಆತ್ಲೆ. ಗದ್ದೆಲಿ ಕೆಲ್ಸ ಮಾಡಿಕಂಡಿದ್ದ ಹೆಣ್ಣು ಜನಗಳ ಮೇಲೆ ಇದರ ಅವತಾರ ತೋರ್‍ಸಿಕಂಡದ್ದೇ ತೋರ್‍ಸಿಕಂಡದ್ದ್ ಥೊ... ಇದರ ಹುಲಿಬಡ್ಯ.

ಸುಬ್ಬಯ್ಯ: ಅಪ್ಪ..... ಈ ಗಾಳಿಗೆ ಮರಗಿಡಗೆಲ್ಲಾ ಅತ್ತಂದಿತ್ತ ಓಲಾಡಿ ಓಲಾಡಿ ಉದ್ದುಂಡ ಬಿದ್ದು ನಮಸ್ಕಾರ ಮಾಡ್ದಂಗೆ ನೆಲ ಮುಟ್ಟಿ ಮುಟ್ಟಿ ಎದ್ರುತ ಉಟ್ಟು. ಕೆಲವು ಮರಗ ಲಟ ಲಟಾಂತ ಬುಡ ಸಮೇತ ಹೊಣ್‌ಕಿ ಬಿದ್ದುಟು. ಬಾಳೆಗಿಡ ಅಂತೂ... ಉಂಬಕೆ ಒಂದು ಎಲೆನೂ ಸಿಗದಾಂಗೆ ಅಡ್ಡಾದಿಡ್ಡಿ ಸೀಳಿ ನೆಲಕ್ಕೆ ಬಿದ್ದುಟು.

ಸೀಗೇಗೌಡ: ನಾ ಹುಟ್ಟಿದಲ್ಲಿಂದ ಇಂಥಾ ಗಾಳಿನ ನೋಡ್ತ್‌ಲೆ. ಎಂಥೆ–ಂಥಾ ಮಳೆ ಗಾಳೀನ ನಾ ನೋಡ್ಯಳೆ. ಆದರೆ ಇಂಥ ಗಾಳಿ ನೋಡ್‌ದರ ನೆನ್‌ಪಿಲ್ಲೆ.

ದಾನಮ್ಮ: ಇದೊಂದು ಸುಟ್ಟ ಹೆಬ್ಬಲ್‌ಸ್ನ್ ಮರ. ನೋಡ್ ಅದರ ಅವತಾರ! ಸುಮ್ಮಂಗೆ ನಿತ್‌ಕಂಬೋದು ಬುಟ್ಟು ಒಳ್ಳೆ ಕುಡ್‌ದವರಂಗೆ ಆಚೇಂದೀಚೆ ಮಾಲ್ತಾ ಉಟ್ಟು.

ಸೀಗೇಗೌಡ: ಅದೆಂತದೋ ಸುಟ್ಟದ್! ಇದ್ ಯಾಗ ಹುಟ್ಟಿದೂಂತ ಯಾರಿಗೆ ಗೊತ್ತು? ಈ ಕಿರ್‌ಗೂರ್‍ನ ಮಂದಿಗ ಎಲ್ಲಿಂದಲೋ ನಾಡ್ ಬುಟ್ಟ್ ಇಲ್ಲಿಗೆ ಬಂದ್ ಸೇರಿಕೆ ಮುಂದೇನೆ ಈ ಮರ ಉಟ್ಟು ಗಡ. ಆ ಮರದ ಮೇಲೆ ಉದ್ದುದ್ದ ಗಡ್ಡ ಮೀಸೆ ಸನ್ಯಾಸಿಗ ಬೆಳ್ಸಿದಗೆ ನೇತಾಡಿಕಂಡು, ಅದ್ ಎಂಥೆ–ಂಥದ್ದೋ ಇಪ್ಪತ್ತೈದು ಗಿಡ ಬಳ್ಳಿಗ ಬೇರೆ. ಒಂದೊಂದರ ಎಲೆ ಭೂತದಂಗೆ ಉಟ್ಟು. ಅದರ ನೋಡಿರೆ ಇದ್ ಯಾವ ಮರಾಂತ ಹೇಳಿಕೆನೆ ಆಕಿಲೆ. ಎಂಥೆಂಥಾ ಗಾಳಿ ಮಳೆಗೆ ದೆವ್ವದಂಗೆ ಎದುರಿಸಿ ನಿಂತ್ ಹಾಂಗೇ ಬೆಳ್ದ ಮರ ಇದ್. ಇದರ ಕಡಿಯೋದು ಬುಡು ಕುಯ್ಯಕೂ ಆಗದಂಗೆ ಇದ್ ಬೆಳ್ದ್ ನಿತ್ತಿತ್. ಹಾಂಗಿರಕನ ಈ ಗಾಳಿಗೆ ಇದು ಅಲ್ಲಾಡ್ತಾ ಉಟ್ಟೊಂತೇಂಲ್ರೆ? ಇದು ಎಂಥಾ ಗಾಳಿ ಇರ್‍ದು ಹೇಳಿ? ಯಬ್ಬಾ... ನಂಬಿಕೆ ಆಗ್ತಿಲ್ಲೆ.

ದಾನಮ್ಮ: ಅತ್ತ ಬೀಳ್ದು ಇಲ್ಲೆ. ಇತ್ತ ಸುಮ್ಮಂಗೆ ನಿಲ್ಲುದು ಇಲ್ಲೆ. ಇಷ್ಟು ದಿನ ಇದರ ಕಾಯಿಗ ಬಿದ್ದ್ ಮನೆ ಮಾಡ್‌ಗೆಲ್ಲಾ ಒಡ್‌ದೋಗ್ತಿತ್. ಈಗ ಈ ಗಾಳಿನ ಅವತಾರಕ್ಕೆ ಮನೆ ಮೇಲೆನೇ ಮಗ್‌ಚಿ ಬಿದ್ದು, ನಮ್ಮ ದೂಪೆ ಮಾಡಿಕೆ ಹೊರ್‌ಟುಟು ಕಂಡೆದೆ ಸುಟ್ಟದ್.

ಸುಬ್ಬಯ್ಯ: (ಹೆದರಿ) ಇದೆಂಥ ಅಪ್ಪ ಮನೆಯ ಹಂಚುಗ ಅಲ್ಲಾಡ್ತಾ ಉಟ್ಟು. ಬೇರ್ ಇದ್ದ ಜಾಗಲಿ ನೆಲ ಬಾಯಿ ಬುಡ್ತಾ ಉಟ್ಟು. ಗೋಡೆ ಸಿಮೆಂಟ್ ಮಣ್ಣು ಎಲ್ಲಾ ಉದುರ್‍ತಾ ಉಟ್ಟು. (ನೆಲಕ್ಕೆ ಕಿವಿ ಇಸಿ) ನೆಲಂದ ಎಂಥದ್ದೋ ಶಬ್ದ ಬರ್‍ತಾ ಉಟ್ಟು ಅಪ್ಪ.

ಸೀಗೇಗೌಡ: ಹೆದ್ರ್‌ಬೇಡ. ಯಾವುದೇ ಹೆಗ್ಗಣ ಹೊರಗೆಂದ ಸುರಂಗ ಮಾಡಿಕಂಡ್ ಅಡಿಗೆ ಮನೆಗೆ ಬಂದುಟು ಕಂಡದೆ ನೋಡು.

ಸುಬ್ಬಯ್ಯ: ಇಲ್ಲೆ ಅಪ್ಪ ಭೂಕಂಪ ಆದಂಗೆ ಆಗ್ತಾ ಉಟ್ಟು.

ದಾನಮ್ಮ: ಆದೆ... ಆದೆ... ಈ ಮರದ ಬೇರ್‌ನ ಮೇಲೆನೆ ಮನೆ ಕಟ್ಟಿರೆ ಭೂಕಂಪ ಆಗದೆ ಇನ್ನೇಂತಾದೆ? ಗಾಳಿಗೆ ಈ ಸುಡುಗಾಡ್‌ನ ಮರ ಎಳ್ದು ಬಗ್ಗಿದಾಂಗೆ ಬೇರುಗಳೂ ಎದ್ರುತಾ ಉಟ್ಟು. ನೀವ್ಗೆ ಮನೆ ಕಟ್ಟಿಕೆ ಇದೇ ಜಾಗೆ ಬೇಕಾಗಿತ್ತಾ? ಅದು ಸಾಯಲಿ ಅದರ ಕಡ್ಸಿ ತೆಗ್ಯಕು ಅಂತ ಈ ಬಡ್ಡ್ ತಲೆಗೆ ಹೊಳ್ಯದೇ ಹೋತಲ್ಲ. ಈಗ ಹೆದರಿ ಮಂಗನ ಹಾಂಗೆ ನಿತ್ತರೆ..?

ಸುಬ್ಬಯ್ಯ: ಅದ್ಯಾಕೆ ಹಾಂಗೆ ಕಿರ್‌ಚಾಡಿಯಾ? ಸುಮ್ಮಂಗಿರು. ಬೀಸ್ತಿರ್ವ ಬಿರ್‌ಗಾಳಿಗೆ ನಿನ್ನದೊಂದು ಅವತಾರ.

ದಾನಮ್ಮ: ಕರ್ಮ.. ನಿಮ್ಮ ಕಟ್ಟಿಕಂಡ್ ಇರ್‌ದಕ್ಕೆ ಈ ಮನೆ ಬುಡಸಮೇತ ಎಕ್ಕುಟ್ಟು ಹೊಣ್ಕಕು ಕಂಡದೆ. ಥೂ... ಎಂಥಾ ಗಂಡ್ ಜನಂಗ ಏನೋ... ಈ ಗಾಳಿಗೆ ಹೆದ್ರಿಕಂಡ್ ಮುರ್‌ಟಿಕಂಡ್ ಕುದ್ದಳೊರಿ. ಮನೆ ಹೊಣ್‌ಕಿ ಬೀಳಿಕೆ ಮುಂದೆನೇ ಅದರ ಕಡ್ದು ಹಾಕಕು ಅಂತ ಗ್ಯಾನ ಬೇಡ ನೀವ್ಗೆ.

ಸೀಗೇಗೌಡ: ಗಾಳಿ ಮನೇಗೆ ವಿರುದ್ಧ ದಿಕ್ಕ್‌ಲಿ ಬೀಸ್ತಾ ಉಟ್ಟು. ಅಕಸ್ಮಾತ್ ಮರ ಬಿದ್ದರೂ ಮನೆಗೆ ಎಂಥದೂ ಆಕಿಲೆ. ಸುಮ್ಮನೆ ಇರ್.

ದಾನಮ್ಮ: ನೀವ್ ಹಾಂಗೆ ಹೇಳಿಕಂಡ್ ಸುಮ್ಮನೆ ಇರಿ. ತಲೆಮೇಲೆ ಹೊಣ್‌ಕಿ ಬೀಳ್‌ಕನ ಅಲ್ಲ ಗೊತ್ತಾದು. ನೀವು ಈ ಬಿರುಗಾಳಿ ಹಾಂಗೆನೆ. ಎಷ್ಟು ಬೈದರೂ ಮಾನ ಇಲ್ಲೆ. (ಗಂಡ, ಮಾವನ ಮೇಲೆನ ಕೋಪನ ಗಾಳಿ ಮೇಲೆ ಹಾಕಿದೆ)

ಸುಬ್ಬಯ್ಯ: ಬೇಡ ದಾನಮ್ಮ ಹಾಂಗೆಲ್ಲ ಮಾತಾಡ್ ಬೇಡ. ನಾವ್ಗೂ ಕಂಡದೆ.

ದಾನಮ್ಮ: (ಗಾಳಿಗೆ) ನಿನ್ನ ಹುಲಿ ಬಡಿಯ.. ಸುಟ್ಟದು... ಎಲ್ಲಾ

ಬುಟ್ಟ್ ನನ್ನ ಮನೆ ಮೇಲೆನೆ ನಿನ್ನ ಅವತಾರ ತೋರ್ಸಿಕೆ ಬಂದಳಾನ? ಇರ್ದು ಮೂರ್ಕಾಸ್‌ನ ತೋಟಗದ್ದೆ. ಇಷ್ಟಗಲ ಮನೆ. ಇದರ ಮೇಲೆ ಹೊಟ್ಟೆ ಉರ್ಕಂಡ್ ಕೊಣ್ಕಂಡ್ ಬಂದಳಾನ..? ಥೂ... ನಿನ್ನ ಕಣ್ಣ್ ಪೊಟ್ಟಾಗಿ ಹೋಕೆ!

ಸುಬ್ಬಯ್ಯ: ನೀ ಆರ್ ಸ್ವಲ್ಪ ಹೇಳ್ ಅಪ್ಪ. ಅದೆಂತಕೆ ಇಷ್ಟೊಂದು ಬೊಬ್ಬೆ ಹೊಡ್ಯತಾ ಇರ್ದು ಅಂತ?

ಸೀಗೇಗೌಡ: ಏಯ್... ಇದೆಂಥಾ ಹೊಸ್ತಾ? ಬಾಯಿ ಬೇನಾಕನ ಮುಟ್ಟ ಬೊಬ್ಬೆ ಹೊಡ್‌ದದೆ. ಆಮೇಲೆ ಅದೇ ಸುಮ್ಮಂಗಾದೆ. ನೀ ಸುಮ್ಮಂಗಿರು.

ದಾನಮ್ಮ: (ಸುಬ್ಬಯ್ಯನ ನೋಡಿಕಂಡ್) ಆ.. ಹ... ಹ...ಹ... ನಿನ್ನ ಸುರ್ಪನೋ... ನೀನೋ.. ಎಷ್ಟು ಪೊರ್ಲುಟ್ಟು! ಮೈಮೇಲೆ ಗಡ್ಡ ಮೀಸೆ ಹಂಗೆ ಎಂಥದ್ದೆಲ್ಲಾ ಬೆಳ್ಸಿಕಂಡ್ ನೋಡಿಕೆ ಎರಡು ಕಣ್ಣ್ ಸಾಲದ್.. ಆಹ.. ಆಹಾಹಾ...

ಸುಬ್ಬಯ್ಯ: ಏಯ್.... ನಿಂಗೆ ಸುಮ್ಮಂಗಿರಿಕೆ ಆದ್ಲೆನಾ? (ದಾನಮ್ಮನ ತಡಿಯಕೆ ಹೋದೆ, ದಾನಮ್ಮ ಅವನ ದೂಡಿ ಹಾಕಿ ಬೈಯದರ ಮುಂದುವರ್ಸಿದೆ)

ದಾನಮ್ಮ: ಸುಮ್ಮಂಗೆ ಪುಕ್ಲಿ ಮುಚ್ಚಿಕಂಡ್ ಬಂದ ದಾರೀಲಿ ಬಂದಂಗೆ ತಿರ್ಗಿ ಹೋದ್ಯಾ.. ಇಲ್ಲೆ ನಿನ್ನ ಮಾನ ಮರ್ಯಾದೆನ ಇನ್ನೂ ಸ್ವಲ್ಪ ತೆಗ್ಯಕಾ? ನಿಂಗೆ ಬೀಸಿಕೆ ಎಷ್ಟು ತಾಕತ್ತು ಉಟ್ಟೋ ಅಷ್ಟು ಬೀಸ್. ಇದರ್‌ಂದ ನನ್ನ ಕೂದಲು ಅಲ್ಲಾಡಿಕಿಲೆ ನನ್ನ ಸೆರಗೂ ಹಾರಿಕಿಲೆ ತಿಳ್ಕ.

ಸೀಗೇಗೌಡ: ಅಲ್ಲಾ ಇಂಥ ಹೊತ್ತ್‌ಲಿ ನೀ ಯಾಕೆ ಅಲ್ಲಿಗೆ ಹೋದ್. ಅವಳ ತಡಿಯಕೆ ಹೋಗ್ ಬೇಡಾಂತ ಹೇಳ್ತ್‌ಲೆನಾ ನಾ. ಇದ್ಕೆ ಸಿಟ್ಟು ತುಂಬಾ. ಹುಣ್ಣಿಮೆಗೊಮ್ಮೆ ಅಮವಾಸೆಗೊಮ್ಮೆ ಇದರ ಪಿತ್ತ ಹೀಂಗೆ ನೆತ್ತಿಗೆ ಏರ್‌ದೆ. ಸುಮ್ಮನೆ ಬುಟ್ಟು ಬುಟ್ಟುರೆ ಮತ್ತೆ ಇನ್ನೊಂದು ತಿಂಗ ಬರುವವರೆಗೆ

ನೆಟ್ಟಂಗಿದ್ದದೆ ಸುಮ್ಮನೆ... ಬಾ ಇತ್ತ.

ದಾನಮ್ಮ: ಇದೊಂದು ಸುಟ್ಟ ಮರ ಇನ್ನೂ ಬೀಳದೆ ನಿತ್ತ್‌ಕಂಡುಂಟು. ಅದ್ಕೆ ಸರಿಯಾಗಿ ಅದರ ಕಡ್ಯದೇ ಚಂದ ನೋಡ್ವ ಪೆದ್ದ ಗಂಡ ಇವೊಬ್ಬ! ಅದಕ್ಕಿಂತಲೂ ಮಿಗಿಲಾಗಿ ಇದರ ಬೇರ್‌ನ ಮೇಲೆ ಮನೆ ಕಟ್ಟಿಸ್ಯಳಲ್ಲಾ.. ಈ ಮಾವ...! ನನ್ನ್ ನಾಡ್‌ನ ಜನರ ಕೇಳ್ದೆ, ಅವುನೂ ಪುಕ್ಕಲ್‌ಗ... ಇವರೆಲ್ಲರ ಹಾಂಗೆ ನಾ ಹೆದರಿಕಂಡ್ ಮುರ್‌ಟಿಕಂಡ್ ಮೂಲೆಲಿ ಕುದ್ದ್ ನಿನ್ನ ಅವತಾರಕ್ಕೆ ನಾ ನಡ್‌ಗಿಕಂಡ್ ಹೋನೆ ಅಂತ ತಿಳ್ ಕಂಡನಾ..? ಬೀಸ್.. ಬೀಸ್.. ಎಷ್ಟು ದಿನ ಬೀಸಿಯಾಂತ ನಾನೂ ನೋಡಿಯೇ ಬುಟ್ಟನೆ. ಒಬ್ಬ ಮರಟ್ ಹೆದ್ರಿಸಿತ್ ಗಡ. ಇನ್ನೊಬ್ಬ ಸತ್ತ್ ಹೆದ್ರಿಸಿತ್‌ಗಡ, ಮೂರ್ನೆಯವ ಹೂಸ್‌ಬುಟ್ಟು ಹೆದ್ರಿಸಿತ್‌ಗಡ. ನಾನೂ ನೋಡ್ತಾ ಒಳೆ ಮೂರು ದಿನಂದ ಹೇಳುವುವು ಕೇಳುವವ್ ಯಾರೂ ಇಲ್ಲೇಂತ ಬೇಕಾಬಿಟ್ಟಿ ನಿಂಗೆ ಬೇಕಾದಾಂಗೆ ಬೀಸ್ತಾ ಒಳ ಥೂ... ನಿನ್ನ ಬಾಯ್‌ಗೆ ಮಣ್‌ಹಾಕ. (ದಡದಡಾಂತ ಬೈದ್ ಒಳಗೆ ಹೋದೆ. ನಿಧಾನಕ್ಕೆ ಗಾಳಿ ಕಡಿಮೆ ಆಗಿ ನಿಂತ್ ಹೋದೆ. ರಂಗದ ಮೂಲೆಲಿದ್ದ ಹೆಬ್ಬಲಸ್ನ ಮರನೂ ಸ್ವಲ್ಪ ವಾಲಿದಾಂಗೆ ನಿತ್ತ್ ಬುಟ್ಟದೆ. ಅದರ ಬೇರ್‌ಗ ಜೇಡರ ಹುಳದಂಗೆ ಕುತ್ತ ನಿಂತ್‌ಕಂಡಿದ್ದದೆ. ಮನೆಯ ಗೋಡೆಲಿ ಸಿಮೆಂಟ್ ಇಟ್ಟಿಗೆ ಉದುರಿದ್ದರೂ ಮಾಡು ಬೀಳದೆ ಹಾಂಗೆ ನಿಂತುಟು! ಕಸಕಡ್ಡಿ ಗಾಳಿಗೆ ಹಾರಿ ಬಂದ್ ಊರ್‌ನೆಲ್ಲಾ ಹಾಳ್ ಮಾಡ್‌ತ್ತ್)

ಸುಬ್ಬಯ್ಯ: ಅಪ್ಪಾ ನೋಡ್‌ದಾ...? ಇವಳ ಅವತಾರಕ್ಕೆ ಬಾಯಿ ಬಡ್ಯದಕ್ಕೆ ಬಿರುಗಾಳಿನೂ ಹೆದರಿಕಂಡ್ ಓಡಿಹೋತ್.

ಸೀಗೇಗೌಡ: ಅಲಲೆ.... ಹೌದಲ್ಲ... ಸುಬ್ಬಯ್ಯ. ಆದರೂ ಅದ್ ತುಂಬಾ ಗಟ್ಟಿಗಿತ್ತಿ. ನಾವ್ ಊರ್ನ ಜನಂಗನೇ ಹೆದ್ರಿ ಬಾಲ ಮುರ್ಕಂಡ್ ಮನೆ ಒಳಗೆ ಕುದ್ದಿರ್ ಕಾಕನ ಇದ್ ಒಂದೇ

ಹೊರಗೆ ಬಂದು ಬೊಬ್ಬೆ ಹಾಕಿತಲ್ಲಾ. ಶಹಬಾಸ್.. ನನ್ನ ಸೊಸೆ (ಮೀಸೆ ತಿರ್‌ಗಿಸಿದೆ)

ಸುಬ್ಬಯ್ಯ: ಬಾಯಿ ಬುಟ್ಟರೆ ಕಿಚ್ಚಿನೇ ಕಾರ್‌ದೆ. ಅವ್‌ಳ್ ಬೈಯ್ಯದರ ಕೇಳ್ರೆ ಕರ್‌ಳಿಗೆ ಕೊಳ್ಳಿ ಇಸಿದಾಂಗೆ ಅದೆ. ಒಂದು ರೀತಿಲಿ ಗಯ್ಯಾಳಿನೆ. ಇದರ ಬಾಯಿಗೆ ಗಾಳಿಮಳೆನೂ ಹೆದರ್ ದೇಂತಾತ್. ಅದರ ಮಾತಿಗೂ ಎಂಥಾ ಶಕ್ತಿ ಉಟ್ಟು. ಎಷ್ಟಾರೂ ನನ್ನ ಹೆಣ್ಣಲ್ಲಾ.. ಆದರೂ ಹೆಣ್ಣು ಗೂಡೆಗಳಿಗೆ ಇಷ್ಟ್ ಸಿಟ್ಟು ಇರಿಕಾಗದ್. (ತಿರುಗಿ ನೋಡ್ದೆ ಗಾಬರಿಂದ) ಅಪ್ಪಾ... ಇಲ್ಲಿ ನೋಡು.

ಸೀಗೇಗೌಡ: (ಅಷ್ಟೇ ಹೆದರಿಕಂಡ್) ಎಂಥದ್ದು ಸುಬ್ಬಯ್ಯ ಎಂತಾತ್?

ಸುಬ್ಬಯ್ಯ: ಆ ಹೆಬ್ಬಲ್‌ಸ್ನ ಮರ ನೋಡು ಹೇಂಗೆ ಮಾಲಿಕಂಡ್ ನಿಂತುಟು ಮನೆ ಮೇಲೆ ಬಿದ್ದದಾ ಹೇಂಗೆ... ದೇವ್ರೇ..

ಸೀಗೇಗೌಡ: ಹೌದಲ್ಲ ಸುಬ್ಬಯ್ಯ... ಈಗ ಎಂಥ ಮಾಡ್ದು ಹೇಳ್? ಆಂ ಒಂದು ಕೆಲ್ಸ ಮಾಡುಮ ಆ ಮಾರ... ಸಿದ್ದಂಗೆ ಹೇಳಿ ಮರನ ಕಡ್ಸಿ ಬುಡೋಮನ?

ಸುಬ್ಬಯ್ಯ: ಹಾಂ.... ಹೌದೌದು.. ಇಲ್ಲರೆ ಅದ್ ನಮ್ಮನ್ನೇ ಕಡ್‌ದ್ ಬುಟ್ಟ್‌ದೆ ಅಷ್ಟೇ.

ಸೀಗೇಗೌಡ: ಪೋಯಿ... ಪೋಯೀ.... ಹೋಗಿ ಹೇಳಿ ಬರ್‌ಮಾ.. (ಇಬ್ಬರೂ ಹೋದವೆ)

ದೃಶ್ಯ–6

(ಗದ್ದೆ ಪುಣಿ ಹಸುರು ಹಸುರು ಗದ್ದೆ. ಒಂದು ಬದಿಲಿ ಒಂದು ಬೋರ್ಡು. ಅದರ್ಲಿ "ಕರ್ನಾಟಕ ಸರ್ಕಾರ", "ವ್ಯವಸಾಯ ಇಲಾಖೆ", "ಆಧುನಿಕ ಬೇಸಾಯ ಪದ್ಧತಿ", "ಸಾಂದ್ರ ಬೇಸಾಯ ಕ್ರಮ" ತೇಂಳುವ ಅಕ್ಷರ ಇರುವ ಬೋರ್ಡು ಕುತ್ತಿಕಂಡು ಉಟ್ಟು. ಮಾರ ಅವನ ಗದ್ದೆ ಕೆಲ್ಸ ಮಾಡ್ತಾ ಉಟ್ಟು. ಇದ್ದಕ್ಕಿದ್ದಂಗೆ ಆ ಬೋರ್ಡು ನೋಡಿ ತಲೆ ಕೆಟ್ಟದೆ ಮಾರಂಗೆ. ಹಕ್ಕಲೆ ಬಂದ್ ಸರಿಯಾಗಿ ನೋಡ್ದೆ)

ಮಾರ: ಏಯ್... ಈ ಬೋಲ್ಡು ಕರಿಯಾನ ಗದ್ದೆಲಿ ಇತ್ತಲ್ಲಾ, ಕರಿಯನ ತಲೆ ಮೇಲೆ ಕುದ್ದಿದ್ದ ಗೂಬೆನ ಯಾರೋ ನನ್ನ ತಲೆಗೆ ದಾಟಿಸ್ಯಳ! ಸುಟ್ಟ ದನ ಮೇಯ್ಸುವ ಮಕ್ಕಳ್ದೇ ಈ ಕೆಲ್ಸ! ಇದ್ ಇದ್ದರೆ ಅಪಶಕುನ. ಆ ಜಾಗೆಲಿ ಮಳೆನೂ ಬಾದ್ಲೆ... ಬೆಳೆನೂ ಬಾದ್ಲೆ ಅಂತೇಳುವೆ. ಇರ್ಲಿ ಇದ್ಕೆ ಒಂದು ಗತಿ ಕಾಣ್‌ಸಿನೆ ಈಗ. (ಮಾರ ಪುನಃ ಆ ಬೋರ್ಡ್‌ನ ತಕಂಡ್ ಹೋಗಿ ಕರಿಯನ ಗದ್ದೆಗೆ ಕುತ್ತಿ ಬರಕು ಅಂತ ಮನಸ್ಸಾದರೂ ತಾಳ್ಮೆ, ಪುರಸೊತ್ತ್ ಇಲ್ಲದಕ್ಕೆ ಕೋಪಲಿ ಅಲ್ಲೇ ಹಕ್ಕಲಿದ್ದ ಹಳ್ಳದ ಬದಿಗೆ ತೆಗ್ದು ಬಿಸಾಡ್‌ದೆ. ಮತ್ತೆ ಅವನ ಕೆಲ್ಸ ಮಾಡಿಕಂಡ್ ಹೋದೆ. ಅಷ್ಟೊತ್ತಿಗೆ ಶಂಕರಪ್ಪ ಅಲ್ಲಿಗೆ ಬಂದದೆ. ಅವ ಕುತ್ತಿದ ಬೋರ್ಡ್ ಕಾಣದಾಕನ ಮಾರನ ವಿಚಾರಿಸಿದೆ)

ಶಂಕರಪ್ಪ: (ಆಚೀಚೆ ನೋಡಿಕಂಡ್) ಏಯ್ ಮಾರ ಬಾ ಇಲ್ಲಿ.

ಮಾರ: ಎಂಥ ಶಂಕ್ರಣ್ಣ?

ಶಂಕರಣ್ಣ: ಇಲ್ಲಿ ಬೋರ್ಡ್ ಇತ್ತಲ್ಲ ಎಲ್ಲಿ ಅದ್?

ಮಾರ: ಅಲ್ಲಾ ಅಣ್ಣಾ... ಯಾರೋ ಘಟಿಂಗ ಮಕ್ಕ ನನ್ನ ಗದ್ದೆಗೆ ತಂದ್ ಹೆಟ್ಟಿಸ್ಯಳ. ಅವ್ಕೆ ಸ್ವಯೆ ಉಟ್ಟಾ... ಹೇಳ್ ಶಂಕ್ರಣ್ಣಾ..

ಶಂಕರಣ್ಣ: ಹೆ.. ಹೆ... ಮಾರ... ಮಾರ ಅದರ ಬೇರೆ ಯಾರ್ ಕುತ್ತಿ ಇಸಿತ್ಲೆ ನಾನೇ ಕುತ್ತಿದ್.

ಮಾರ: ವಾ... ನೀನಾ ಶಂಕ್ರಣ್ಣಾ... ನೋಡು ಅದರ ಆ ಹಳ್ಳದ ಬದಿಲಿ ತೆಗ್ದ್ ಇಸಿಯೋಳೆ ಹೋಗಿ ತಕ. (ಅವ ಅವನ ಕೆಲ್ಸ ಮಾಡಿಕೆ ಶುರು ಮಾಡ್ದೆ)

ಶಂಕರಪ್ಪ: (ಓಡಿ ಹೋಗಿ ಬೋರ್ಡ್ ತಕಂಡು ಬಂದ್) ಅಲ್ಲಾ ಮಾರ ಇದರ ಹಳ್ಳಕ್ಕೆ ಬಿಸಾಡಿ, ತೆಗ್ದ್ ಇಸಿಯೋಳೆ ಅಂತೇಳಿಯಲ್ಲಾ?

ಮಾರ: ಅದೆಲ್ಲಾ ನಿಂಗ್ಯಾಕೆ ಶಂಕರಣ್ಣ. ಏನೋ ಒಂದು ಒಟ್ಟಾರೆ ನನ್ನ ಗದ್ದೇಲಿ ಆ ಬೋರ್ಡ್‌ನ ಹೆಟ್ಟ್‌ಬೇಡ.

ಶಂಕರಪ್ಪ: ಮಾರಾಯ ನಿನ್ನ ದಮ್ಮಯ್ಯ ಇಂದೊಂದು ದಿನ ಈ ಗದ್ದೇಲಿ ಕುತ್ತಿ ಇಸಿನೆಪ್ಪ..

ಮಾರ: ಒಂದು ದಿನ ಅಲ್ಲ.. ಒಂದು ಗಳಿಗೆನೂ ಅದ್ ಇಲ್ಲಿ ಬೇಡ.

ಶಂಕರಪ್ಪ: ಮಾರ...ಮಾರ... ಸ್ವಲ್ಪ ನನ್ ಮಾತ್ ಕೇಳ್ ಮಾರಾಯ. ಇಂದ್ ವ್ಯವಸಾಯ ಇಲಾಖೆಯವು "ಫೀಲ್ಡ್ ಡೇ" ಅಂತ ಇಸಿಕಂಡಳ ಮಾರಾಯ! ತುಂಬಾ ರೈತಂಗ, ತಾಶೀಲ್ದಾರ್, ಬಿಡಿಓ, ಎಲ್ಲಾ ಇಲ್ಲಿಗೆ ಬಂದವೆ. ಆಗ ಆ ಕರಿಯನ ಗದ್ದೆ ತೋರ್ಸಿರೆ ನನ್ನ ಕೆಲ್ಸ ಹೋದೆ ಮಾರಾಯ. ನಿನ್ನ ದಮ್ಮಯ್ಯ (ಅಂಗಲಾಚಿದೆ)

ಮಾರ: ಓ ದೇವ್ರೇ... ಆ ತಾಶೀಲ್ದಾರ್, ಬಿಡಿಓ ಎಲ್ಲಾ ನನ್ನ ಗದ್ದೆಗೆ ಬಾದು, ಬೋರ್ಡ್ ನೋಡಿ ಆ... ಇಂವ ಭಾರೀ ಲಾಯ್ಕ ಬೆಳ್‌ದುಟು. ಇದ್ ಎರಡು ಬೆಳೆ ತೆಗ್ಯೆವ ಗದ್ದೆಂತ ಹೇಳಿ, ಹೆಚ್ಚು ಕಂದಾಯ ಕಟ್ಟಿಕೆ ಹಾಕಿರೆ ನನ್ನ ಕತೆ ಏನ್?

ಯಾರಿಗೆ ಬೇಕು ಇದೆಲ್ಲಾ..?

ಶಂಕರಪ್ಪ: ಹಾಂಗೆಲ್ಲ ಆದ್ಲೆ ಮಾರಾಯ ನಾ ನೋಡಿಕಂಡನೆ.

ಮಾರ: ಆದೆನಾ ಇಲ್ಲೆನಾ..? ಅದೆಲ್ಲಾ ನಿಂಗೆ ಯಾಕೆ? ನಿನ್ನ ಬೋರ್ಡಿಗೆ ಬೆಂಕಿ ಹಾಕಿತ್. ನಾನೇ ನಿಂಗೆ ದಮ್ಮಯ್ಯ ಹಾಕಿನೆ. ನಿನ್ನ ಬೋರ್ಡ್‌ನ ತಕಂಡ್ ಹೋಗು. ಅವರ ಕರ್ಕಂಡ್ ಇತ್ತ ಕಡೆ ಬರ್ಲೇ ಬೇಡ ನಿನ್ನ ದಮ್ಮಯ್ಯ.

ಶಂಕರಪ್ಪ: ಏನೂ ಆದ್ಲೆ ಮಾರ... ಇದರ ಇಂದೊಂದ್ ದಿನ ಕುತ್ತಿನೆ (ಶಂಕರಪ್ಪ ಬೋರ್ಡು ಕುತ್ತಿಕೆ ಬಂದದೆ. ಮಾರ ಅವನ ತಡ್‌ದದೆ)

ಮಾರ: ಬೇಡ ಶಂಕರಪ್ಪ... ನಾ ಹೇಳ್‌ದಷ್ಟೂ ನೀ ಕೇಳದಿದ್ದರೆ ಈ ಸರ್ತಿ ಅದರ ತೆಗ್ದು ದೂರ ಹಳ್ಳಕ್ಕೆ ಬಿಸಾಡಿನೆ ನೋಡ್. (ಶಂಕರಪ್ಪ ಮಾರ ಇಬ್ಬರೇ ಜಗಳ ಮಾಡಿಕಂಡ್ ಕೂಗಾಡಿ ಕಂಡ್ ಇದ್ದವೆ. ಆಚೆ ಬದಿಲಿ ಒಂದಷ್ಟು ಗಂಡು ಜನಂಗ, ಇದರ ನೋಡಿ ಓಡಿ ಬಂದು ವಿಚಾರ್ಸುವೆ)

ಈರಿ: ಏಯ್... ಏಯ್... ಎಂಥಾ ಮಾರ ಇಷ್ಟೊಂದು ಆರ್ಭಟ.

ಮಾರ: ನೋಡು ಬೇಡ ಬೇಡಾಂತೇಂಳ್ರೂ... ಅದೆಂಥದೋ ಬೋಲ್ಡು ಕುತ್ತಿನೇಂತ ಹೇಳ್ದೆ ನೋಡು..

ಈರಿ: ಎಂಥ ಶಂಕರಣ್ಣ ಇದೆಲ್ಲಾ..?

ಶಂಕರಣ್ಣ: ನೋಡು ಈರಿ. ಇಂದೊಂದು ದಿನ ಈ ಬೋರ್ಡುನ ನಿನ್ನ ಗದ್ದೇಲಿ ಕುತ್ತಿನೇಂತ ಹೇಳಿರೆ ಜಗಳಕ್ಕೆ ಬಂದದೆ ನೋಡು.

ಮಾರ: ಎಂತೇಳ್ದ... ನಾ... ಜಗಳಕ್ಕೆ ಬಂದದಾ..?

ಶಂಕರಪ್ಪ: ನೋಡು.. ನೋಡು.. ತಿರ್ಗ ಅದನ್ನೇ ಹೇಳ್ದೆ..

ಈರಿ: ಅವ ಬೇಡಾಂತ ಹೇಳ್ದ ಮೇಲೆ ಮುಗ್‌ತ್. ಸುಮ್ಮಂಗೆ

ಯಾಕೆ ಜಗಳ ಮಾಡ್ದು?

ಶಂಕರಪ್ಪ: ಆತ್ ಬುಡಿ ನಾ ಬೇರೆ ಕಡೆ ಕುತ್ತಿನಿ.

ರುದ್ರಿ: ಬೇರೆ ಕಡೆ ಕುತ್ತಿನೇಂತೇಳ್ಯ... ಎಲ್ಲಿ ಹೋಗಿ ಕುತ್ತೀಯಾ?

ಶಂಕರಪ್ಪ: ಎಲ್ಲಾರ್ ಒಂದು ಕಡೆ ಹೋಗಿ ಕುತ್ತಕೇ ಅಲ್ಲಾ..

ಕಾಳಿ: ಹಾಂಗೇಳ್ರೆ...? ಅದ್ಯಾಕೆ.. ಕುತ್ತೀಯೇ ಕುತ್ತುಕು ನಿಂಗೆ?

ಶಂಕರಪ್ಪ: ಯಾಕೇಂತೇಳ್ರೆ ಇಂದ್ 'ಫೀಲ್ಡ್ ಡೇ' ಉಟ್ಟು ಅದ್ಕೆ.

ಸುಬ್ಬಮ್ಮ: ಹಾಂಗೇಂತೇಳಿ ನಿಂಗೆ ಬೇಕಾದಂಗೆ ಬೇರೆಯವರ ಗದ್ದೇಲಿ ಅದರ ಕುತ್ತಿ ಬಾದಾ?

ಶಂಕರಪ್ಪ: ಅದೆಲ್ಲಾ ನಂಗೆ ಗೊತ್ತಿಲ್ಲೆ. ಇಂದ್ ದೊಡ್ಡ ದೊಡ್ಡ ಅಧಿಕಾರಿಗೆಲ್ಲ ಇಲ್ಲಿಗೆ ಬಂದವೆ.

ನಾಗಮ್ಮ: ಒಳ್ಳೆ ಕಥೆ ಆತಲ್ಲ ಇದ್. ಅವ್ ಬಂದರೆ ನಾವ್ಗೇನಾಕು?

ಈರಿ: ನಮ್ಮ ಗದ್ದೇಲೇ ನಿಂಗೆ ಬೋರ್ಡು ಕುತ್ತಿಕೆ ಜಾಗ ಸಿಕ್ಕಿದಾ?

ಶಂಕರಪ್ಪ: ಏಯ್ ಸುಮ್ಮಂಗೆ ನಿತ್ತ್‌ಕಾ. ನೋಡ್ಯಳೆ ನಿನ್ನ, ಆಹಾಹಾ... ಅಲ್ಲಾ ನಾ ನಿನ್ನ ಗದ್ದೆಲಿ ಕುತ್ತಿನೇಂತ ಹೇಳ್ದೆನಾ? ಯಾವುದೋ ಯಾರೋ ಗದ್ದೇಲಿ ಕುತ್ತಿನೇಂತ ಹೇಳ್ದಪ್ಪಾ.. ಅದ್ಕೆ ನಿಂಗೆ ಯಾಕೆ ಪುಕ್ಲಿ ಉರಿ ಯೋಕು?

ದಾನಮ್ಮ: ಎಂಥ ಹೇಳದ್ದ ನೀ? ಪುಕ್ಲಿ ಉರಿಯೋದಾ? ಈಗ ನಿನ್ನ ಪುಕ್ಲಿನ ಉರ್ಸುವೆ ನೋಡು. ಅದು ಯಾವ್ದೇ ಗದ್ದೆನೇ ಆಗಲಿ ನೀ ಹೇಂಗೆ ಕುತ್ತಿಯಾಂತ?

ಶಂಕರಪ್ಪ: ಹೇಂಗೆ ಕುತ್ತಿನಂತನಾ? ಬಾ ನೋಡು ಹೆಂಗೆ ಕುತ್ತಿನೇಂತಾ?

ದಾನಮ್ಮ: ಇವ ಯಾವ ಅಂಡೆ ಪಿರ್ಕಿ ಇವ. ಇವಂಗೇನಾರ್ ಮಾನ ಮರ್ಯಾದೆ ಉಟ್ಟಾ ಇಲ್ಲೇನಾ? ಅಷ್ಟೊಂತ್ತ್‌ಂದ ಹೇಳ್ತಾನೇ ಒಳೆ. ಇವನ ರಾಗ ಮುಗಿಯದ್ಲೆ ಅಲ್ಲ.

ರುದ್ರಿ: ನೀವೆಂಥದ್ದು ಅವನೊಟ್ಟಿಗೆ ಕಣಿ ಕೇಳ್ದು... ಬೊಡ್ಯನಿ ನಾಕು.

ದಾನಮ್ಮ: ಏನು ನೋಡ್ತಾ ಒಳರಿ. ಕೊಡಿ ಎರಡು. ಅವನ ಮುಸುಂಡು ಅಪ್ಪಚಿ ಆಗಿ ಕೈ ಕಾಲ್ ಮುರಿಯಲಿ. ಬೋಳಿ ಮಗನೆ, ಅನ್ನ ದಂಡ ಭೂಮಿ ಬಾರಕ್ಕೆ ಇರುವವ ನೀ, ಸರಕಾರದ ಕೆಲ್ಸನ ನೆಟ್ಟಂಗೆ ಮಾಡಿಕಾಗದೆ ಕಳ್ಳು ಬೇರೆ ಮಾರಿಯಾ? ನಿನ್ನ... (ಎಲ್ಲವೂ ಸೇರಿ ಶಂಕರಪ್ಪನ ಬಡ್‌ದವೆ. ಶಂಕರಪ್ಪ ಎದ್ದನಾ ಬಿದ್ದನಾಂತ ಓಡಿ ಹೋದೆ. ಎಲ್ಲವೂ ಓಡ್ಸುವೆ. ಅಷ್ಟೊತ್ತಿಗೆ ಅಲ್ಲೇ ಮೇಯ್ತಿದ್ದ ದಾನಮ್ಮನ ಗೂಳಿಗ ಎರಡು ಬಿಳಿ ಬಣ್ಣದ ಬೋರ್ಡು ಹೊತ್ಕೊಂಡು ಓಡುದರ ನೋಡಿ ಯಾವುದೋ ಪ್ರಾಣಿ ಅಂತ ತಿಳ್ಕಂಡು ಕಿವಿ ನಿಮಿರಿಸಿ ಬಾಲ ಎತ್ತಿಕಂಡ್ ಬುಸ್ ಬುಸ್ ಅಂತ ಶಂಕ್ರಪ್ಪನ ಕಡೆಗೆ ನುಗ್ಗಿ ಓಡ್ಸಿಕೆ ಶುರು ಮಾಡ್ದೆ. ಅದು ದಾನಮ್ಮನ ಹೋರಿ. ದಾನಮ್ಮ ಅದರ ಹಿಂದೆ ಹಿಡ್ಕಣಿಕೆ ಓಡ್ದೆ. ಇದು ದಾನಮ್ಮನೇ ಹೋರಿನ ನನ್ನಕ್ಕಲೆ ಬುಟ್ಟು ಓಡ್ಸುತಾ ಉಟ್ಟುಂತ ತಿಳ್ಕಂಡ್ ಶಂಕರಪ್ಪ ಎದ್ದು ಬಿದ್ದು ಗದ್ದೆ ಪುಣಿಲಿ ಓಡ್ದೆ. ಆಗ ಮುಗ್ಗರಿಸಿ ಬಿದ್ದು

ದೃಶ್ಯ–7

(ಕಿರ್‌ಗೂರ್‌ನ ಒಂದು ಭಾಗ. ಜೀಪ್‌ನ ಸದ್ದಾದೆ ಅದರ ಕೇಳಿ ಅಲ್ಲಿದ್ದವೆಲ್ಲಾ ಜಾಗ ಖಾಲಿ ಮಾಡ್ವೆ ಯಾರೂ ಕಾಂಬದ್ಲೆ. ಆಮೇಲೆ ತಾಶೀಲ್ದಾರ್, ಬಿಡಿಓ ಅಧಿಕಾರಿ, ಇಬ್ಬರ್ ಪೇದೆಗ ಬಂದವೆ. ಇಡೀ ಕಿರಗೂರು ಜನ ಇಲ್ಲದೇ ಖಾಲಿ ಖಾಲಿ ಅನ್ನ್‌ಸ್ತ ಉಟ್ಟು)

ತಾಸೀಲ್ದಾರ: ಇದೆಂಥದ್ದು ಇದ್. ಇಡೀ ಊರ್‌ಲಿ ಒಂದು ನರಪಿಳ್ಳೆನೂ ಕಾಂಬೊದ್ಲೆಲ್ಲ. ಹೇಳ್ದಾಂಗೆ ಇಂದೇ ಅಲ್ಲಾ 'ಫೀಲ್ಡ್ ಡೇ' ಇರ್ದು.

ಸಹಾಯಕ 1: ಹೌದು ಸರ್. ಅನುಮಾನವೇ ಇಲ್ಲೆ. ಇಂದ್ ಸಂಜೆ–4 ಗಂಟೆಗೆ ನೋಡಿ ಬೇಕಾರೆ. (ಹೇಳ್ತಾ ಕೈಲಿದ್ದ ಫೈಲು ತೋರ್‌ಸಿದೆ)

ಬಿಡಿಓ: ಚಪ್ಪರ ಗಿಪ್ಪರ ಎಂತದೂ ಕಾಂಬೋದೇ ಇಲ್ಲೆಲ್ಲ. ಅದ್ ಸಾಯ್‌ಲಿ 'ಫೀಲ್ಡ್ ಡೇ' ತೇಂಳ್ದ ಮೇಲೆ ಒಂದು ತೋರಣನಾದ್ರೂ ಬೇಡನಾ?

ಸಹಾಯಕ 2: ವಿಚಾರಿಸೋಮ ತೇಂಳ್ರೆ ಇಲ್ಲಿ ಯಾರೊಬ್ಬನೂ ಕಾಣ್ತಿಲ್ಲೆ ಸಾರ್.

ಬಿಡಿಓ: ಏ..... ಹೋಗಿ ಅತ್ತ ಇತ್ತ ಸ್ವಲ್ಪ ಓಡಾಡಿ ನೋಡಿ (ಸಹಾಯಕರು ಹುಡುಕಿಕಂಡ್ ಬೇರೆ ಬೇರೆ ದಾರಿಲಿ ಹೋದವೆ)

ತಾಸೀಲ್ದಾರ: ಇದ್ ಕಿರ್‌ಗೂರ್ ಹೌದಾ ಅಲ್ಲನಾಂತ ನಂಗೆ ಅನುಮಾನ ಬಂದ್ ಬುಟ್ಟುಟು.

ಬಿಡಿಓ: ಇಲ್ಲೆ ಇಲ್ಲೆ ಬುಡಿ ಸಾರ್. ನಂಗೆ ಲ್ಯಾಕ್ ಗೊತ್ತುಟು. ಇದ್

ಕಿರ್‌ಗೂರೇ. ಆದರೆ ನಂಗೆ ಅನ್ಸುದ್ ಏನೂಂತೇಳ್ರೆ ಈ ಊರ್‌ಲಿ ಕರ್ಫ್ಯೂ ಗಿರ್ಫ್ಯೂ ಏನಾರೂ ಉಟ್ಟಾ.. ಹೇಂಗೆ?

ತಾಸೀಲ್ದಾರು: ಹೌದೌದು.. ನೀವು ಹೇಳ್ದ ಮೇಲೆ ನಂಗೂ ಹಾಂಗೆ ಅನ್ನುಸ್ತಾ ಉಟ್ಟು.

ಬಿಡಿಓ: ಅದ್ಸರಿ. ಹುಡ್ಕುವೆ ಅಂತೇಳಿ ಹೋದವು ಎಲ್ಲಿ ಹಾಳಾಗಿ ಸತ್ತ? (ಸಹಾಯಕರು ಮತ್ತೆ ಬಂದವೆ)

ಬಿಡಿಓ: ಏಯ್ ಯಾರಾರ್ ಸಿಕ್ಕಿದನಾ?

ಸಹಾಯಕ 1: ಯಾರೂ ಸಿಕ್ಕಿತ್ಲೆ ಸರ್. ಎಲ್ಲವೂ ಬಾಗ್ಲ್ ಹಾಕ್ಕಂಡ್ ಒಳಗೆ ಸೇರ್‌ಕಂಡ್ ಬುಟ್ಟೊಳ.

ಬಿಡಿಓ: ಯಾಕೆ ಗಡ?

ಸಹಾಯಕ 1: ಗೊತ್ತಿಲ್ಲೆ ಸರ್. ಆದ್ರೂ ಬಾಗ್ಲ್ ಬೊಟ್ಟಿ ವಿಚಾರ್‌ಸ್‌ದ ಸರ್.

ತಾಸೀಲ್ದಾರ: ಏನ್‌ಂತ ಹೇಳ್ದ?

ಸಹಾಯಕ 1: ಗಂಡು ಜನಂಗ ಯಾರೂ ಮನೇಲಿ ಇಲ್ಲೆ ಅಂತ ಉತ್ತರ ಹೇಳ್ದ ಸರ್.

ತಾಸೀಲ್ದಾರ: ಯಾಕೆ ಅಂತ ಕೇಳ್ದರಾ?

ಸಹಾಯಕ 2: ಕೇಳ್ದ ಸರ್. ಆದರೆ ಯಾರೂ ಎಂತನೂ ಉತ್ತರ ಹೇಳ್‌ತ್ಲೆ ಸರ್.

ತಾಸೀಲ್ದಾರ: ಥತ್, ಈ ಸುಟ್ಟ ಶಂಕರಪ್ಪ ಎಲ್ಲಿಗೆ ಹಾಳಾಗಿ ಹೋತ್? ಅವ ಒಬ್ಬ ಇದ್ದಿದ್ದರೆ ಸಾಕಾಗ್ತಿತ್.

ಬಿಡಿಓ: ಅವನ ಪತ್ತೇನೆ ಇಲ್ಲೆ ಸರ್. ಈಗೆಂಥ ಮಾಡ್ದು ಸರ್.

ತಾಸೀಲ್ದಾರ: ಯೂಸ್‌ಲೆಸ್ ಫೆಲೋಗ! ಇಂಥರ್ವ ನಂಬಿಕಂಡ್ ನಾವ್‌ಗ ಕೆಲ್ಸ ಮಾಡ್‌ದಂಗೆನೆ. ಇನ್ನ್ ಇಲ್ಲಿದ್ದು ಮಾಡಿಕೆಂತ ಉಟ್ಟು? ನಡ್ಯನಿ ಪೋಯಿ. ಸಿಕ್ಕಿಕಾಕನ ವಿಚಾರ್‌ಸುಮ. (ಎಲ್ಲವೂ ಹೊರಡುಕು ಅಂತಾಕನ ಗುರ್‌ತು ಸಿಗದಾಂಗೆ ಶಂಕರಪ್ಪ ಮೈಕೆಗೆಲ್ಲಾ ಬ್ಯಾಂಡೇಜ್

ಹಾಕಿಕಂಡ್ ಕುಂಟಿಕಂಡ್ ಬರ್ತಾ ಉಟ್ಟು)

ಶಂಕರಪ್ಪ: ಸಾರ್... ಸಾರ್.. ಸ್ವಲ್ಪ ನಿತ್ತ್‌ಕಣಿ ಸಾರ್.

ಬಿಡಿಓ: (ತಾಸೀಲ್ದಾರ ತಿರ್‍ಗಿ ನೋಡಿ) ಇವ ಯಾರಿವ? ಇವ...

ತಾಸೀಲ್ದಾರ: ಯಾರ್ ನೀ? ಎಂಥ ಬೇಕು ನಿಂಗೆ?

ಶಂಕರಪ್ಪ: ನನ್ನ ಗುರ್ತು ಸಿಕ್ಕತ್ಲೆನಾ ಸಾರ? ನಾ ಸರ್.

ಬಿಡಿಓ: ನಾ ತೇಂಳ್ತ್ರೆ ಯಾರ್ ನೀವು?

ಶಂಕರಪ್ಪ: ನಾ ಶಂಕರಪ್ಪ ಸಾರ್.

ಬಿಡಿಓ: ಶಂಕರಪ್ಪ???

ತಾಸೀಲ್ದಾರ: ಶಂಕರಪ್ಪ???

ಶಂಕರಪ್ಪ: ಹೌದು ಸರ್ ನಾನೇ.

ತಾಸೀಲ್ದಾರ: ಅದೆಂತಾತು ಅಂತ ಸರಿಯಾಗಿ ಬಾಯಿ ಬುಟ್ಟು ಹೇಳ್.

ಶಂಕರಪ್ಪ: ಸಾರ್... ನಾ ಸಾಂದ್ರ ಬೇಸಾಯ ಮಾಡ್ಸಿದ್ದ್ ಒಬ್ಬ ಹರಿಜನರ ಗದ್ದೆಲಿ ಸಾರ್.

ಬಿಡಿಓ: ಹರಿಜನರ ಗದ್ದೆಯಾರೆ ಏನಾತ್?

ಶಂಕರಪ್ಪ: ಅದ್ ಹಾಂಗಲ್ಲ ಸಾರ್. ಹರಿಜನರ ಗದ್ದೆಂತ ಹೇಳುವ ಒಂದೇ ಕಾರಣಕ್ಕೆ ಈ ಊರ್‌ನ ಜನ ನೀರು ಕೂಡ ಕೊಡ್ದೆ, ದನಾನ ಬುಟ್ಟು ಹಾಳ್ ಮಾಡ್ದ ಸರ್. ಯಾಕೆ ಅಂತ ಕೇಳಿಕೆ ಹೋದಕ್ಕೆ ಓಡ್ಸಿಕಂಡ್ ಬಂದು ಹೊಡ್ದ ಸರ್ (ಸುಳ್ಳು ಹೇಳ್ದೆ)

ಬಿಡಿಓ: ಇದೆಂಥದ್ ನಿಮ್ಮ ರಾಮಾಯಣ? ನಾವ್ ಒಂದು ಹೇಳಿರೆ ನೀವು ಇನ್ನೊಂದು ಮಾಡ್‌ರಲ್ಲಾ.

ಶಂಕರಪ್ಪ: ಇಲ್ಲೆ ಸಾರ್, ಇಲ್ಲಿ ನನ್ನದೆಂಥ ತಪ್ಪಿಲ್ಲೆ ಸರ್.

ತಾಸೀಲ್ದಾರ: ಹೂಂ.... ಆದದ್ದ್ ಆತ್. ಇನ್ನೇನ್ ಮಾಡಿಕೆ ಆದೆ?

ಒಂದ್ ಕೆಲ್ಸ ಮಾಡಿ. ಕರಿಯನ ಹಕ್ಕಲೆ ಒಂದು ಅರ್ಜಿ ಕೊಡ್ಸಿ. ಪೊಲೀಸ್‌ಗ ಬಂದ್ ವಿಚಾರ್‌ಸಲಿ.

ಶಂಕರಪ್ಪ: ಆತ್ ಸಾರ್ ಹಾಂಗೇ ಮಾಡೀನೆ.

ತಾಸೀಲ್ದಾರ: ಇನ್ನೇನೂ ಜಾಸ್ತಿ ಮಾಡಿ ಕಣಿಕೆ ಹೋಗ್‌ಬೇಡಿ.

ಶಂಕರಪ್ಪ: ಇಲ್ಲೆ ಸಾರ್.

ತಾಸೀಲ್ದಾರ: ಆಫೀಸ್‌ಗೆ ಬಂದ್ ನನ್ನ ನೋಡಿ.

ಶಂಕರಪ್ಪ: ಆತ್ ಸಾರ್.

(ರಂಗದ ಮೇಲೆ ಕತ್ತಲಾದೆ)

ದೃಶ್ಯ–8

(ಊರು ಹೊರಗೆ ಮಾರ ಸಿದ್ದ ಒಂದು ಮರದ ಬುಡಲಿ ಬೀಡಿ ಸೇದಿಕಂಡ್ ಹರಟೆ ಹೊಡ್ಯತಾ ಒಳ. ಅಲ್ಲಿಗೆ ಸೀಗೇಗೌಡರು ಮತ್ತು ಅವರ ಮಗ ಸುಬ್ಬಯ್ಯ ಇವರಿಬ್ಬರ ಹುಡುಕಿಕಂಡು ಬಂದವೆ)

ಮಾರ: ಎಂಥ ಸಿದ್ದಣ್ಣ ಹೀಂಗೂ ಗಾಳಿ ಬೀಸುದಾ? ಮೂರು ದಿನಂದ ಅದೆಂಥಾ ಗಾಳಿ.

ಸಿದ್ದ: ಹೌದು ಮಾರ. ಹೀಂಗೆ ಗಾಳಿ ಬಂದರೆ ಎಲ್ಲೆಲ್ಲಿ ಎಷ್ಟೆಷ್ಟು ಮರಗ ಹೊಣಕಿ ಬಿದ್ದುಟಾ ಆ ದೇವರಿಗೆ ಗೊತ್ತು.

ಮಾರ: ಅದೂ ಸರಿ. ಆದರೆ ಒಂದು ಸಣ್ಣ ಮಳೆ ಬಂದರೇ ಈ ಕರೆಂಟ್ ಕೈ ಕೊಟ್ಟದೆ! ಇನ್ನು ಈ ಗಾಳಿಗೆ ಎಲ್ಲಿ ಯಾವ ಕಂಬಗ ಪೈಪಿಕಂಡ್ ಬಿದ್ದುಟಾ? (ಅಷ್ಟೊತ್ತಿಗೆ ಸೀಗೇಗೌಡ್ರ, ಸುಬ್ಬಯ್ಯ ಬಂದವೆ)

ಸೀಗೇಗೌಡ: ಓಹೋಹೋ.... ಏನು ಮಾರ, ಸಿದ್ದ ಏನ್ ಮಾಡ್ತಾ ಒಳರಿ?

ಸಿದ್ದ: ಹೀಂಗೆ... ಏನಿಲ್ಲೆ ಗೌಡ್ರೆ ಸುಮ್ಮನೆ ಪಟ್ಟಾಂಗ ಅಷ್ಟೆ.

ಸೀಗೇಗೌಡ: ಮಾರ ಸಿದ್ದ ನಿಮ್ಮಿಂದ ಒಂದು ಉಪಕಾರ ಆಕು ಮಾರಾಯ್ರೆ. ಆಕೀಲೆಂತ ಮಾತ್ರ ಹೇಳ್ಬೇಡಿ.

ಮಾರ: ಎಂಥದ್ ಹೇಳಿ ಗೌಡ್ರೆ.

ಸೀಗೇಗೌಡ: ಮಾರ ನಮ್ಮ ಮನೆ ಮುಂದೆ ಒಂದು ದೊಡ್ಡ ಹೆಬ್ಬಲಸು ಮರ ಗಾಳಿಗೆ ವಾಲಿ ಅರ್ಧ ಬೀಳುವಾಂಗೆ ಆವುಟು. ಅದರ ಬೇರು ಪೂರ ನಮ್ಮ ಮನೆ ಒಳಗೆ ಹರಡಿಕಂಟು.

ಅದೆಲ್ಲಾರ್ ಗಾಳಿಗೆ ಹೊಣ್‌ಕಿ ಬಿದ್ದರೆ ಅದರ ಬೇರು ಹಾಂಗೇ ಎದ್ದು ನಮ್ಮ ಮನೆನ ಹೊಣ್‌ಕಿಸಿ ಬೀಳ್ಸುವ ಸಾಧ್ಯತೆ ಉಟ್ಟು. ಹಾಂಗೆ ನೀವು ಬಂದ್ ಆ ಮರನ ಕಡ್ಯಕು.

ಮಾರ: ಓ ವಿಷಯ ಹಂಗನೇ? ಆದರೆ ಎರಡು ದಿನ ನಾವ್ಗೆ ಬಾಕೆ ಆದ್ಲೆ. ನೀವು ಬೇರೆ ಯಾರನ್ನಾರ್ ನೋಡಿಕಣಿ.

ಸುಬ್ಬಯ್ಯ: ಅಯೋ ದೇವ್ರೇ ಹಾಂಗೆಲ್ಲ ಹೇಳ್‌ಬೇಡಿಯಪ್ಪ.

ಸಿದ್ದ: ಆದ್ಲೆ.. ಆದ್ಲೆ... ನೀವು ಬೇರೆ ಯಾರನಾರ್ ನೋಡಿಕಣಿ.

ಸೀಗೇಗೌಡ: ದಮ್ಮಯ್ಯ ಮಾರಾಯ್ರೆ... ನೀವು ಅದರ ಕಡ್ದು ಕೊಟ್ಟರೆ ಅರ್ಧ ಮಣ ಭತ್ತ ಕೊಟ್ಟವೆ. ಬನ್ನಿಯಪ್ಪ ನಿಮ್ಮ ದಮ್ಮಯ್ಯ.

ಮಾರ: (ಮಾರ ಸಿದ್ದನ ಮೋರೆ ನೋಡ್‌ದೆ) ಹಾ.. ಆತ್ ಅದೆಲ್ಲೀಂತ ಹೋಗಿ ನೋಡುಮ.

ಸುಬ್ಬಯ್ಯ: (ಖುಷಿಲಿ) ಬನ್ನಿ ಬನ್ನಿ ನಮ್ಮ ಮನೆ ಮುಂದೆನೇ. (ದೂರಂದ ತೋರ್ಸಿ) ಅದುವೇ ಮರ. ಅದರ ಕಡಿಯಕು (ಸಿದ್ದ ಮಾರ ನೋಡುವೆ)

ಮಾರ: ಓಹ್ ದೊಡ್ಡ ಮರ. ತೊಂದರೆ ಇಲ್ಲೆ. ನಮ್ಮ ಕೆಲ್ಸನ ನಾಳೆಂದ ಶುರು ಮಾಡಿಕಂಡವೆ.

ದೃಶ್ಯ–9

(ಬೆಳ್ಳು ಬಾಕನ ಮಾರ ಮತ್ತು ಸಿದ್ದ ಬೀಸಿದ ಬಿರುಗಾಳಿಗೆ ಮಾಲ್‌ಕಂಡಿದ್ದ ಹೆಬ್ಬಲಸು ಮರನ ಕಡ್ಯತಾ ಒಳ. ಮಾಡ್ತನೇ ಇದ್ದ ಕೆಲಸಂದಾಗಿ ಎಂಥಾ ಪ್ರಯೋಜನ ಕಾಣದೆ ಇಬ್ಬರೂ ಸುಸ್ತು ಹೊಡ್ದು ಬೇಜಾರಾಗಿ ಹೋಗಿದ್ದದೆ)

ಸಿದ್ದ: (ಮರಕಡ್ಯದರ ನಿಲ್ಸಿ) ಏಯ್ ಮಾರ ನನ್ನಂದ ಆಕಿಲೆ, ಇದೆಂಥ ಸುಡುಗಾಡ್‌ನ ಕೆಲ್ಸಪ. ಸಾಕಾಗಿ ಹೋತ್.

ಮಾರ: ನಂಗೂ ಹಾಂಗೆ ಅನ್ಸ್‌ಸ್ತಾ ಉಟ್ಟು. ನಾಲ್ಕು ದಿನಂದ ನಾವು ಇದರ ಕಡ್‌ದದ್ದೇ ಕಡ್‌ದದ್ದ್. ಆರೆ ಕೆಲ್ಸ ಮಾತ್ರ ಮುಗ್ಯಿತಾ ಇಲ್ಲೆ.

ಸಿದ್ದ: ಅಲ್ಲಾ.... ಎಷ್ಟು ಸರ್ತಿ ಈ ಕೊಡಲಿ ಬಾಯಿ ಮೊಂಡಾಗಿ ಅದರ ಪೇಂಟೆಗೆ ತಕಂಡೋಗಿ ಆಚಾರಿ ಕೈಲಿ ತಟ್ಟಿಸಿ, ನೀರು ಕೊಡ್ಸೀತಾದ್ ಹೇಳ್. ಅರ್ಧ ಗಂಟೆಗೊಮ್ಮೆ ಆ ಬೆಣಚುಕಲ್ಲ್‌ನ ಪುಡಿ ಹಾಕಿ ಹರ್‌ತ ಮಾಡ್ದೇ ಮಾಡ್ದ್! ಆದರೆ ಎಷ್ಟು ಕಡ್‌ದರೂ ಇದ ಮುಗಿಯುವಾಂಗೆ ಕಾಣ್ತಿಲ್ಲೆ.

ಮಾರ: ನಂಗಂತೂ ನಾಲ್ಕು ದಿನಂದ ಇದರ ಕಡ್ದೂ ಕಡ್ದೂ ರೆಟ್ಟೆ ಪೂರ ಲಕ ಲಕ ಲಿಕ ಲಿಕಾಂತ ಹೇಳ್ತಾ ಉಟ್ಟು. ನನ್ನಂದ ಬೊತ್ತು ಇನ್ನು.

ಸಿದ್ದ: ಅಲ್ಲಾ ಮಾರ... ಅರ್ಧ ಮಣ ಭತ್ತಕ್ಕೆ ಕಡ್ದು ಕೊಟ್ಟವೇಂತ ಒಪ್ಪಿದ್ದ್ ನೀನೇ. ಅಲ್ಲಾ... ಎಲ್ಲಾ ನೀನೇ ಮಾಡ್ದ್. ಒಂದ್ ದಿನದ್ ಕೆಲ್ಸನ ನಾಲ್ಕು ದಿನ ಆದರೂ ಮುಗ್ಸಿಕೆ ಆದೂಲೇಂತ ಹೇಳ್ರೆ ಇದೆಂಥ ಕೆಲ್ಸ ಹೇಳ್. ನಿಂಗೆ ತಲೆ

ಇಲ್ಲೆ. ಇದರ ಪೂರ ಕಡ್ದು ಮುಗ್ಸಿಕಾಕನ ಅಜ್ಜಿಗೆ ಮೀಸೆ ಬಂದದೆ!

ಮಾರ: ಥತ್ ತೇರಿ, ನಾವು ಈ ಹೇಲ್ ತಿಂಬಾ ಕೆಲ್ಸಕ್ಕೆ ಕೈ ಹಾಕಿದವೇ ಅಲ್ಲಾ. ಇದೆಂಥಾ ಮರನಾ... ಅಥವಾ ಶನಿನಾ...? ಎಂಥ ಮಾಡ್ದು ಮಾರಾಯ?

ಸಿದ್ದ: ನೀನೇ ಹೇಳು ಏನು ಮಾಡ್ದೂಂತ. ನೀ ಹೆಂಗೇಳಿಯಾ ಹಂಗೆ.

ಮಾರ: ಒಂದ್ ಕೆಲ್ಸ ಮಾಡುಮ. ಸುಬ್ಬಯ್ಯನ ಹಕ್ಕಲೆ ಹೋಗಿ, "ನೀ ಹೇಳ್ದಂಗೆ ಮರನ ಕಡ್ದು ಕಡ್ದು ಸಾಕಾಗಿ ಹೋತ್. ನೀ ಇನ್ನರ್ಧ ಮಣ ಭತ್ತ ಕೊಡ್‌ದಾರೆ ಮತ್ತೆ ಕಡ್‌ದವೆ. ಇಲ್ಲೇ ನೀ ಹಿಂದೆ ಹೇಳ್ದಂಗ ಭತ್ತ ಕೊಡದಿದ್ದರೂ ತೊಂದರೆ ಇಲ್ಲೆ. ನೀ ಬೇರೆ ಯಾರಕ್ಕಾಲಾದ್ರೂ ಕೆಲ್ಸ ಮಾಡ್ಸಿಕ" ಅಂತೇಳುಮ, ಹೇಂಗೆ?

ಸಿದ್ದ: ಆತ್ ಆತ್ ಹಾಂಗೆ ಮಾಡುಮ ನಡಿ. (ಕೆಲ್ಸ ನಿಲ್ಸಿ ಕೊಡಲಿನ ಹೆಗಲಿಗೇರಿಸಿ ಹೊರಡಿಕೆ ಸುರುಮಾಡ್ವೆ. ಆಗ ಅಲ್ಲಿಗೆ ಸುಬ್ಬೇಗೌಡ ಬಂದದೆ)

ಸುಬ್ಬಯ್ಯ: ಏಯ್.. ಯಾಕೆ ಏನಾತ್? ಕೆಲ್ಸ ನಿಲ್ಸಿ ಬುಟ್ಟಳೊರಿ?

ಮಾರ: ನಿನ್ನಕ್ಕಲ್ಲೇ ಬರುಮಾಂತ ಇದ್ದ. ಅಷ್ಟೊತ್ತಿಗೆ ನೀನೇ ಬಂದ ನೋಡು.]

ಸುಬ್ಬಯ್ಯ: ಎಂಥ ಕತೆ?

ಸಿದ್ದ: ನೋಡು ಸುಬ್ಬಯ್ಯ ನೀ ಹೇಳ್ದಂಗೆ ಮರನ ನಾಲ್ಕು ದಿನಂದ ಕಡ್ದು ಕಡ್ದು ಸಾಕಾಗಿ ಹೋತ್. ಇನ್ನ್ ಈ ಕೆಲ್ಸ ನಮ್ಮಿಂದ ಆಕಿಲೆ.

ಸುಬ್ಬಯ್ಯ: ಕೆಲ್ಸ ಆದ್ಲೇಂತ ಹೇಳ್ರೆ? ಏನ್ ತಮಾಷೆ ಮಾಡ್ತಾ ಒಳರಾ?

ಮಾರ: ಇದರ್ಲಿ ತಮಾಷೆ ಎಂಥ ಸುಬ್ಬಯ್ಯ? ಈ ಮರದ

ಸಾವಾಸನೇ ಬೇಡ ನಾವ್ಗೆ. ಇದ್ಯಾವುದೋ ದೆವ್ವದ ಮರ ಇರೊಕು. ಎಷ್ಟು ಕಡ್‌ದರೂ ಮುಗಿಯೋದ್ಲೆ.

ಸುಬ್ಬಯ್ಯ: ಈಗಲೇ ಮರ ಒಂದು ಕಡೆಗೆ ಮಾಲಿಕಂಡ್ ನಿತ್ತುಟ್ಟು. ಅದರ ಬೇರೆಲ್ಲಾ ನಮ್ಮ ಮನೆ ಅಡಿಪಾಯಕ್ಕೆ ಬಂದುಟು ಬೇರೆ. ಹಾಂಗಿರಕನ ನೀವು ಅರ್ಧಂಭರ್ಧಂ ಕಡ್ದು ಹೋದ ಮರಕ್ಕೆ ಪುನಃ ಜೋರಾಗಿ ಗಾಳಿ ಬೀಸಿತ್‌ತಾಂದ್ರೆ... ಇನ್ನೂ ತೊಂದರೆ ಅಲ್ಲಾ ಮಾರಾ.

ಮಾರ: ಅದೆಲ್ಲಾ ನಾವ್ಗೆ ಗೊತ್ತಿಲ್ಲೆ. ನಮ್ಮಂದ ಬೊತ್ತ್ ಅಷ್ಟೆ. ಏಯ್ ಪೋಯಿ ಸಿದ್ದ. ಇದರ ಸುದ್ದಿನೇ ಬೇಡ ನಾವ್ಗೆ (ಕೊಡಲಿ ತಕಂಡು ಹೊರ್‌ಡಿಕೆ ಹೋದವೆ)

ಸುಬ್ಬಯ್ಯ: ನಿತ್‌ಕಣಿಯಪ್ಪ... ಮರನ ಕಡ್ದ್ ಬೀಳ್ಸಿರೆ ಅರ್ಧಮಣ ಭತ್ತ ಅಂತ ಅಲ್ಲಾ ನಾವು ಮಾತಾಡಿ ಕಂಡದ್ದ್.

ಸಿದ್ದ: ನೀ ಅರ್ಧ ಮಣ ಭತ್ತ ಕೊಡದಿದ್ದರೂ ತೊಂದರೆ ಇಲ್ಲೆ. ಈ ಕೆಲ್ಸ ಮಾತ್ರ ನಮ್ಮಿಂದ ಆಕಿಲೆ.

ಸುಬ್ಬಯ್ಯ: ಆಕಿಲೇಂತೇಳ್ರೆ ಅದೆಂಗಾದೆ? ಮುನ್‌ಸ್ಸಾಲಿ ಏನು ಉಟ್ಟುಂತಾರ್ ಹೇಳಿ.

ಮಾರ: ಈಗ ಕೊಡುವ ಅರ್ಧ ಮಣ ಭತ್ತದ ಒಟ್ಟಿಗೆ ಇನ್ನು ಅರ್ಧ ಮಣ ಕೊಟ್ಟರೆ ಮಾತ್ರ ನಾವ್ ಈ ಕೆಲ್ಸ ಮಾಡ್‌ದಪ್ಪ. ಏನ್ ಸಿದ್ದ?

ಸಿದ್ದ: ಊಂ... ಹೌದು.

ಸುಬ್ಬಯ್ಯ: ಅಲ್ಲಪ್ಪ... ಸುರುಗೆ ನಿಮ್ಮ ಮಾತ್‌ನಂಗೆ ಅರ್ಧ ಮಣಕ್ಕೆ ಕೆಲ್ಸ ಮಾಡ್ವೆಂತ ಹೇಳ್ದಲ್ಲಾ?

ಮಾರ: ಅದೆಲ್ಲಾ ಈಗ ಯಾಕೆ? ಆದ್ಲೆಂತ ಹೇಳ್. ನಾವ್ ಹೊರಟು ಹೋದವೆ ಅತ್ತ.

ಸುಬ್ಬಯ್ಯ: ಆತಪ್ಪ ನಿಮ್ಮ ಮಾತ್‌ನಂಗೆ ಆಗಲಿ. ಆದರೆ ಬೇಗ ಕೆಲ್ಸ

ಶುರು ಮಾಡಿ ಮುಗ್ಸಿ.

ಸಿದ್ದ: ಇನ್ನ್ನೆ ನಿಮ್ಮ ಕೆಲ್ಸ ಆದಂಗೆ. ನೀವ್ ತಲೆ ಕೆಡ್ಸಿಕಂಬೇಡಿ. (ಅಷ್ಟೊತ್ತಿಗೆ ಜೋರಾಗಿ ಗಾಳಿ ಬೀಸಿ ಆ ದೊಡ್ಡ ಮರ ಲಟಲಟಾಂತ ಶಬ್ದ ಮಾಡಿಕಂಡಾ "ಧುಂ" ಅಂತ ಹೊಣ್‌ಕಿ ಬೀತ್. ಮರದ ಬುಡಲೇ ಇದ್ದ ಮಾರ ಸಿದ್ದ ಸುಬ್ಬಯ್ಯ ಅದ್ರಂದ ತಪ್ಪಿಸಿಕಂಡವೆ. ಸುಬ್ಬಯ್ಯಂಗೆ ಮರ ಬಿದ್ದದ್ದಕ್ಕೆ ಖುಷಿ ಆದೆ. ಊರಿನ ಜನ ಓಡಿ ಬಂದವೆ. ಮರ ಬಿದ್ದುದರ ನೋಡಿ ಭೈರಪ್ಪಂಗೆ ತಲೆ ಕೆಟ್ಟದೆ)

ಒಬ್ಬ: (ಆಶ್ಚರ್ಯ) ಅಬ್ಬಾ.... ಹೇಂಗೆ ಹೊಣ್‌ಕಿ ಬಿದ್ದುಟು ಮರಾ..?

ಇನ್ನೊಬ್ಬ: ಮರ ಬಿದ್ದ ಶಬ್ದ ಸಿಡಿಲ್ ಹೊಡ್ದಂಗೆ ಕೇಳ್ತ್ (ಭಯ)

ಮತ್ತೊಬ್ಬ: ಮರದ ಕೆಳಗೆ ಯಾರಾರ್ ಸಿಕ್ಕಿ ಸತ್ತು ಹೋದಾ ಹೇಂಗೆ? (ಬಗ್ಗಿ ನೋಡುವೆ)

ಮಗದೊಬ್ಬ: (ಲಾಟೀನ್ ಹಿಡ್ಕಂಡು ಹುಡ್ಕಿದೆ) ಇದೆಂಥ ಸದ್ದ್? (ಪಕ್ಷಿ ಸರ ಸರ ಸದ್ದು ಮಾಡಿಕಂಡು ಹಾರಿ ಹೋದು ಗೊತ್ತಾದ್ಲೆ)

ಒಬ್ಬ: ಓಬಿರಾಯನ ಕಾಲದ ಮರ ಇದ್. ಪಿಶಾಚಿ, ದೆವ್ವಗ ಎಲ್ಲಾ ಇದ್ದದೆ.. (ಅಷ್ಟೊತ್ತಿಗೆ ಬಾವಲಿಗ ಶಬ್ದ ಮಾಡಿಕಂಡ್ ಹಾರಿ ಹೋದೆ)

ಇನ್ನೊಬ್ಬ: ಮಾರಾಯ (ಹೆದರಿಕಂಡ್) ಪಿಚಾಚಿ, ಗಿಚಾಚಿ ಅಂತ ಹೇಳ್ ಬೇಡ.

ಮಗದೊಬ್ಬ: ಅದೆಲ್ಲಿದ್ದದೆ ಬೇಕಲ್ಲ! ಮರ ಬೀಳಿಕಾಕನ ಅದುನೂ ಹಾರಿ ಹೋಗಿದ್ದದೆ ಬುಡು. (ಜನಂಗ ಹೀಂಗೆ ಮಾತಾಡ್ತಾ ಇರಕನ ಭೈರಪ್ಪ ಹೊರಗೆ ಬಂದದೆ. ಸೀಗೇಗೌಡ ಮತ್ತು ಅವನ ಮನೆ ಹಕ್ಕಲಕ್ಕಲೇ) ಸುಬ್ಬಯ್ಯ ಮತ್ತು ಸೀಗೇಗೌಡ ಈ ಮರ ಬಿದ್ದುದರ ನೋಡಿಯೇ ಬಾಕಿ.

ಭೈರಪ್ಪ: ಸುಬ್ಬಯ್ಯ ನೀ ಕಡ್ಸಿದ ಮರ ನನ್ನ ಮನೆ ಬಾಗಿಲಿಗೆ

ಅಂಗಾಂತ ಬಿದ್ದು ಬುಟ್ಟುಟಲ್ಲಾ..?

ಸುಬ್ಬಯ್ಯ: ಅದ್ಕೆ ನಾ ಎಂತ ಮಾಡಿಕಾದೆ ಬೇಕಲ್ಲಾ.

ಭೈರಪ್ಪ: ಅದರ ಕೊಯ್ದು ತುಂಡು ಮಾಡ್ಸದಿದ್ದರೆ ನಾವ್ಗೆ ಓಡಾಡಿಕೇನೆ ಜಾಗೆ ಇರ್‌ದುಲೆ ನೋಡು.

ಸುಬ್ಬಯ್ಯ: ಆತ್.. ಏನಾತು ಈಗ? ನೀನೇ ಕೊಯ್ದು ತುಂಡು ಮಾಡ್ಸು.

ಭೈರಪ್ಪ: ಎಂಥ? ನಾ ಕೊಯ್ಯಕಾ? ನಾ ಯಾಕೆ ಕೊಯ್ಯಕು? ಮರ ಕಡ್ಯಕೆ ಹೇಳ್ದವ ನೀ ಅಲ್ಲಾ..? ಅದು ಬಂದ್ ನನ್ನ ಮನೆ ಮುಂದೆ ಬಿದ್ದುಟು. ಹಾಂಗಿರಕನ ನೀನೇ ದಾರಿ ಮಾಡಿ ಕೊಡಕು.

ಸುಬ್ಬಯ್ಯ: ಅಲೆ.. ಲೆ.. ಲೆ... ನಾ ಕೊಯ್ಯಕೆ ಹೇಳ್ದ್ ಸರಿ. ಮರ ಬೀತ್. ಆದರೆ ಅದೀಗ ನಿನ್ನ ಮನೆ ಮುಂದೆ ಬಿದ್ದುಟು. ಓಡಾಡಿಕೆ ಬೇಕಾದ್ ನಿಂಗೇ ಅಲ್ಲಿ. ನೀನೇ ಕೊಯ್ಯಾ!

ಭೈರಪ್ಪ: ಅಲ್ಲ ಮಾರಾಯ.... ನಮ್ಮ ಮನೆ ಬಾಗಿಲ್ ಮುಂದೆ ಬಿದ್ದದ್ ಹೌದು ಒಪ್ಪಿಕಂಡನೆ. ಆದರೆ ಆ ಮರ ನಿನ್ನದು. ನಿನ್ನ ಮನೆ ಎದುರಿಗೆ ಇರ್‌ದು. ನೀನೇ ಅಲ್ಲ ಅದರ ಯಜಮಾನ?

ಸುಬ್ಬಯ್ಯ: (ಜೋರಾಗಿ ನಗಾಡಿಕಂಡು) ಒಳ್ಳೆ ಕಥೆ ಆತಲ್ಲ ನಿಂದು.. ಅಲ್ಲ ಮಾರಾಯಾ ನಿಂಗೆ ಯಾರ್ ಹೇಳ್‌ದ್? ಈ ಮರ ನಂದೂ ಅಲ್ಲ ನಮ್ಮಪ್ಪಂದೂ ಅಲ್ಲ. ಕಿರಗೂರು ಹುಟ್ಟಿಕೆ ಮುಂದೇನೇ ಈ ಮರ ಇಲ್ಲಿ ಉಟ್ಟುಗಡ. ಆಗಾಗ ಈ ಮರದ ಕಾಯಿಗ ಬಿದ್ದು ನನ್ನ ಮನೆ ಹಂಚ್ ಒಡ್ದು ಹೋದ್ ಬುಟ್ಟರೆ ಮತ್ತೆ ಈ ಮರಕ್ಕೂ ನಂಗೂ ಸಂಬಂಧನೇ ಇಲ್ಲೆ. ಯಾರ್ ಬೇಕಾರ್ ಈ ಮರನ ಕೊಯ್ದು ತಕಂಡ್ ಹೋಕ್.

ಭೈರಪ್ಪ: ಓ ಕರ್ಮನೇ... ನಂಗೇ ಬೇಕಾದಲ್ಲ ದಾರಿ. ಸರಿ, ಆತ್

ನಾನೇ ಹತ್ತಿ ಕುಯ್ಸಿನೆ.

ಸುಬ್ಬಯ್ಯ: ನೋಡು ಈ ಮರನ ಕುಯ್ದವು ಮಾರ ಮತ್ತು ಸಿದ್ದ. ಅವ್ರೆ ಹೇಳ್ ಈ ಕೆಲ್ಸನಾ.

ಭೈರಪ್ಪ: ಓಯ್... ಈ ಮರನ ತುಂಡು ಮಾಡಿ ಅತ್ತ ದೂಡಿ ಬುಡಿ. ಒಟ್ಟಾರೆ ನಂಗೆ ಓಡಾಡಿಕೆ ದಾರಿ ಬೇಕು. ಎಷ್ಟು ಕೊಡಕು ಹೇಳೀ? (ಅಲ್ಲೇ ಇದ್ದ ಮಾರ ಸಿದ್ದಂಗೆ ಹೇಳ್ದ)

ಸಿದ್ದ: ಒಂದು ಮಣ ಭತ್ತ ಕೊಡು ಕೊಯ್ದಾಕುವೆ.

ಭೈರಪ್ಪ: ಏ... ಇದ್ ಹೆಚ್ಚು ಆತ್.. ಒಂದು ಪಲ್ಲ...?

ಸಿದ್ದ: ಹೆಚ್ಚಾತ್‌ಂತಾರೆ.. ಬೇಡ ಬುಡು. ಇದರ ಕುಯ್ಯೋದೂಂತೇಂಳ್ರೆ. ಎಂಥ ಬಾಳೆ ಹಣ್ಣು ಚೋಲಿ ತೆ-ಗ್ದು ನುಂಗಿದಾಂಗೆನಾ? ಇದ್ ಅಂಟುಮರ. ಇದಲ್ರಿ ಮಾಯಣ ಇದ್ದದೆ. ಎರಡು ದಿನ ಆದ್ರೂ ಕೊಯ್ದಾಕಿಲ್ಲೆ ಗೊತ್ತಾತಾ? ಭಾರೀ ಕಷ್ಟ ಉಟ್ಟು ಇದ್.

ಭೈರಪ್ಪ: ಹೋಗಲಿ ಸಾಯ್ಲಿ ನೀವು ಹೇಳ್ದಂಗೆ ಒಂದು ಮಣ ಭತ್ತನೇ ಕೊಟ್ಟನೆ. ಬೇಗ ಬೇಗ ಕೊಯ್ದು ದಾರಿ ಮಾಡಿ ಕೊಡಿ ಅಷ್ಟೆ.

ಮಾರ: ಕುಯ್ಯನೀತೇಂಳ್ರೆ... ಗರಗಸ ಬೇಕಲ್ಲ. ಅದಿಲ್ಲದೇ ಹೇಂಗೆ ಕೊಯ್ಯೋದು?

ಭೈರಪ್ಪ: ಅದ್ ನಿಮ್ಮಕ್ಕಲೆನೇ ಇಲ್ಲೆನಾ?

ಮಾರ: ಇದೆಂಥ ಹಲಗೆ ತುಂಡಾ ಕುಯ್ಯಕ್ಕೆ. ಇದರ ಕುಯ್ಯುಕ್ಕೆ ದೊಡ್ಡ ಗರಗಸನೇ ಬೇಕು.

ಭೈರಪ್ಪ: ಥತ್ ಇದ್ ಒಳ್ಳೆ ಕರ್ಮ ಆತಲ್ಲ. ಗ್ರಾಚಾರ; ಸಾಯ್ಲಿ ಅತ್ತ ನಂಗೆ ಬೇಕಾದಲ್ಲ. ನೋಡಿ ಆ ಹೊಸ ದೊಡ್ಡ ಗರಗಸನ ನಾನೇ ತಂದ್ ಕೊಟ್ಟನೆ. ನಾಳೇಂದ ನೀವು ನಿಮ್ಮ ಕೆಲಸ ಮಾಡಿ.

ದೃಶ್ಯ–10

(ಮಾರ ಮತ್ತು ಸಿದ್ದ ಹೆಬ್ಬಲಸ್ ಮರನ ಗರಗಸಂದ ಕೊಯ್ಯುತಾ ಒಳ)

ಮಾರ: ಎಂಥ ಮಾರಾಯ? ಈ ಮರಕ್ಕೆ ಇನ್ನೊಂದು ಅರ್ಧ ದಿನ ತಡ್ಯಕೆ ಆತ್ಲೆನಾ? 'ಅರ್ಧ ಮಣ ಭತ್ತ' ಅನ್ಯಾಯ ಆತಲ್ಲ! ಕೈಗೆ ಬಂದದ್ದ್ ಬಾಯಿಗೆ ಇಲ್ಲದಾಂಗೆ ಆತ್ ನೋಡ್.

ಸಿದ್ದ: ಹೋಗಲಿ ಬುಡು. ಭೈರಪ್ಪನಕ್ಕಲೇಂದ ಒಂದು ಮಣ ಭತ್ತ ವಸೂಲಿ ಮಾಡ್ತಾ ಇಲ್ಲೆನಾ... ಅದಕ್ಯಾಕೆ ತಲೆ ಬೆಚ್ಚ ಮಾಡ್ದು ಹೇಳ್? (ಇಬ್ಬರೂ ನಗಾಡಿಕಂಡವೆ) ಹೆಂಗೂ ಈ ಮರ ನಾವ್ ಕಡ್ದೇ ಬಿದ್ದಿದ್ದಲ್ಲ ಅಲ್ಲ... (ಇವ್ ಕೆಲ್ಸ ಮಾಡಿಕಂಡ ಇರಕನ ಇದ್ದಕ್ಕಿದ್ದಂಗೆ ಶಂಕರಪ್ಪ ಬೀಡಿ ಎಳ್‌ಕಂಡ್ ಹೋಗ್ತಾ ಇದ್ದವೆ)

ಮಾರ: ಎಂಥ ಶಂಕರಣ್ಣ.. ನೋಡಿಯೂ ನೋಡದವರ ಹಾಗೆ ಹೋಗ್ತಾ ಒಳ. ಅಲ್ಲಾ... ಬಾ ಇತ್ತ.. ಕುದ್ದುಕ.. (ಶಂಕರಣ್ಣಂಗೆ ಒಂಥರಾ ಆದೆ) ಶಂಕರಣ್ಣ ಬೇರೆ ಯಾವುದಾದ್ರೂ.. ಬೋರ್ಡ್ರು ಗೀರ್ಡ್ರು ತಂದೆಳನಾ ಹೇಂಗೆ? (ತಮಾಷೆಲಿ)

ಶಂಕರಪ್ಪ: ಛೇ.. ಅಂಥದೇನಿಲ್ಲೆ ಬುಡು...

ಸಿದ್ದ: ಮತ್ತೆ ನಿಮ್ಮ ಅಂಗಡಿ ಹೇಂಗುಟ್ಟು?

ಶಂಕರಪ್ಪ: ಅಂಗಡಿ? ಯಾವ ಅಂಗಡಿಯಪ್ಪ?

ಸಿದ್ದ: ಅದೇ ಊರಳ್ಳಿ ಭೂತವೈದ್ಯ ಮತ್ತು ನೀ ಸೇರಿಕಂಡ್ ನಮ್ ನಾಡ್‌ನ ಮಧ್ಯೆ ಆಚೆ ಈಚೆ ಹೋದ ದಾರಿ ಕಡೆ

ಒಂದು ಸಣ್ಣ ಗುಡ್ಸ್‌ನ್ಲಿ ಮರದ ಪೆಟ್ಟಿಗೆಲಿ ಇಸಿಕಂಡ್ ಸಾರಾಯಿ ಮಾರ್ತಾ ಇಲ್ಲೇನಾ.. ಅದರ ಕೇಳ್ದು ನಾ.

ಶಂಕರಪ್ಪ: ಹೇ.... ಹೇ... ಅದ್..

ಸಿದ್ದ: ಒಳ್ಳೆ ಗ್ರಾಮ ಸೇವಕ ಆದ ನೋಡು ನೀ (ನೆಗಾಡುವೆ)

ಮಾರ: ಆತ್ ಹೋಗಲಿ... ಈಗ ಬಂದದ್ ಎಂತಕೆ? ಬೇರೆ ಯಾವುದಾರ್ ಬೋರ್ಡ್ ತಂದೊಳಾ ಹೇಂಗೆ? (ಮಾರ ಚುಡಾಯಿಸಿದ. ಶಂಕರಪ್ಪಂಗೆ ಕೋಪ ಬಂದರೂ ತೆ–ೂೀರ್ಸ್ಲದ್ಲೆ)

ಶಂಕರಪ್ಪ: ಅದೇ ಕರಿಯಂಗೆ ಸಾಂದ್ರ ಬೇಸಾಯಲಿ ನಷ್ಟ ಆಗಿತ್ತಲ್ಲಾ, ಅದ್ರ ಸರ್ಕಾರದವು ಕಟ್ಟಿಕೊಟ್ಟವೆ ಗಡ. ಅದ್ಕೆ ಆ ಅರ್ಜಿಗೆ ಕರಿಯನ ಸಹಿ ಬೇಕಿತ್. ಹಾಕ್ಸಿಕಂಡು ಹೋಗುಮಂತ ಬಂದೆ.

ಮಾರ: ಓ.. ಹಂಗೇನಾ?

ಶಂಕರಪ್ಪ: ಇದ್ಯಾವ್ದ ಮರ?

ಸಿದ್ದ: ಹಳೇ ಮರ. ಮೊನ್ನೆ ಬೀಸಿದ ಬಿರುಗಾಳಿಗೆ ಬಿದ್ದೋತು. ಇಲ್ಲಿದ್ದರೆ ಓಡಾಡಿಕೆ ಕಷ್ಟ ಆದೇಂತ ಭೈರಪ್ಪನೇ ಕೊಯ್ಯಸ್ತಾ ಉಟ್ಟು.

ಶಂಕರಪ್ಪ: ಅದ್ ಸರಿ... ಆದ್ರೆ ಮರನ ಬೆಳ್ದಿಂಗಳಲ್ಲಿ ಬೀಳ್ಸಿ ಕೊಯ್ಯುತಾ ಒಳರಲ್ಲಾ.. ಮರನ ಕೊಯ್ಯೋದು ಯಾಗೋಲೂ ಕದ್ದಿಂಗ್‌ಳ್‌ಲಿ ಅಂತ ಗೊತ್ತಿಲ್ಲೇನಾ ನೀವ್ಗೆ... ಏ...

ಸಿದ್ದ: ಮರ ಕುಯ್ಯಕ್ಕೆ ಪಂಚಾಗನ ನೋಡ್ವೇನಾ? ಇಂದ್‌ನ ಕಾಲಲಿ ಜಾತಕ ನೋಡದೇನೆ ಮದ್ವೆ ಮಾಡ್ವೆ..!

ಶಂಕರಪ್ಪ: ನಾ ಹಂಗಲ್ಲ ಹೇಳ್ದ್. ಕದ್ದಿಂಗ್‌ಳ್‌ಲಿ ಕೊಯ್ದರೆ ಆ ಮರಲಿ ಇರ್ವ ಭೂತ ಪಿಚಾಚಿಗೆಲ್ಲಾ ಸುತ್ತಿಕೆ ಹೋಗಿದ್ದವೆ ಗಡ. ಆಗ ಮರ ಕೊಯ್ದರೆ ಏನೂ ಆದ್ಲೆ.

ಮಾರ: ಬೆಳ್ದಿಂಗಳಾರೆ ಏನಾದೆ?

ಶಂಕರಪ್ಪ: ಬೆಳ್ದಿಂಗ್‌ಳ್‌ಲಿ ಕಡ್ದರೆ ಪಿಚಾಚಿಗೆ ಕೋಪ ಬಂದ್ ಆಮರಲಿ ಏನೆಲ್ಲಾ ಕೆಲ್ಸಗ ಮಾಡ್ಯೊಳನಾ.. ಅದ್ಕೆಲ್ಲಾ ಕುಟ್ಟೆ ಚೂರು ಹಿಡ್ಸಿ ಅದ್ ಮುರಿಯುವಂಗೆ ಮಾಡಿ ಮನೆನೇ ಹಾಳಾಗುವಂಗೆ ಮಾಡ್ದೆ ಗಡ.

ಮಾರ: ನಿನ್ ಮಾತ್ ಕೇಳ್ಕಂಡ್ ನಾವ್ ಬೆಳದಿಂಗಳ್ ಕದ್ದಿಂಗಳ್ ಅಂತ ಕುದ್ದರೆ ನಮ್ಮ ಹೊಟ್ಟೆ ತುಂಬಿದಾಂಗೆ ಬುಡ್ (ಗರಗಸಲಿ ಮರ ಕೊಯ್ಯಕೆ ಸುರು ಮಾಡ್ವೆ. ಗರಗಸ ಸ್ವಲ್ಪ ಗಟ್ಟಿಯಾಗಿ ಸಿಕ್ಯಾಕಂಡ್ ಕೊಯ್ಯಕ್ಕಾದ್ಲೆ) ಎಂತ ಸಿದ್ದ, ಗರಗಸ ಎಳ್ಯಕನ ಯಾಕೆ ಗಟ್ಟಿ ಹಿಡ್ಕಡೀಯ? ಸ್ವಲ್ಪ ಸಡ್ಲ ಬುಡು. ಯಾಕೆ ಕೈ ಬಚ್ಚಿತಾ?

ಸಿದ್ದ: ಇಲ್ಲೇ ಮಾರಾಯಾ. ಇದೇ ಮಾತ್ ನಿಂಗೆ ಹೇಳಕು ಅಂತನೇ ಇದ್ದೆ. ಗರಗಸ ಯಾಕೋ ಹಿಡ್ಕಂತ ಉಟ್ಟು. ಹೆಬ್ಬಲಸ್‌ನ ಮಾಯಣ ಗರಗಸಕ್ಕೆ ಹಿಡ್‌ದುಟು ಅಂತ ಕಂಡದೆ.

ಮಾರ: ಹಂಗಾರೆ ಆ ಸೀಮೆ ಎಣ್ಣೆ ಕುಪ್ಪಿ ತಕ (ಗರಗಸನ ಹೊರಗೆ ತೆಗ್ದು ಚಿಮಿಣಿ ಎಣ್ಣೆ ಮೆತ್ತಿ ಮರ ಕುಯ್ಯಕೆ ಸುರು ಮಾಡ್ವೆ. ಸ್ವಲ್ಪ ಹೊತ್ತಿಗೆ ಗರಗಸ ಪುನಃ ಹಿಡ್ಕಂಡದೆ) ಎಳೀ ಮಾರಾಯಾ... ಯಾಕೆ ಎಂತಾತ್?

ಸಿದ್ದ: ತಿರ್ಗ ಸಿಕ್ಕಾಕಂತ್ ನೋಡ್.

ಮಾರ: ತತ್.. ಸುಟ್ಟದ್, ರಟ್ಟೆ ಎಲ್ಲ ಪೈಪಿ ಬಾತ್ ಇದ್ರ ಒಳಗ ಯಾವ್ದೋ ದೆವ್ವ ಹೊಕ್ಕಿಟೂಂತ ಕಂಡದೆ.

ಸಿದ್ದ: ನೋಡ್.. ಗರಗಸ ತೆಗ್ದು ಇನ್ನು ಸ್ವಲ್ಪ ಚಿಮಿಣಿ ಎಣ್ಣೆ ಮೆತ್ತುಮ, ತೆಗ್ಯದರ. (ಇಬ್ಬರೂ ಗರಸಗನ ಹೊರಗೆ ತೆಗ್ಯಕೆ ಎಷ್ಟೇ ಪ್ರಯತ್ನ ಮಾಡಿರೂ ಗರಗಸ ಹೊರಗೆ ಬಾದ್ಲೆ. ಶಂಕರಪ್ಪನೂ ಇವರೊಟ್ಟಿಗೆ ಸೇರಿ ಕಂಡದೆ. ಆದರೂ

ಪ್ರಯೋಜನ ಆದ್ಲೆ) ಅರೆರೆ ಮಾರ... ಶನಿ ಕೈಕೊಟ್ಟತ್ ನೋಡ್. ಇನ್ನೊಮ್ಮೆ ಎಳ್ಯೊಮೆ. (ಪ್ರಯತ್ನ ಪಟ್ಟಂಗೆ ಅದ್ ಅತ್ತಿತ್ತ ಹೊಸ್‌ಕದೆ ಕಲ್ಲ್‌ನಂಗೆ ಗಟ್ಟಿಯಾಗಿ ನಿಂತತ್. ಸಬ್ಬಲ್‌ತಂದ್ ಮರದ ತೂತಿಗೆ ಹಾಕಿ ತೆಗ್ಯಕೆ ಪ್ರಯತ್ನ ಪಟ್ಟವೆ. ಜಪ್ಪಯ್ಯಂತೇಳ್ರೂ ಗರಗಸ ಹೊರಗೆ ತೆಗ್ಯಕೆ ಆದ್ಲೆ.)

ಶಂಕರಪ್ಪ: ಇದ್ ಆಗೋ ಹೋಗೋ ಕೆಲ್ಸ ಅಲ್ಲ. ನಾ ಹೋಗಿ ಕರಿಯನ ಕರ್ಕಂಡ್ ಬಂದನೆ. (ಶಂಕರಪ್ಪ ಹೋದೆ. ಸಿದ್ದ ಮಾರ ಮತ್ತೊಮ್ಮೆ ಗರಗಸನ ತೆಗ್ಯಕೆ ಎಲ್ಲಾ ರೀತಿಲೂ ಪರ್‌ದಾಡ್ವೆ. ಕೊನೆಗೆ ಆಗದೇ ಇರಿಕನ ತಲೆ ಮೇಲೆ ಕೈ ಇಸಿಕಂಡ್ ಕುದ್ದವೆ)

ಭೈರಪ್ಪ: (ಗದ್ದೆ ಕೆಲ್ಸ ಮುಗ್ಸಿ ಬರ್ತಾ ಇದ್ದದೆ) ವೋಯ್.. ಇದೆಂತ..? ತಲೆ ಮೇಲೆ ಹೀಂಗೆ ಕೈ ಹೊತ್‌ಕಂಡ್ ಕುದ್ದಳೊರಿ...

ಸಿದ್ದ: ಭೈರಪ್ಪ, ಗರಗಸ ಗಟ್ಟಿಯಾಗಿ ಹಿಡ್ಕಂಟು. ಎಷ್ಟು ಎಳ್ದರೂ ಅತ್ತ ಇತ್ತ ಅಲ್‌ಗಾಡ್ತನೇ ಇಲ್ಲೆ.

ಮಾರ: ಇದ್ ದೆವ್ವದ ಕಾಟನೇ ಇರಕು. ಇಲ್ಲಾರೆ ಹೀಂಗೆ... ಇಷ್ಟು ಗಟ್ಟಿಯಾಗಿ ಹಿಡ್ಕಂತಿಲ್ಲೆ.

ಭೈರಪ್ಪ: ಆಗಾಗ ಗರಗಸನ ಹೊರಗೆ ತೆಗ್ದು ಚಿಮಿಣಿ ಎಣ್ಣೆ ಹಾಕಕಿತ್ತು.

ಮಾರ: ಹಾಕಿದಾ..

ಭೈರಪ್ಪ: ಎಂತ ಹಾಕಿದರ್‌ಯೋ... ಮಾಡ್ದು ಮಾಡ್ಕಂಡ್ ಈಗ ದೆವ್ವದ ಕಾಟ ಅಂತೇಳಿ. ಅಷ್ಟು ದುಡ್ಡು ಕೊಟ್ಟು ತಂದ ಗರಗಸಾನ ಹಾಳ್ ಮಾಡಿ ಹಾಕ್ ಬುಟ್ಟರಿ. (ಒಮ್ಮೆ ಮಾರನೊಟ್ಟಗೆ ಮತ್ತೊಮ್ಮೆ ಸಿದ್ದನೊಟ್ಟಗೆ ನಿಂತ್‌ಕಂಡ್ ಭೈರಪ್ಪ ಗರಗಸ ಹೊರಗೆ ಎಳ್ಯಕೆ ಹೆಂಗೆಲ್ಲಾ ಪ್ರಯತ್ನ ಪಟ್ಟಿದೆ. ಕೊನೆಗೂ ಆಗದೇ ಅವ್ಕೆ ಇಬ್ಬರಿಗೂ ಶಾಪ ಹಾಕ್ಕಂಡ್ ಹೋದೆ. ಮಾರ ಸಿದ್ದ ತಮ್ಮ ಗ್ರಾಚಾರಕ್ಕೆ

ಬೇಜಾರ್ ಮಾಡ್ಕಂಡ್ ತಲೆ ಮೇಲೆ ಬಟ್ಟೆ ಹಾಕ್ಕಂಡ್ ಕುದ್ದವೆ. ಅಷ್ಟಾಕನ ರುದ್ರಿ, ಕಾಳಿ, ಈರಿ, ನಾಗಮ್ಮ, ದಾನಮ್ಮ ಅಲ್ಲದೆ ಇನ್ನು ಸ್ವಲ್ಪ ಹೆಣ್ಣು ಆಳುಗ ಆ ದಾರಿಲಿ ಬಂದವೆ. ರಬರಬಂತ ಹೋಗುತ್ತಿದ್ದವು. ಮಾರ–ಸಿದ್ದನ ನೋಡಿ ಗಬಕ್ಕನೆ ನಿಂತವೆ)

ರುದ್ರಿ: ಅರೆ... ನಿಂಗೆಂತಾತ್... ಒಳ್ಳೆ ಆಕಾಶನೇ ತಲೆಮೇಲೆ ಬಿದ್ದವರ ಹಾಂಗೆ ಕುದ್್ಕಂಡಳಲ್ಲ.

ಮಾರ: ಮರದ ಮಾಯಣ ಗರಗಸನ ಗಟ್ಟಿಯಾಗಿ ಹಿಡ್ಕಂಟು. ಎಷ್ಟು ಎಳ್ದರೂ ಬಾತನೇ ಇಲ್ಲೆ.

ರುದ್ರಿ: ಬಾದ್ಲೆಗಡ.. ಬಾದೆ ಇಲ್ಲೆ ಗಡ.. ಹೇ... ಹೇ... ಮುಸುಂಡು ನೋಡು ಹೇಂಗುಟ್ಟೂಂತ? ಯಾವ ಕೆಲ್ಸನ ನೀವ್ ನೆಟ್ಟಂಗೆ ಮಾಡ್ಯೋಳರಿ? ಎಲ್ಲಾ ಹೀಂಗೆನೆ. ನೀವ್ ಹಾಳಾಗಿ ಹೋದಲ್ಲದೆ ಕೆಲ್ಸ ಕೊಟ್ಟವರನ್ನೂ ಹಾಳ್ ಮಾಡ್ಯರಿ. (ಮಾರಂಗೆ ನನ್ನ ಹೆಣ್ಣು ಎಲ್ಲರ ಎದುರಿಗೆ ಬೈದದ್ ನೋಡಿ ಕೋಪ ಬಂದಿದ್ದದೆ. ಅದ್ಕೆ ಹೊಡ್ಯಕು ಅಂತ ಅನ್ಸಿರೂ ಅವಂದ ನಾಲ್ಕು ಪಟ್ಟು ಹೆಚ್ಚು ಗಟ್ಟಿ ಇದ್ದ ರುದ್ರಿಗೆ ಕಾಲೆತ್ತಿಕ್ಕಾಗದೆ ಗುರ್ ಅಂತ ನೋಡಿ ಸಿದ್ದನ ಕಡೆಗೆ ತಿರ್ಗಿ)

ಮಾರ: ಅಲ್ಲಾ.. ಈ ಮೂರ್‌ಕಾಸ್‌ನ ಹೆಣ್ಣ್‌ಗೆ ಸೊಕ್ಕೆಷ್ಟು ನೋಡು..

ರುದ್ರಿ: ಏಯ್... ನಾ ಮೂರು ಕಾಸಿಗೆ ಇನ್ನೊಬ್ಬನ ಹಕ್ಕಲೆ ಹೋದ್ ನೀ ನೋಡ್ಯಳನಾ? ಇಂಥ ತಗಡ್ ಕೆಲ್ಸ ಮಾಡಿಕಂಡ್ ನಂಗೇ ರೇಟ್ ಕಟ್ಯನಾ? ಗಂಡಸಾಗಿದ್ದರೆ ಆ ಗರಗಸನ ತೆಗಿ ನೋಡುಮ. (ಪರಿಸ್ಥಿತಿ ಸೂಕ್ಷ್ಮ ಆದರ ನೋಡಿ ಸಿದ್ದ ಸಮಾಧಾನಲಿ ಮಾತಾಡ್ದೆ)

ಸಿದ್ದ: ಅಮ್ಮಾ... ದೇವ್ರು... ನಾವು ಬೇಕೂಂತ ಏನ್ ಮಾಡ್ತ್ಲೆ. ಒಟ್ಟಾರೆ ನಮ್ಮ ಗ್ರಾಚಾರ ಸರಿ ಇಲ್ಲದಿದ್ದರೆ ಯಾರ್ ಏನ್

ಮಾಡಿಕಾದೆ? ದಮ್ಮಯ್ಯ ಹೋಗು ಮುಂದೆ.

ರುದ್ರಿ: ನನ್ನ ಗಂಡಂಗೆ ನಾ ಹೇಳಿರೆ.. ನಿಂಗೇನಾತ್? ಸುಮ್ಮಂಗೆ ಮುಚ್ಚಿಕಂಡ್ ಇರ್.

ದಾನಮ್ಮ: ಏಂತದ್ದೋ.. ಬುದ್ಧಿ ಮಾತ್ ಹೇಳಿಕೆ ಹೋದರೆ ನಮ್ಮ ಮೇಲೆ ಬಂದವೆ ಈ ಸಿಳ್ಳೆಕ್ಯಾತಗಳಿಗೆ ಎಷ್ಟ್ ಹೇಳ್ಯಿರೂ ಎಮ್ಮೆ ಮೇಲೆ ಮಳೆ ಬಂದಂಗೆ.

ಸುಬ್ಬಮ್ಮ: ಏಯ್... ನಡ್ಯನಿ ಅತ್ತ.. ಹೆಂಗಾರ್ ಸಾಯ್ಲಿ. ಇವು ಸುಟ್ಟವು ತಲೆ ಕೆಟ್ಟುಟು. ನಾವ್ಗೇನ್ ಆಕು?

ದಾನಮ್ಮ: ನಡ್ಯನಿ.. ನಡ್ಯನಿ.. (ಎಲ್ಲವೂ ದಡದಡಾಂತ ಹೋದವೆ)

ಸಿದ್ದ: ಥತ್... ಆ ದಾನಮ್ಮನ ಗಾಳಿ ಎಲ್ಲವ್ಕೂ ಬೀಸಿಟು. ಇಡೀ ಕೇರಿಕೇರಿನೇ ಗಯ್ಯಾಳಿ ಮುಂಡೆಗಳ ಕೇರಿ ಆಗೋತ್.

ಮಾರ: ಹೂಂ.. ಬರೀ ಗಾಂಚಾಲಿ ಮುಂಡೇಗ. ವೊಲೆ ಬಂದವ್ಕೆ ನೆಲ ಕಾಂಬದ್ಲೆ ಗಡ, ಮೈಲಿ ಸೊಕ್ಕು. ಒಬ್ಬೊಬ್ಬ ಹತ್ತ್ ಹತ್ತ್ ಹೆರುವ ಹಾಂಗೆ ಮಾಡಕು. ಪುರುಸೊತ್ತ್ ಕೊಡಿಕಾಗದ್. ಹಂಗಾಕನನೇ ನೋಡು ಈ ಹಾಳು ಮುಂಡೇಗಳ ಒಂದು ದಾರಿಗೆ ತಾಕೆ ಅದು. ಇಲ್ಲಾರೆ ಈ ನಾಡ್‌ನನ್ನೇ ಮಾರಿ ಬುಟ್ಟವೆ. ಏನೇಳಿಯಾ?

ಸಿದ್ದ: ಊಂ.. ಹಂಗೇ ಮಾಡುವ ಬುಡು.

ಮಾರ: ಆಂ.. (ಒಬ್ಬರನ್ನೊಬ್ಬರ ವೋರೆ ನೋಡಿಕಂಡ್ ನಗಾಡುವೆ. ಅಷ್ಟೊತ್ತಿಗೆ ಪೊಲೀಸ್ ಪೇದೆ ಒಬ್ಬ ಬಂದದೆ)

ಪೊಲೀಸ್: ಏಯ್... ಯಾರ್ ಅದ್.

ಸಿದ್ದ: ನಾವು ಪೊಲೀಸಣ್ಣ ಮಾರ, ಸಿದ್ದ.

ಪೊಲೀಸ್: ಏನ್ ಮಾಡ್ತಾ ಒಳರಿ ಇಲ್ಲಿ?

ಸಿದ್ದ: ಮರ ಕೊಯ್ತಾ ಇದ್ದ ಪೊಲೀಸಣ್ಣ.

ಪೊಲೀಸ್: ನೋಡು... ಭೈರಪ್ಪ, ಸುಬ್ಬಯ್ಯ, ರಾಮಣ್ಣ, ಕಾಳೇಗೌಡ, ಸೀಗೇಗೌಡ ಇವರೆಲ್ಲರ ಪೊಲೀಸ್ರು ಕರ್‌ದವೆ ಅಂತ ಹೇಳಿ ಕರ್‌ಕಂಡ್ ಬಾ.

ದೃಶ್ಯ–11

(ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ತಲೆ ಬಗ್ಗಿಸಿಕಂಡ್ ಯಾವುದೋ ಫೈಲು ನೋಡ್‌ಕಂದ್ ಕುದ್ದುಟು. ಒಂದು ಮೂಲೆಲಿ ಕೋವಿ ಹಿಡ್ಕಂಡ್ ಸೆಂಟ್ರಿ ನಿತ್ತುಟು. ಕಾನ್ಸ್‌ಟೇಬಲ್ ನಾರಾಯಣ ಕಿರ್‌ಗೂರ್‌ನವರ ಕರ್ಕಂಡು ಬಂದದೆ)

ಕಾನ್ಸ್‌ಟೇಬಲ್: ಸಾರ್... ನೀವ್ ಹೇಳ್ದಾಂಗೆನೆ ಅಷ್ಟೂ ಮಂದಿನ ಎಳಕಂಡ್ ಬಂದೊಳೆ ಸಾರ್.

ಇನ್ಸ್‌ಪೆಕ್ಟರ್: (ತಲೆ ಮೇಲೆ ಎತ್ತದೆ) ಎರ್ಡು ಬಡ್‌ದ್ ಒಳಗೆ ಹಾಕ್.. ಈ ಸೂಳೆ ಮಕ್ಕಳ..

ಕಾನ್ಸ್‌ಟೇಬಲ್: (ಅಲ್ಲೀವರೆಗೂ ಸುಮ್ಮನಿದ್ದವ ಜೋರ್‌ಲಿ) ಏಯ್.. ಥೂ... ಥ್.. ಎಂಥ ನೋಡ್ತಾ ಒಳರಿ? ನಡ್ಯನಿ ಒಳಗೆ ಬೇವರ್ಸಿಗಾ.. (ಎಲ್ಲರ ಲಾಕಪ್ಪೊಳಗೆ ದೂಡ್‌ದೆ) ಎಲ್ಲಿ ನೋಡುಮ ನಿಮ್ಮ ಶರಟು ಪಂಚೆ ಎಲ್ಲಾ ಇತ್ತ ಬಿಚ್ಚಿ ಕೊಡಿ.. ಇಲ್ಲಾರೆ ಅದರ್‌ಲೇ ಮತ್ತೆ ಕುತ್ತಿಗೆಗೆ ಹಗ್ಗ ಹಾಕಿಕಂಡರೆ ನಮ್ಮ ತಲೆಗೆ ಬಂದೆದೆ ಅಷ್ಟೆ. (ಹೆದರಿ ಹೋದ ಕಿರ್‌ಗೂರ್‌ನವು ನಾಚಿಕೆ, ಮುಜುಗರಲಿ ಶರಟು ಪಂಚೆ ತೆಗ್ಯದೆ ಜಬರ್‌ದಸ್ತ್ ಮಾಡ್ದೆ. ವಿಧಿ ಇಲ್ದೆ ಎಲ್ಲಾ ತೆಗ್ದು ಕೊಟ್ಟವೆ. ಅದನ್ನೆಲ್ಲಾ ಒಂದು ಮೂಲೆಗೆ ಬಿಸಾಡಿ ನಾರಾಯಣ ಲಾಕಪ್ಪಿಗೆ ಬೀಗ ಹಾಕಿದೆ)

ಇನ್ಸ್‌ಪೆಕ್ಟರ್: ನಾರಾಯಣ..

ಕಾನ್ಸ್‌ಟೇಬಲ್: ಬಂದೆ ಸಾರ್..

ಇನ್ಸ್‌ಪೆಕ್ಟರ್: ನಡೀ ಈಗಲೇ.. ಕೂಡ್ಲೇ ಜೀಪ್ ಸ್ಟಾರ್ಟ್ ಮಾಡ್. ಅರ್ಜೆಂಟಾಗಿ ಹೋಕು. ಒಂದು ಕೇಸುಟ್ಟು. (ಇಬ್ಬರೂ ದಡದಡಾಂತ ಹೋದವೆ. ಮೂಲೆಲಿದ್ದ ಸೆಂಟ್ರಿ ಮಾತ್ರ ನಿತ್ತಲ್ಲೆ ತೂಕಡಿಸ್ತಾ ಉಟ್ಟು. ಲಾಕಪ್ಪಲಿ ಇದ್ದ ಕಿರ್‌ಗೂರ್‌ನವು ಅಲ್ಲಿನ ಪಾಯಿಖಾನೆ ವಾಸನೆಗೆ ಮೂಗು ಮುಚ್ಚಿಕಂಡ್ ನುಸಿಗ ಕಚ್ಚಿದಾಂಗೆಲ್ಲಾ ಕೈಕಾಲಿಗೆಲ್ಲಾ ಪಟಪಟಾಂತ ಬಡ್ಕಂಡ್ ಅವ್ ಅವೇ ಮೈ ಪರಚಿಕಂಡವೆ)

ರಾಮಣ್ಣ: ಅದ್ಯಾರ ಮೋರೆ ನೋಡಿಕಂಡ್ ಎದ್ದೆನಾ ಇಂದ್. ಅದ್ಯಾವ ಜನ್ಮದ ಕರ್ಮನೋ.

ಸುಬ್ಬಯ್ಯ: ಇಡೀ ರಾತ್ರಿ ಈ ಪಾಯಿಖಾನೆ ವಾಸನೆ ಮೂಸಿಕಂಡ್, ನುಸಿಗಳ ಕೈಲಿ ಕಚ್ಚಿಸಿಕಂಡ್ ದಿನ ಕಳ್ಯಕು ಕಂಡದೆ. ನಾವು ಏನ್ ಮಾಡ್ಯಳಾಂತ ಈ ಉಚ್ಚೆ ಗುಂಡಿಲಿ ಹಾಕ್ಯಳ ನಮ್ಮ?

ಸೀಗೇಗೌಡ: ಏನ್? ಎತ್ತ? ಅಂತ ಕೂಡಾ ವಿಚಾರ್‌ಸದೆ ಹೇಂಗೆ ಅಂಗಿ ಬಿಚ್ಚಿ ಒಳಗೆ ಹಾಕ್ಯಳಲ್ಲಾ..?

ಕಾಳೇಗೌಡ: ಪೊಲೀಸ್ ಸ್ಟೇಷನ್ ಒಳಗೆ ಬರುವವೆಲ್ಲಾ ಇದ್ಕೆ ಕಳ್ಳರ ಹಾಂಗೆ ಕಾಂಬಂದು ಏನೋ..

ಸೀಗೇಗೌಡ: ಇವ್ಕೆ ಇಪ್ಪತ್ತೈದು ಕಾನೂನುಗ ಉಟ್ಟು ಕಂಡದೆ. ನಿತ್ತರೆ ಒಂದು ಕಾನೂನು ಕುದ್ದರೆ ಒಂದು ಕಾನೂನು.

ಭೈರಪ್ಪ: ಹಂಗರೆ ಎಂತದೋ ಒಂದು ಕಾನೂನು ಹಾಕಿ, ಯಾರ್ನ ಬೇಕಾರ್ ಜೈಲಿಗೆ ಹಾಕಕ್ ಕಂಡದೆ..

ಸುಬ್ಬಯ್ಯ: ಹೂಂ.. ಜಾಮೀನು ಕೊಟ್ಟು ಬುಡ್ಸಿಕಂಡ್ ಹೋಕೆ ಜನಂಗ ಇರಕು. ಇಲ್ಲೇಂತೇಳ್ರೆ ಇಲ್ಲಿದ್ದವ ಸತ್ತಂಗನೇ ಲೆಕ್ಕ.

ರಾಮಣ್ಣ: ಹಂಗಾರೆ ನಾವ್ಗೆ ಜಾಮೀನು ಕೊಟ್ಟು ಬುಡ್ಸಿಕಂಡ್ ಹೋದು ಯಾರಪ್ಪ?

ಸೀಗೇಗೌಡ: ನಮ್ಮ ಬುಡ್ಸಿಕೆ ಯಾರ್ ಬಂದವೆ ಹೇಳಿ. ನಮ್ಮ

ವಿಚಾರ್ಸಿಕೆ ಅಂತ ಪೊಲೀಸ್‌ನವು ಕರ್‌ಕಂಡ್ ಬಂದದ್ದ್ ಎಲ್ಲವ್ಕ ಗೊತ್ತುಟು. ಆರೆ ನಮ್ಮ ಲಾಕಪ್ಪಿಗೆ ಹಾಕಿರ್‌ದು ಅವ್ಕೆ ಹೆಂಗೆ ಗೊತ್ತಾದೆ ಬಂದು ಜಾಮೀನು ಕೊಟ್ಟು ಬುಡ್ಸಿಕಂಡ್ ಹೋಕೆ? (ಕಾಳೇಗೌಡ ಇದ್ದಕ್ಕಿದ್ದ ಹಾಂಗೆ ಹಾವು ಕಂಡವರ ಹಾಂಗೆ ಹೆದರಿಕೆಲಿ ಕಿರ್‌ಚಿಕಂಡ್ ಅತ್ತ ಹಾರಿ ಒಂದು ಮೂಲೆಗೆ ಹೋಗಿ ನಡ್‌ಗಿದೆ. ಉಳ್‌ದವ್ಕೆ ಎಂಥತನೇ ಅರ್ಥ ಆಗದೆ ಕೂಡ್ಲೇ ಅವ ಹೆದರಿದಂಗೆ ಇವೂ ಹೆದರುವೆ)

ಸೀಗೇಗೌಡ: (ಸರಿ ಮಾಡಿಕಂಡ್) ಎಂಥ ಆತ್..? ಕಾಳೇಗೌಡ ಹೆಗ್ಗಣಾ... ಹೆಗ್ಗಣಾ.. (ಎಲ್ಲವೂ ಒಮ್ಮೆ ಆರಾಮಲಿ ಉಸುರು ಬುಟ್ಟುಕಂಡವೆ. ಸ್ವಲ್ಪ ಹೊತ್ತು ಯಾರು ಮಾತಾಡ್‌ದುಲೆ. ಆಮೇಲೆ ಸುಬ್ಬಯ್ಯಂಗೆ ದುಃಖ ತಡ್ಯಕ್ಕಾಗದೆ, (ಉಕ್ಕುಡ್ಸಿ ಉಕ್ಕುಡ್ಸಿ ಮರ್‌ಟದೆ)

ಸುಬ್ಬಯ್ಯ: ಇಷ್ಟು ವರ್ಷ ಮರ್ಯಾದೆಲಿ ಬದುಕಿದ ನಾವ್ಗೆ ರಾತ್ರಿ ಎಲ್ಲಾ ಲಾಕಪ್‌ಲಿ ಕೋಮಣ, ಚಡ್ಡಿಲಿ ಇರುವಾಂಗೆ ಆತ್‌ಲ್ಲಾ ಥೇ.. ನಾವ್ಗೆ ಯಾರೂ ಇಲ್ಲದೇ ಅನಾಥರಾಗಿ ಹೋದ. (ಉಕ್ಕುಡ್ಸಿ ಮರ್‌ಡುದರ ಮುಂದು ವರ್ಸಿದೆ)

ಸೀಗೇಗೌಡ: (ಬೈದ್) ಏಯ್.. ಸುಮ್ಮನಿರ್ ಸ್ವಲ್ಪ.. ಅಲ್ಲಿ ನೋಡ್ ಯಾರೋ ನಿಂತೊಳಾ.. ಅವನ ಕೇಳುಮಾ.. ನಮ್ಮ ಬುಟ್ಟರೂ ಬುಡ್ದು..

ಕಾಳೇಗೌಡ: ಆತ್... ಆತ್... ಹೇಳ್ದಂಗೆ ನೀನೇ ಸುರುಗೆ ಕೇಳ್.

ಸೀಗೇಗೌಡ: (ಸೆಂಟ್ರಿಗೆ) ಅಯ್ಯಾ.. ಅಣ್ಣ.. ಅಪ್ಪಾ.. ನಾವೂ ಎಂತದ್ದೂ ಮಾಡ್‌ತ್ಲೆ. ನಮ್ಮ ಬುಟ್ಟು ಬುಡಣ್ಣ (ಸೆಂಟ್ರಿ ತೂಕಡಿಸ್ ಕಂಡೇ ಇದ್ದದೆ)

ಎಲ್ಲವೂ: (ಒಟ್ಟಾಗೆ) ಅಣ್ಣಾ.. ಅಪ್ಪಾ.. ನಾವು ಎಂಥದೂ ಮಾಡ್‌ತ್ಲೆ. ನಮ್ಮ ಬುಟ್‌ಬುಡ್ ನಿನ್ನ ದಮ್ಮಯ್ಯಾ..

ಸೆಂಟ್ರಿ: (ತೂಕಡ್‌ಸ್ತಿದ್ದವ್ ದಡಕ್ಕಂತ ಎದ್ದ್) ಏಯ್.. ಸುಮ್ನಿರಿ.. ನಿಮ್ಮಕ್ಕಲೆ ಯಾರೂ ಇಲ್ಲೇನಾ..? ಜಾಮೀನು ಕೊಟ್ಟು ಬುಡ್ಸಿಕಂಡ್ ಹೋಕೆ? ಯಾರಾರ್ ಬಾಕನ ಮುಟ್ಟ ಸುಮ್ಮಂಗೆ ಬಾಯಿ ಮುಚ್ಚಿಕಂಡ್ ಇರಿಕೆ ಅದ್ಲೆನಾ? ಈಗೆ–ಂಥಾ ನಾವ್ ನೀವ್ಗೆ ಬಡ್‌ದನಾ ಹೊಡ್‌ದನಾ ಹಿಂಗೆ ಬಾಯಿ ಬಡ್ ಕಣಿಕೆ. (ಎಲ್ಲವೂ ಸುಮ್ಮನಾದವೆ. ಸೆಂಟ್ರಿ ಅವನ ಜಾಗಕ್ಕೆ ಹೋಗಿ ನಿತ್ತದೆ. ಜೀಪು ಬಂದ್ ನಿಂತ ಶಬ್ದ ಕೇಳ್ದೆ. ನಾರಾಯಣ ಇನ್ನೂ ಮೂರ್‍ನಾಲ್ಕು ಜನರ ಎಳ್ದು ತಂದು ಕೈಲಿದ್ದ ದೊಣ್ಣೆಂದ ಚುಚ್ಚಿದೆ. ಇನ್ಸ್‌ಪೆಕ್ಟರ್ ಬಂದ್ ಅವನ ಜಾಗಲಿ ಕುದ್ದದೆ)

ಕಾನ್ಸ್‌ಟೇಬಲ್: ಸಾರ್.. ಸರಿಯಾಗಿ ಕೈಕಾಲು ಮುರ್ದು ಬೀಳುವಾಂಗೆ ಕೊಟ್ಟಳೆ ಸರ್.

ಇನ್ಸ್‌ಪೆಕ್ಟರ್: ಮುರ್‌ದರೆ ಮುರಿಯಲಿ ಬುಡು. ನಾ ನೋಡಿಕಂಡನೆ.

ಕಾನ್ಸ್‌ಟೇಬಲ್: ಇಲ್ಲೆ ಸಾರ್. ನೀವು ನೋಡಿಕಂಬಂದು ಎಂಥದ್ದೂ ಇಲ್ಲೆ ಸರ್. ನಾನೇ ಎಲ್ಲ ಮುಗ್‌ಸ್ಯೊಳೆ. ಇನ್ನ್ ಮೇಲೆ ಎದ್ರುವ ಹಾಂಗಿಲ್ಲೆ ಸರ್ ಅವು.

ಇನ್ಸ್‌ಪೆಕ್ಟರ್: ಒಳ್ಳೆದಾತ್. ನೀ ಹೋಗಿ ನಿದ್ದೆ ಮಾಡ್.

ಕಾನ್ಸ್‌ಟೇಬಲ್: ಅವರ ಎಂತ ಮಾಡ್ದು ಸರ್.

ಇನ್ಸ್‌ಪೆಕ್ಟರ್: ಮಾಡ್ದು ಎಂತ? ಲಾಕಪ್ಪಿಗೆ ದೂಡ್. ಉಚ್ಚೆ ಕುಡ್ಯತಾ ಬಿದ್ದಿರ್‍ಲಿ.

ಕಾನ್ಸ್‌ಟೇಬಲ್: ಅಲ್ಲಿ ಜಾಗ ಇಲ್ಲೆ ಸಾರ್.

ಇನ್ಸ್‌ಪೆಕ್ಟರ್: ಜಾಗ ಇಲ್ಲೆ? ಯಾಕೆ?

ಕಾನ್ಸ್‌ಟೇಬಲ್: ಬೆಳಿಗ್ಗೇನೇ ನಾಲ್ಕೈದು ಮಂದಿನ ಒಳಗೆ ಹಾಕ್ಯಳಲ್ಲ ಸಾರ್.

ಇನ್ಸ್‌ಪೆಕ್ಟರ್: ಯಾರ್ ಅವು? ಯಾಕೆ ಒಳಗೆ ಹಾಕಿದ್?

ಕಾನ್ಸ್‌ಟೇಬಲ್: ನೀವೇ ಹೇಳ್ದಲ್ಲಾ ಸಾರ್.. ಒಳಗೆ ಹಾಕ್ ಅಂತಾ.

ಇನ್ಸ್‌ಪೆಕ್ಟರ್: ಯಾರ್ ಅವು? ಕರ್ಕಂಡು ಬಾ ಇತ್ತ. (ಕಾನ್ಸ್‌ಟೇಬಲ್ ನಾರಾಯಣ ಲಾಕಪ್‌ಲಿದ್ದ ಕಿರಗೂರ್‌ನವರ ಕರ್ಕಂಡು ಬಂದದೆ)

ಇನ್ಸ್‌ಪೆಕ್ಟರ್: ಯಾರ್ ನೀವು? ಇಲ್ಯಾಕೆ ಬಂದದ್ದ್..?

ಎಲ್ಲವೂ: (ಮೌನ ಬಾಯಿ ಮುಚ್ಚಿ)

ಇನ್ಸ್‌ಪೆಕ್ಟರ್: ಏಯ್... ಎಂಥ ಮೋರೆ ನೋಡಿಕಂಡ್ ನಿಂತೊಳರಿ? ಬೊಗಳಿ... ಸೂಳೇ ಮಕ್ಕ (ಅವ ಬಾಯಿ ಬಡ್ಯದು ನೋಡಿ ಎಲ್ಲವ್ಕೂ ಹೆದರಿಕೆ ಆದರೂ ಯಾರೂ ಉತ್ತರ ಕೊಡುದ್ಲೆ)

ಕಾನ್ಸ್‌ಟೇಬಲ್: ಸಾರ್... ಬೊಳ್ಪಿಗೆ ಕಿರ್‌ಗೂರ್‌ಂದ ಕರ್ಕಂಡು ಬಾ ಅಂತ ನೀವೇ ಹೇಳ್ದಲ್ಲಾ ಸಾರ್.

ಇನ್ಸ್‌ಪೆಕ್ಟರ್: ಓ... ಹೋ... ಕಿರ್‌ಗೂರ್‌ನವಾ.. ನೀವು?

ಎಲ್ಲವೂ: (ಹೌದು ಅಂತ ತಲೆ ಆಡ್ಸುವೆ)

ಇನ್ಸ್‌ಪೆಕ್ಟರ್: ಏನ್.. ಊರ್ಲಿ ಜಾತಿ ಜಗಳ ಸುರು ಮಾಡ್ಯೋಲರಿಗಡ? ಏನಾರೂ ಬೇಕಾ? ಇನ್ನೊಂದು ಸರ್ತಿ ಹರಿಜನರ ವಿಷಯಕ್ಕೇನಾರೂ ಹೊದರೆ.. ಭೂತ ಭೂತ ಬುಡ್ಸಿ ಬುಟ್ಟನೆ ನೋಡಿ. ಅನ್‌ಟಚಬಿಲಿಟಿ ಕೇಸ್ ಹಾಕಿ ಒಂದು ವರ್ಷ ಜೈಲಿಗೆ ಹಾಕಿನೆ ನೋಡಿ.. ಜಾಗ್ರತೆ.. ಕಳ್ಸ್ ಅವರ ಇಲ್ಲಿಂದ.

ಕಾನ್ಸ್‌ಟೇಬಲ್: (ಅವರ ಅಂಗಿಗಳ ತಿರ್‌ಗ್ಸಿ ಕೊಟ್ಟು) ಹೂಂ.. ಬದ್‌ಕಿದಿರಿ ಇಂದ್.. ಹೋಗಿ ಹೋಗಿ ಅತ್ತ.. (ನಾರಾಯಣ ಕೊಟ್ಟ ಅಂಗಿ ತಕಂಡು ಹೊರಟವೆ)

ದೃಶ್ಯ–12

(ಕಾಡ್‌ದಾರಿ, ಮಧ್ಯರಾತ್ರಿ ಹೊತ್ತು, ಪೊಲೀಸ್ ಸ್ಟೇಷನ್‌ಂದ ಹೊರಗೆ ಬಂದ ಕಿರ್‌ಗೂರ್‌ನವು ಚಳಿಲಿ ನಡ್‌ಗಿಕಂಡ್ ಬರ್‍ತಾ ಇದ್ದವೆ)

ಸೀಗೇಗೌಡ: ಎಲ್ಲಾ ನಮ್ಮ ಹಣೇಬರ, ವಿಧಿ, ಎಂಥ ತಪ್ಪು ಮಾಡದೇ ಇದ್ದರೂ ಚಳಿಲಿ ಕೊಳ್ಯಕಾಗಿ ಬಾತ್.

ಸುಬ್ಬಯ್ಯ: ಆ ಶಂಕರಪ್ಪನ ಬೋರ್ಡ್ ಎಳ್ದು ಬಿಸಾಡ್‌ದಕ್ಕೆ ಇಷ್ಟೆಲ್ಲಾ ಆದ್ ಅಂತ ತಿಳ್ಕಂಡಿದ್ದೆ. "ಹರಿಜನರ ಸುದ್ದಿಗೋದರೆ ಕೇಸ್ ಹಾಕಿ ಜೈಲಿಗೆ ಹಾಕಿನೆ ಅಂತ ಇನ್ಸ್‌ಪೆಕ್ಟರ್ ಬಾಯಿ ಬಡ್ದ ಮೇಲೆನೇ ನಂಗೆ ಗೊತ್ತಾದ್... ಇದೆಲ್ಲಾ ಆ ಹಳ್ಕಟ್ ಮಕ್ಕಳ್ದೇ ಕಿತಾಪತಿ ಅಂತ.

ರಾಮು: ನಮ್ಮೂರ್‍ಲಿ ಇನ್ನೆಲ್ಲಾರ ಒಂದ್ ಹಸ್‌ಕರ್ ಸತ್ರೂ ಬಂದು ತಕಂಡೋಗಿ ಅಂತ ಅವ್ಕೆ ಹೇಳಿಕೆ ಬೊತ್ತು.

ಭೈರಪ್ಪ: ಹಾಳಾದವು ಸೂಳೆಮಕ್ಕ. ಸತ್ತರೂ ಅವರ ಸುದ್ದಿಗೆ (ಸಹವಾಸ) ಮಾತ್ರ ನಾವು ಇನ್ನ್ ಹೋದು ಬೇಡ.

ಕಾಳೇಗೌಡ: ಅಲ್ಲಾ... ಅವರ ಸುದ್ದಿಗೆ ಹೋದವು ಯಾರು ಬೇಕಲೆ? ನಮ್ಮಷ್ಟಕ್ಕೆ ನಾವಿದ್ದರೂನು ಪೋಲಿಸ್‌ನವ್ ಕೇಸಾಕಿನೇಂತ ಹೇಳ್ರೆ ನಾವು ಇನ್ನೇನ್ ಮಾಡಿಕೆ ಆದೆ ಹೇಳಿ?

ಸೀಗೇಗೌಡ: ಇನ್ನೆಂಥ ಮಾಡ್ದು ಊರು ಬುಟ್ಟು ಹೋಕಷ್ಟೆ.

ಭೈರಪ್ಪ: ಇದೆಲ್ಲಾ ಯಾರ್‍ದೋ ಕಿತಾಪತಿ ಅಂತ ಕಂಡದೆ.

ಸುಬ್ಬಯ್ಯ: ಯಾರ್ ಹೇಳಿ ಕೊಡ್ತಾ ಒಳಾಂತ ಗೊತ್ತಾದರೆ ಹೋಗಿ ಕೇಳಕ್. ನಾವು ಅಂತ ತಪ್ಪು ಎಂತ ಮಾಡ್ಯೋಳಾ..?

ಕಾಳೇಗೌಡ: ಇದರ ನಾವು ಖಂಡಿತಾ ಇಲ್ಲಿಗೇ ಬುಡಿಕಾಗದ್.

ಪಂಚಾಯ್ತಿಗೆ ಹಾಕಿ ಯಾರ್ ಹೇಳಿ ಕೊಡ್ತಾ ಒಳ ಯಾರು ಸುದ್ದಿ ಹಬ್ಬುಸ್ವೆ ಅಂತ ನಾಲ್ಕು ಮಂದಿನ ಕರ್ದು ವಿಚಾರಣೆ ಮಾಡ್ಸಕು.

ಭೈರಪ್ಪ: ಇದ್ ಕುಳ್ವಾಡಿ ಕರಿಯಂದೇ ಕೆಲ್ಸ ಆಗಿರಕೂಂತ ನಂಗೆ ಅನುಮಾನ. ಗದ್ದೆ ಹಾಳಾದಕ್ಕೆ ಸರ್ಕಾರದವು ನಷ್ಟ ಕಟ್ಟಿಕೊಟ್ಟವೆ ಅರ್ಜಿ ಕೊಟ್ಟವೆ ಅಂತ ಹೇಳ್ತಿತ್ತು. ಎಂಥ ಕೊಟ್ಟಿತೋ.. ಎಲ್ಲಿ ಸತ್ತತ್ತೋ.. ಸುಟ್ಟವ ಶಂಕರಪ್ಪ ಬರ್ತ್, ಈ ಕರಿಯ ಹೆಬ್ಬೆಟ್ಟ್ ಒತ್ತಿತ್, ಪಂಚಾಯ್ತಿ ಕರ್ದ್ ವಿಚಾರ್ಸಿಕಣಿಕನೇ ಎಲ್ಲಾ ಹೊರಗೆ ಬಾದು.

ಸೀಗೇಗೌಡ: ನೋಡಿ... ಪಂಚಾಯ್ತಿನೂ ಬೇಡ, ಎಂತದ್ದೂ ಬೇಡ. ಅಲ್ಲಿ ಮಾತಿಗೆ ಮಾತು ಬಂದ್ ಇನ್ನೇನಾರೆ..? ಪಂಚಾಯ್ತಿಗೆ ಬಂದವು ಯಾರಾರ್... ಒಂದು ಪ್ಯಾಕೆಟ್ ಕಳ್ಳು ಕುಡ್ದು ವಿಚಾರಣೆ ಮಾಡಿಕಂಡಿರ್ಕನನೇ ಒಂದ್ ಪೆಟ್ಟ್ ಹೊಲೇರಿಗೆ ಹೊಡ್ದ ಅಂತಿಸಿಕಮಾ. ಮತ್ತೆ ಇದು ಬಾದ್ ಯಾರ ತಲೆಗೆ? ನಾವ್ಗೆ ತಾನೇ? ಅದ್ಕೆ ನಮ್ಮ ಪಾಲಿಗೆ ಆ ಸೂಳೆಮಕ್ಕ ಸತ್ತ ಅಂತ ತಿಳ್ಕಂಡ್ ದೂರ್ ಇರ್ದೇ ಒಳ್ಳೆದ್ ಅಲ್ಲಾ..?

ಕಾಳೇಗೌಡ: ಆತ್.. ನಡೀ.. ಪೋಯಿ ಪೋಯಿ.. ನಾಡಿಗೆ ಹೋಗಿ ಒಂದು ತೀಮಾನಕ್ಕೆ ಬರುಮಾ.

(ರಂಗದ ಮೇಲೆ ಕತ್ತಲಾದೆ)

ದೃಶ್ಯ–13

(ಕಿರಗೂರು. ಬೊಳ್ಳಾದಂಗೆ ಮಾರ–ಸಿದ್ದ ಮರಲಿ ಸಿಕ್ಕಾ–ಕೊಂಡಿದ್ದ ಗರಗಸನ ತೆಗ್ಯವ ಪ್ರಯತ್ನ ಮಾಡ್ತಾ ಒಳ ಅಷ್ಟರಲ್ಲೇ ಪೊಲೀಸ್ ಸ್ಟೇಷನ್‌ಂದ ತಿರ್ಗಿ ಬಂದ ಐದು ಜನನೂ ಅಲ್ಲಿಗೆ ಬಂದವೆ)

ಭೈರಪ್ಪ: ಆ ಕೆಲ್ಸನ ಅತ್ತ ನಿಲ್ಸಿ. ನನ್ನ ಗರಗಸಾನ ನಾ ಹೆಂಗಾರ್ ತೆಗ್ದು ಕಂಡನೆ. ನೀವು ನಮ್ಮ ಉದ್ದಾರ ಮಾಡ್ದು ಸಾಕ್. ಹೋಗಿ ಅತ್ತ.

ಸಿದ್ದ: ಇದೆಂಥ ಭೈರಪ್ಪ ಹಿಂಗೆ ಮಾತಾಡ್ತ ಒಳ. ಅಂದ್ 'ಮರ ಕಡ್ದು ಪುಣ್ಯ ಕಟ್ಟಿಕಣಿ' ಅಂತ ನೀನೇ ಅಲ್ಲಾ ಕೈಕಾಲು ಮುಗ್ದು ಕೇಳಿಕಂಡದ್ದ್.

ಭೈರಪ್ಪ: 'ಮರ ಕೊಯ್ದು ಕೊಡು' ಅಂತ ಹೇಳ್ಯಲೇ ಹೊರ್ತು ದುಡ್ಡು ಹಾಕಿ ನನ್ನ ಗರಗಸಾನ ಅದರ್‌ಲಿ ಸಿಕ್ಸಿ ಹಾಕೂಂತೇನು ಹೇಳ್‌ತ್ಲೆ ನಾ.

ಮಾರ: ಅದ್ಕೆ ನಾವೇನ್ ಮಾಡಿಕಾದೆ? ಹೆಬ್ಬಲ್ಸ್ ಮರದ ಮಾಯಣ ಗಟ್ಟಿಯಾಗಿ ಹಿಡ್ಕಂಡಿತ್ತ್. ನಾವೇನ್ ಹಿಡ್ಕಂಡಳನಾ?

ಭೈರಪ್ಪ: ನಮ್ಮ ಉದ್ಧಾರ ಮಾಡ್ದು ಸಾಕೂಂತ ಹೇಳ್ದು ಅರ್ಥ ಆತ್ಲೇನಾ? ನಡ್ಯನಿ. (ಭೈರಪ್ಪನೊಟ್ಟಿಗೆ ಉಳ್‌ದವೂ ಹೋದವೆ. ಮಾರ–ಸಿದ್ದ ಅಲ್ಲಿಂದ ಹೋದಾಂಗೆ ಮಾಡಿ ರಂಗದ ಒಂದು ಮೂಲೆಗೆ ಬಂದವೆ)

ಸಿದ್ದ: ಈ ಗೌಡಂಗೆ ಬುದ್ಧಿ ಯಾಕೋ ನೆಟ್ಟಗಿದ್ದಂಗೆ ಕಾಂಬೋದ್ಲೆ. ದಿನಕ್ಕೊಂದು ರೀತಿ ಮಾತಾಡಿಕೆ ಶುರು ಮಾಡಿಟು. ಒಳ್ಳೆ ತಿಕ್ಲುಗೌಡ.

ಮಾರ: ಪೊಲೀಸ್‌ನವು ಕರ್ಕಂಡು ಹೋಗಿ ಎಂತ ಮಾಡ್‌ದನೋ ಏನೋ. ಆ ಸಿಟ್ಟ್‌ಲಿ ಹಾಂಗೇಳಿಟ್ಟು ಅಷ್ಟೆ.

ಸಿದ್ದ: ಪೊಲೀಸ್‌ರ ಮೇಲೆ ಸಿಟ್ಟಿದ್ದರೆ ಸ್ಟೇಷನ್‌ಲಿ ತೋರ್‌ಸಲಿ. ನಮ್ಮಕ್ಕಲೆ ಯಾಕೆ?

ಮಾರ: ಅಂ... ಅಲ್ಲಿ ತೋರ್ಸಿರೆ ಪುಕ್ಲಿ ಮೇಲೆ ಬಿದ್ದದೆ ಅಂತನೇ ಇಲ್ಲಿ ತೋರ್ಸಿದೆ ಪ್ರತಾಪನ. ಅದೂ ನಾವು ಅರ್ದ ಕುಯ್ದು ಬುಟ್ಟದರ ಬೇರೆ ಇನ್ಯಾರ್ ಕೊಯ್ಯಕೆ ಬಂದವೆ ಬೇಕಲ್ಲ. ಮತ್ತೆ ದಮ್ಮಯ್ಯ ಹಾಕಿಕಂಡ್ ನಮ್ಮಕ್ಕಲೆನೇ ಬರಕು.

ಸಿದ್ದ: ಪುಕ್ಲಿ ಬಗ್ಗಿಸಿಕಂಡ್ ಮೂರು ದಿನ ಕುಯ್ದಲ್ಲಾ... ಇವನಜ್ಜ ಕೊಟ್ಟೆದೆನಾ ಕೂಲಿ? ನೋಡು, ಇನ್ನೊಂದು ಸರ್ತಿ ಮರ ಕೊಯ್ದು ಕೊಡಿ ಅಂತ ಬಂದರೆ ನೀ ಒಳ ಅವ ಉಟ್ಟು ನನ್ನ ಸುದ್ದಿಗೆ ಮಾತ್ರ ಬರ್‌ಬೇಡ. (ಸಿಟ್ಟ್‌ಂದ್ ಹೊರ್‌ಟದೆ)

ಮಾರ: ನಿಲ್ಲ್ ಮಾರಾಯ ನಾನೂ ಬಂದೆ ಇರ್. (ಅವನ ಹಿಂದೆ ಹೋದೆ)

(ರಂಗದ ಮೇಲೆ ಕತ್ತಲಾದೆ)

ದೃಶ್ಯ–14

(ಊರ್‌ನ ಮಾರ್ಗ ಮಾರ ಸಿದ್ದ ಕೆಲ್ಸಂದ ಬುಡ್ಸಿದ ಮೇಲೆ ಅಲ್ಲೆ ಬಿದ್ದಿದ್ದ ಹೆಬ್ಬಲಸು ಮರನ ಹೆಂಗಾರ್ ಮಾಡಿ ಕೊಯ್ಸಕೂಂತ ಪೇಟೆ ಎಲ್ಲಾ ಹುಡ್ಕಿ ಸೋನ್ಸ್ ತೇಂಳುವ ಕ್ರಿಶ್ಚಿಯನ್ ಒಬ್ಬನ ಕರ್‌ಕಂಡ್ ಬಂದದೆ. ಅವನೊಟ್ಟಿಗೆ ಅವನ ಸಹಾಯಕ ಮಲಯಾಳಿನೂ ಇದ್ದದೆ. ಇಬ್ಬರೂ ನರಪೇತಾಳದಂಗೆ ಇದ್ದವೆ)

ಭೈರಪ್ಪ: ಹೇಂಗಾರ್ ಮಾಡಿ ಆ ಮರಲಿ ಸಿಕ್ಕಾಕಂಡಿದ್ದ ಅಡ್ಡ ಮುರಿ ಗರಗಸಾನ ತೆಗ್ದು ಹಾಂಗೆ ಸ್ವಲ್ಪ ಕೊಯ್ದು ಹಾಕಿ. ಒಂದು ಮಣ ಭತ್ತನ ತಕಂಡು ಹೋಗ್.

ಸೋನ್ಸ್: ನೋಡ್ತಾ ಇರಿ "ಈ ಸೋನ್ಸ್ ಕೈಚಳಕ" ಎಂಥದ್ ಅಂತ ನೀವ್ಗೇ ಗೊತ್ತಾದೆ.

ಮಲಯಾಳಿ: ನಮ್ಮ ಸಾ ಮಿಲ್ಲ್ ಸಾಹುಕಾರ್ ಒಳಲ್ಲಾ... ಅದೇ ಕೃಷ್ಣೇಗೌಡ್ರು, ಇವು ಯಾಗೋಳು ಅವರ್ ಮರ ಕೊಯ್ದು ತಕಂಡೋಕೆ ನಮ್ಮ ಸೋನ್ಸೇ ಬೇಕೂಂತ ಹೇಳ್ವೆ.

ಭೈರಪ್ಪ: ಹೂಂ... ಕೃಷ್ಣೇಗೌಡ್ರೂ ಹೇಳ್ದ. ಈ ಸೋನ್ಸ್‌ತೇಂಳ್ರೆ ಎಂ–ತಾಂಥ ತಿಳ್ಕಂಡೋಳಾ? ಮರ ಕುಯ್ಯೋಕೆ ಭಯಂಕರ ಉಷಾರ್. ಅವ ಮರ ಮುಟ್ಟಿರೆ ಸಾಕ್, ಅದ್ ಅವ ಹೇಳ್ದಂಗೆ ಕೇಳ್ದೆ ಅಂತ ಆಗ ನಿರ್ಧಾರ ಮಾಡಿಯೇ ಬುಟ್ಟೆ. ಒಂದು ಮಣ ಭತ್ತ ಕೊಡ್‌ದಾದರೆ ಅದ್ ನೀವ್ಗೇ ಕೊಡ್‌ದೂಂತ.

ಸೋನ್ಸ್: ನಮ್ಮ ನೋಡಿರೆ... ಓ ದೇವ್ರೇ ಇವು ಹಿಂಗೆ ಒಳ... ಮರ ಕೊಯ್ಯುವನಾ ಅಂತ ಮನ್‌ಸ್ಸಿಗೆ ಬಾದು. ಆದರೆ ಆ ಕೆಲ್ಸಕ್ಕೆ

ಬೇಕಾದು ಮೈಯಲ್ಲ, ಮುಖ್ಯವಾಗಿ ತಲೆ, ತಲೆ ಬೇಕು.

ಭೈರಪ್ಪ: ಹೌದು ಹೌದು.. ಸರಿ ಬುಡು.

ಸೋನ್ಸ್: ನಮ್ಮ ಕೆಲ್ಸನ ಬರೀ ಬಾಯಿ ಮಾತ್‌ಲಿ ಹೇಳಿಕೆ ಆದ್ಲೆ. ಎಂಥೆಂಥ ಮರಾನ ಹೆಂಗೆಂಗೆ ಉರ್‌ಳಿಸ್ಯೋಳ– ಆಗೆಲ್ಲಾ ನಾವ್ಗೆ ಏನೆಲ್ಲಾ ಖುಷಿಲಿ ಕೊಟ್ಟಳಾಂತ ಅವರನ್ನೇ ಕೇಳಿ ಬೇಕರೆ ಹೇಳ್ವೆ.

ಮಲಯಾಳಿ: ಒಂದು ಸರ್ತಿ ನಮ್ಮ ಕೃಷ್ಣೇಗೌಡನ ಆನೆ ಕೂಡ ದೂಡಿಕೆ ಆಗದೆ ಇದ್ದ ಒಂದು ದಿಮ್ಮಿನಾ ನಮ್ಮ ಮೇಸ್ತ್ರಿ ಉಟ್ಟಲ್ಲಾ ಉಸ್‌ರ್ ತೆಗ್ದು ಬುಡೋದ್ರೊಳಗೆ ಲಬಕ್ ಅಂತ ಲಾರಿ ಮೇಲೆ ಬೀಳುವಾಂಗೆ ಮಾಡಿತ್ತ್ ಗೊತ್ತಾ..? (ಬರೀ ಬಡಾಯಿ ಹೊಡ್ಯೆತ್ತಿದ್ದ ಅವರ ಮಾತ್‌ಗಳ ಭೈರಪ್ಪ ಆಶ್ಚರ್ಯದಿಂದ ಕೇಳ್ಸ್‌ಕಂಡ್ ಹೋಗ್ತಾ ಇದ್ದಂಗೆ ಏದುರ್‌ಂದ ಮಾರ–ಸಿದ್ದ ಬಂದವೆ. ಒಮ್ಮೆಗೆ ನಿಂತ್ ಮೋರೆ ನೋಡ್ವೆ. ಆಮೇಲೆ ಭೈರಪ್ಪ ಸೋನ್ಸ್ ಮತ್ತು ಮಲಯಾಳಿ ಹೋದವೆ. ಮಾರ ಸಿದ್ದ ಅವರ ನೋಡಿಯೇ ಬಾಕಿ ಆದವೆ)

ಸಿದ್ದ: ನೋಡ್ದಾ... ಯಾರೂಂತ ಗೊತ್ತಾತ?

ಮಾರ: ಇಲ್ಲೆಲ್ಲಾ...

ಸಿದ್ದ: ನಾವು ಅರ್ಧ ಕುಯ್ದು ಮರನ ಯಾರೋ ಕೊಯ್ಯಕೆ ಬಂದವೆ ಅಂತ ಹೇಳ್ದಲ್ಲಾ... ನೋಡು ಇವೇ ಮರ ಕೊಯ್ಯಕೆ ಬಂದವು. ಅವನ ಹೆಸರು ಸೋನ್ಸ್ ಅಂತ. ಕಿರಸ್ತಾನದವ. ಸಾಮಿಲ್ಸ್ ಸಾವ್‌ಕಾರ ಕೃಷ್ಣೇಗೌಡ ಒಳಲ್ಲಾ... ಅವರ ಹಕ್ಕಲೆನೇ ಕೆಲ್ಸ ಮಾಡ್ದು. ಭಾರಿ ಒಳ್ಳೆ ಕೆಲಸಗಾರ ಗಡ.

ಮಾರ: ಅಯ್ಯೋ... ನಾವ್ಗೆ ಬರಕಾದ ಒಂದು ಮಣ ಭತ್ತ ಅನ್ಯಾಯ ಆಗಿ ಬೇರೆ ಯಾರ್ದೋ ಪಾಲಾತಲ್ಲಾ..

ಸಿದ್ದ: ಒಂದು ಮಣ ಭತ್ತ ಹೋದರೆ ಹೋಗಲಿ ಬುಡು. ಆದರೆ ನಮ್ಮ ಊರ್‌ಲಿ ನಾವೇ ಕೆಲಸಕ್ಕೆ ಬಾರದ ಹಾಂಗೆ ಆದಲ್ಲಾ.. ಥೆ..

ಮಾರ: ಇರ್ಲಿ ಬುಡು. ಆ ಸೋನ್ಸ್ ಭಾರೀ ದೊಡ್ಡ ಕೆಲ್ಸ ಮಾಡುವವಾಂತ ನೀ ಹೇಳ್ಯಳಲ್ಲಾ... ಅದೇನ್ ಕಡ್ದು ಹಾಕಿದೇಂತ ನೋಡಿಯೇ ಬುಡುಮ ಪೋಯಿ.

ಸಿದ್ದ: ಸರಿ... ಪೋಯಿ ಬಾ.. (ಹೋದವೆ)

(ರಂಗದ ಮೇಲೆ ಕತ್ತಲಾದೆ)

ದೃಶ್ಯ–15

(ಉರುಳಿ ಬಿದ್ದ ಹೆಬ್ಬಲಸ್‌ನ ಮರದ ಎದ್ರು ಸೋನ್ಸ್ ಮಲಯಾಳಿ, ಭೈರಪ್ಪ, ಸುಬ್ಬಯ್ಯ, ಸೀಗೇಗೌಡ ಮತ್ತೆ ಇನ್ನು ಒಂದಷ್ಟು ಜನ ಸೇರ್‍ಯೊಳ. ಸೋನ್ಸ್ ಮತ್ತು ಮಲಯಾಳಿ ಮರನ ಒಮ್ಮೆ ಮೇಲೆಂದ ಕೆಳಗೆ ಆಚೆ ಈಚೆ ನೋಡುವೆ)

ಸೋನ್ಸ್: ವಾ... (ಗಾಬರಿಂದ) ಇದ್ ಭಯಂಕರ ದೊಡ್ಡ ಮರ. ಏಳ್ ಸುರುಳಿದು. ಇದರ ನೀವ್ ನಾವ್ಗೆ ಹೇಳ್ತೇಲೆ, ಆದ್ ಅಲ್ಲದೆ ಹಿಂಡಿ ಇಸಿದ ಬಟ್ಟೆ ಹಾಂಗೆ ಪಿರಿಂಟ್ ಕಂಡ್ ಉಟ್ಟು. ಈ ಮರ ತುಂಡು ಮಾಡಿಕೆ ಎರಡೆರಡು ಕೆಲ್ಸ ಹಿಡ್‌ದದೆ.

ಮಲಯಾಳಿ: ಇದ್ ಭಾರೀ ಹಳೇ ಮರ. ಇದಕ್ಕೆ ಒಳಗೆ ಗರ್ಭ ಬಂದು–ಟೊ ಏನೋ..

ಭೈರಪ್ಪ: ಎಂಥಪ್ಪ.. ನಂಗೆಂಥ ಗೊತ್ತಾದೆ? ಎಲ್ಲಾ ನಿಮ್ಮ ಕೈಲೇ ಇರ್ದು.

ಸೋನ್ಸ್: ಅಲ್ಲಾ... ನಾವೇನೋ ಕೊಯ್ದವೆ ಬುಡಿ. ಒಂದು ಸರ್ತಿ ಹಿಡ್ದ ಕೆಲ್ಸನ ನಾವು ಬುಡ್‌ದ್‌ಲೆ. ನಾವ್ಗೆ ಇದರ್ಲಿ ಒಂದು ಪೈಸೆ ಲಾಭನೂ ಬೇಡ. ನೀವ್ಗೆ ಒಂದು ಉಪಕಾರ ಮಾಡುಮಾಂತ ಬಂದಿರ್ದು. ಕೆಲಸ್ ತುಂಬಾ ಜಾಸ್ತಿ ಆದರೆ ನೀವು ಸ್ವಲ್ಪ ಆಚೀಚೆ ನೋಡಿ ಸ್ವಲ್ಪ ಜಾಸ್ತಿ ಭತ್ತ ಕೊಡಕು. ಆಮೇಲೆ ನಾವ್ ಹೇಳ್ದೆ ಸರೀಂತ ನಮ್ಮ ಸೋಲ್ಸಿಕಾಗದ್.

(ಸೋನ್ಸ್ ಮತ್ತು ಮಲಯಾಳಿ ಹೆದರಿಕಂಡ್ ಧೈರ್ಯ ಬಾರದರೆ ತೋರ್‍ಸಿಕಣದೇ ಮರಲಿ ಸಿಕ್ಕಾಕಂಡಿದ್ದ ಗರಗಸನ

ತೆಗ್ಯಕೆ ಪ್ರಯತ್ನಪಟ್ಟು ಸೋತವೆ) ಕೆಲ್ಸ ಬಾರದಿರುವ ಅಡ್ಡಾಡಿ ಸೂಳೆ ಮಕ್ಕಳ ಕೈಗೆ ಗರಗಸ ಕೊಟ್ಟಾರೆ ಹೀಂಗೇ ಆದು. ಕೆಳಗೆ ಛಡಿ (ಬಡಿಗೆ, ಆಪು) ಕೊಟ್ಟುಕಣದೆ ಇಂಥ ಮರ ಕೊಯ್ಯಕೆ ಕೆಲ್ಸ ಗೊತ್ತಿದ್ದವ ಯಾರಾರ್ ಕೈ ಹಾಕುವೆನಾ? ಈಗ ನಾವ್ಗೆ ಒಂದಕ್ಕೆ ಎರಡು ಕೆಲ್ಸ ಆತ್ ಈ ಗರಗಸನ ಸಿಕ್ಸಿಹಾಕಿದವ ಯಾವವ? ಕರ್ಕಂಡು ಬನ್ನಿ ಹೇಳಿನೆ; ಗರಗಸ ತೆಗ್ಯಕೆ ಸಂಬಳ ಕೊಟ್ಟಯಾಂತ.

ಭೈರಪ್ಪ: ಅದೇ... ಆಗ ಬರ್ತಾ ಇರಿಕನ ಮಾರ್ಗಲಿ ಸಿಕ್ಕಿದಲ್ಲಾ... ಅವರ್‌ದು ಈ ಕೆಲ್ಸ; ಬಡಿಮಕ್ಕ.

ಸೋನ್ಸ್: (ಅದು ಹರಿಜನಾಂತ ತಿಳಿದ್) "ನೋಡಿ, ದೇವ್ರು ಒಂದೊಂದು ಕೆಲ್ಸಕ್ಕೆ ಒಂದೊಂದು ಜಾತಿ ಅಂತ ಮಾಡಿಸಿಟು. ಅದ್ ಬುಟ್ಟು ಬೇರೆದಕ್ಕೆ ನಾವ್ ಕೈ ಹಾಕಿಗೆ ಆಗದ್. ಈಗ ನಾವು ಅಕ್ಕಸಾಲಿ ಕೆಲ್ಸ ಮಾಡ್ವೇಂತ ನಿಮ್ಮ ಹೆಣ್ಣ್‌ನ ತಾಳಿಸರ ತಕಂಡ್ ಚಿನ್ನ ಕಾಸಿರೆ ಎಂತಾದೆ ಹೇಳಿ"?

ಭೈರಪ್ಪ: (ಜೋರಾಗಿ ನಗಾಡ್‌ದೆ)

ಸೋನ್ಸ್: ಹಾಂಗೆ ಈ ಕೆಲ್ಸಗಳೆಲ್ಲಾ! (ಅಷ್ಟೊತ್ತಿಗೆ ಅಲ್ಲಿ ಮಂದಿಗೆಲ್ಲಾ ಸೇರ್ವೆ. ಅವರೊಟ್ಟಿಗೆ ಮಾರನೂ ಸಿದ್ದನೂ ಸೇರಿಕಂಡ್ ಅವರ ಕೆಲ್ಸನ ನೋಡ್ತಾ ಇದ್ದವೆ) ಇದರ ನಾ ಹೊರಗೆ ತೆಗ್‌ತ್ಲೆತಾರೆ ಇಷ್ಟು ವರ್ಷ ಕೆಲ್ಸ ಮಾಡಿ ಏನೂ ಪ್ರಯೋಜನ..? (ಅವನಷ್ಟಕ್ಕೆ ಅವ ಹೇಳಿಕಂಡದೆ) ಏಯ್ ಮಲಯಾಳಿ ಆ ಮರದ ಅಡಿಗೆ ಬಡಿಗೆನೂ ಕಟ್ಟಿ ಕೊಡು, ನೋಡಿಯೋ ಬುಡುಮ ಇದ್ ಯಾಕೆ ಆದ್ಲೆಂತಾ? (ಮರದಡಿಗೆ ಬಡಿಗೆ, ಗಟ್ಟಿ... ಹೀಂಗೆ ಎಲ್ಲಾ ಕೊಟ್ಟು ಮಧ್ಯಕ್ಕೆ ಹೊಡ್ದು, ಅದರ ಬಾಯಿ ತೆಗ್ದು ಎಲ್ಲವೂ ಕಣ್ಣು ಬಾಯಿ ಬುಟ್ಟು ನೋಡುವಂಗೆ ಕಸರತ್ತು ಮಾಡಿ ಗರಗಸ ಹೊರಗೆ ತೆಗ್ದದೆ. ಆಗ ಎಲ್ಲವೂ ಅವರವರಲ್ಲೇ ಸೋನ್ಸ್‌ನ

ಚತುರತೆ ಬಗ್ಗೆ ಮಾತಾಡಿಕಂಡವೆ) ನಮ್ಮ ಕೆಲ್ಸಾಂತೇಂಳ್ರೆ... ಏನ್ ಸುಮ್ಮನೇನಾ? ಇದ್ಯಾವ ಲೆಕ್ಕ ನಾವ್ಗೆ? ನೋಡ್ತಾ ಇರಿ. ಇನ್ನೆರಡು ದಿನಲಿ ಇದರ ತುಂಡು ತುಂಡು ಮಾಡಿ ಉರುಳಿಸಿತ್ಲೆತಾಂರೆ ನನ್ನ ಹೆಸರ್ ಸೋನ್ಸೆ ಅಲ್ಲ! (ಗರಗಸ ನೋಡಿ ಚಿಮಣಿ ಎಣ್ಣೆ ಪೂಜಿ ಮರ ಕೊಯ್ಯಕೆ ಶುರು ಮಾಡ್ವೆ)

ದೃಶ್ಯ–16

(ಸೋನ್ಸ್ ಮತ್ತು ಮಲಯಾಳಿ ಮರ ಕೊಯ್ದು ತುಂಡು ಮಾಡಿದ್ದವೆ. ಅವರೊಟ್ಟಿಗೆ ಸುಬ್ಬಯ್ಯ, ಭೈರಪ್ಪ, ಕಾಳೇ ಗೌಡನೂ ಅಲ್ಲಿ ಒಳ)

ಸೋನ್ಸ್: ಮರ ತುಂಡು ಮಾಡಿ ಹಾಕ್ವವರೆಗೂ... ಸಿಕ್ಕಾಪಟ್ಟೆ ಕಷ್ಟ ಆತಪ್ಪ. ಸುತ್ತ್‌ನ ಸುಳಿ ಮರ ಆದದಕ್ಕೆ ಎರಡು ದಿನ ಬೇಕಾತ್ ನೋಡಿ. ಅದೂ ಅಲ್ಲದೆ ಹತ್ತತ್ತು ನಿಮಿಷ ಗರಗಸಾನ ಹೊರಗೆ ತೆಗ್ದು ಅದರ್ಲಿ ಹಲ್ಲ್‌ನ ತಿಕ್ಕಿ, ಸುತ್ತಿಗೇಲಿ ತಟ್ಟಿ ಮಾಯಣ ಹಿಡ್ಯದ ಹಂಗೆ ಚಿಮಣಿ ಎಣ್ಣೆ ಪೂಜದೇ ಇರ್ತಿದ್ದರೆ, ಈ ಕೆಲ್ಸ ಮಾತ್ರ ಆಗ್ತನೇ ಇತ್ಲೆ.

ಭೈರಪ್ಪ: ಅಂತೂ ಹಿಡ್ದ ಕೆಲ್ಸನ ಹಠ ಮಾಡಿ ಸಾಧಿಸಿ ಬುಟ್ಟ ಬುಡು. ಇನ್ನ್ ಈ ತುಂಡು ದಿಮ್ಮಿಗಳ ಅತ್ತಕ್ಕೆ ಉರುಳುಸಕು.

ಮಲಯಾಳಿ: ಅದೆಂಥ ಮಹಾ ಕೆಲ್ಸ? ಅಷ್ಟು ಆದ ಮೇಲೆ ಆದ್ಲೆನಾ? ನಮ್ಮ ಮೇಸ್ತ್ರಿಗೆ ಅದೆಲ್ಲಾ ಲೆಕ್ಕಕ್ಕೇ ಇಲ್ಲೆ.

ಸೋನ್ಸ್: ಈಗ ನೋಡಿ, ನಾ ಹೇಳ್ದಂಗೆ ಕೇಳಿರೆ ಈ ದಿಮ್ಮಿನಾ ಅತ್ತ ಕಡೆಗೆ ಹೊಣ್ಕುಸುದು ಏನು ಕಷ್ಟ ಇಲ್ಲೆ.

ಕಾಳೇಗೌಡ: ಆತಪ್ಪ. ನೀ ಹೆಂಗೆ ಹೇಳ್ಯನೋ ಹಂಗೆ ಮಾಡುವೆ.

ಸೋನ್ಸ್: ಕಾಳೇಗೌಡ್ರೆ... ನೀವು ಇಲ್ಲೆ ನಿತ್ತ್‌ಕಂಡ್ ನಾ ಹೇಳಿಕಾಕನ ದಿಮ್ಮಿನ ದೂಡಕು. ಭೈರಪ್ಪ–ಸುಬ್ಬೇಗೌಡ್ರು.. ನೀವಿಬ್ಬರೂ ಇಲ್ಲಿ ಕುದ್ದುಕಂಡ್ ದಿಮ್ಮಿಗೆ ನಿಮ್ಮ ಬೆನ್ನು ಕೊಟ್ಟು ನೂಕಕು. ನಾನೂ ಮಲಯಾಳಿ ಆ ಕಡೆಗೊಬ್ಬ ಈ ಕಡೆಗೊಬ್ಬ ನಿತ್ತ್ ಬಡಿಗೆ ಕೊಟ್ಟು ದೂಡ್ವೆ... ಗೊತ್ತಾತಾ? ಆದಾ?

ಎಲ್ಲವೂ: ಓ.... ಗೊತ್ತಾತ್... ಗೊತ್ತಾತ್..

(ಸೋನ್ಸ್ ಹೇಳ್ದಂಗೆ ಎಲ್ಲವೂ ಕೆಲ್ಸಕ್ಕೆ ತಯಾರಾದವೆ. ಸೋನ್ಸ್ ಮತ್ತು ಮಲಯಾಳಿ ಬಡಿಗೆ ಹಿಡಿದು ಎರಡೂ ತುದಿಲಿ ನಿತ್ತವೆ)

ಸೋನ್ಸ್: ಈಗ ಮರ ದೂಡಿಕೆ ಮುಂದೆ ಇದ್ದವು ಎಲ್ಲವೂ ಸರಿಯಾಗಿ ಕೇಳಿಸಿ ಕಣಿ, ನಾ ಒಂದೊಂದು ಸರ್ತಿ ಹೇಳಿಕನೂ ಎಲ್ಲವೂ ಒಟ್ಟಿಗೇ 'ಐಸಾ'... ಅಂತಾ ಹೇಳಿ ಎಲ್ಲ ಬಲ ಕೊಟ್ಟು ದಿಮ್ಮಿನ ದೂಡಕು. ಆಗ ಮಾತ್ರ ದಿಮ್ಮಿ ಅಲ್‌ಗಾಡ್ದು. ಗೊತ್ತಾತಾ..?

ಎಲ್ಲವೂ: ಆತ್.. ಆತ್..

ಸೋನ್ಸ್: ರೆಡಿನಾ... ಈಗ ಕೂಗಿ ಹೇಳ್ನೆ.

ಎಲ್ಲವೂ: ಹೂಂ..

ಸೋನ್ಸ್: ದಬಕ್ ದಬ

ಎಲ್ಲವೂ: ಐಸಾ...

ಸೋನ್ಸ್: ಎಲ್ಲಾ ದೂಡಿ..

ಎಲ್ಲವೂ: ಐಸಾ..

ಸೋನ್ಸ್: ಬಾರ ಇಲ್ಲೆ..

ಎಲ್ಲವೂ: ಐಸಾ..

ಸೋನ್ಸ್: ಇನ್ನೊಂಚೂರು..

ಎಲ್ಲವೂ: ಐಸಾ..

ಸೋನ್ಸ್: ಸ್ವಲ್ಪ ಅಲ್‌ಗಾಡ್ತ್..

ಎಲ್ಲವೂ: ಐಸಾ..

ಸೋನ್ಸ್: ಎದ್ದೇ ಬುಟ್ಟಿತ್

ಎಲ್ಲವೂ: ಐಸಾ..

(ಎಲ್ಲವೂ ಸುಸ್ತಾದವೆ.. ಆದರೂ ದಿಮ್ಮಿ ಸ್ವಲ್ಪನೂ ಅಲ್‌ಗಾಡುದ್ಲೆ)

ಭೈರಪ್ಪ: ಉಸ್... ಏಯ್ ನಿಲ್ಲಿಯಪ್ಪಾ ಸಾಕ್. ಅದ್ ಎಲ್ಲಿಟ್ಟೋ.. ಹೆಂಗುಟ್ಟೋ.. ಹಂಗೆ ಉಟ್ಟು... ಎದ್ದೇ ಬುಟ್ಟತ್ ಗಡ ಎದ್ದೆ ಬುಟ್ಟದ್ದ್ ಬದನೆಕ್ಯಾ.

ಸೋನ್ಸ್: ಎಲ್ಲಿಟ್ಟೋ ಹಂಗೇ ಉಟ್ಟೊಂತ ಹೇಳ್ರೆ.. ಬರಿ ಬಾಯಿಲೆ ಬೊಬ್ಬೆ ಹಾಕಿರೆ ದಿಮ್ಮಿ ಹೊಣ್ಕಿದೆನಾ? ಒಟ್ಟಿಗೆ ಬೊಬ್ಬೆ ಹಾಕಿರೆ ಸಾಲ್ದು. ಬಲಹಾಕಿ ದೂಡಕು. ಆಗನೇ ದಿಮ್ಮಿ ಉರ್ಳುದು.

ಕಾಳೇಗೌಡ: ಅಲ್ಲ ಮೇಸ್ತ್ರಿ.. ಮರ ಮುಟ್ಟಿರೆ ಸಾಕ್ ನಾ ಹೇಳ್ದಂಗ್ ಕೇಳ್ದೇಂತ ಹೇಳ್ತಿದ್ದ. ಈಗ ಸಬ್ಬಲ್ ಹಾಕಿ ದೂಡಿರೂ ಹೋಗ್ತನೇ ಇಲ್ಲೆಲ್ಲ.

ಸೋನ್ಸ್: ಒಬ್ಬೊಬ್ಬ ಒಂದೊಂದು ಸರ್ತಿ ದೂಡಿರೆ ಹೆಂಗೆ ಆದೆ ಬೇಕಲೇ? ಎಲ್ಲವೂ ಒಟ್ಟಿಗೆ ದೂಡಕು.

ಸುಬ್ಬಯ್ಯ: ನಾವು ಇಷ್ಟೇ ಮಂದಿ ದೂಡಿರೆ ದಿಮ್ಮಿ ಅಲ್‌ಗಾಡುದ್ಲೆ. ಇಷ್ಟು ಜನ ಏನೇನು ಅಲ್ಲಾ. ಹರಿಜನರ ದಟಿಗೇಂದ ಜನಾನಾ ಕರ್ರೊಂಡು ಬರುಮ.

ಭೈರಪ್ಪ: ಸಾಕ್ ಸುಮ್ಮಂಗಿರ್. ಇಷ್ಟೆಲ್ಲಾ ನಾವೇ ಮಾಡಿ ಆದ ಮೇಲೆ ಈಗ ಯಾಕೆ ಅವ್ಕೆ ಸಲಾಮು ಹೊಡ್ಯದು? ನಾವಾಗಿ ಕರ್‌ದರೆ ಅವರ ಸೊಕ್ಕು ಅಟ್ಟಕ್ಕೆ ಹೋದೆ. ಅವ್ಕೇನೂ ಗೊತ್ತಿಲ್ಲೆನಾ. ನಾವು ಮಾಡ್ತಿರ್ದು ಊರು ಕೆಲ್ಸಾಂತ. ಬಂದ್ ಕೈಗೆ ಕೈ ಸೇರ್ಸಿ ನಾವೂ ಮಾಡುಮಾಂತ ಅವ್ಕೆ ಅನ್ಸುದು ಬೇಡನಾ?

ಸೋನ್ಸ್: ಸರಿಯಾದ ಸಾಮಾನುಗ ಇರ್ತಿದ್ದರೆ... ಈ ಮರ ಉರುಳಿಸಿಕೆ ಐದು ಜನ ಬೇಕಾಗಿತ್ತಾ? ನಾನೊಬ್ಬನೇ ದೂಡಿ ಇದರ ನಾಡ್‌ಂದ ಆಚೆ ಕಳ್‌ಸ್ತಿದ್ದೆ. ಏನ್ ಮಾಡ್ದು ಕರ್ಮ. ಒಟ್ಟಾರೆ ಈ ಸಬ್ಬಲ್ಲೇ (ಬಡಿಗೆ) ಸರಿ ಇಲ್ಲೆ.

ಮಲಯಾಳಿ: ಓ... ನಮ್ಮ ಹಕ್ಕಲೆ ಎಂಥೆಂಥ ಬಡಿಗೆಗೆ ಇದ್ದ. ಒಂದೊಂದು ಮರ ದೂಡಿಕೂ... ಅದಕ್ಕೆ ಅಂತ ತಯಾರ್ ಮಾಡ್ದ ಬಡಿಗೆಗ ಸಬ್ಬಲ್‌ಗ ಒಂದಾ.. ಎರಡಾ... ಬೇಕಾದಷ್ಟು ಇದ್ದ.

ಭೈರಪ್ಪ: ಆ ಹಳೇ ಕತೆ ಎಲ್ಲಾ ಯಾಕೆ ಈಗ? ಇನ್ನೂ ಒಂದು ಸರ್ತಿ ಪ್ರಯತ್ನ ಮಾಡುಮ. ಆದರೆ ಈ ಸರ್ತಿ ಮಾತ್ರ ಒಟ್ಟಿಗೆ ದೂಡೂಕು.

ಸೋನ್ಸ್: ಸರಿ ಬನ್ನಿ ಎಲ್ಲಾ.

(ಎಲ್ಲವೂ ಮತ್ತೆ ಸುರುನಂಗೆ ಪ್ರಯತ್ನ ಪಟ್ಟವೆ)

ಸೋನ್ಸ್: ದಬಕ್ ದಬಾ..

ಎಲ್ಲವೂ: ಐಸಾ...

ಸೋನ್ಸ್: ಎಲ್ಲಾ ಹೇಳಿ..

ಎಲ್ಲವೂ: ಐಸಾ..

ಸೋನ್ಸ್: ಇನ್ನೊಂದು ಸ್ವಲ್ಪ..

ಎಲ್ಲವೂ: ಐಸಾ..

ಸೋನ್ಸ್: ಎದ್ದೇ ಬುಟ್ಟತ್..

ಎಲ್ಲವೂ: ಐಸಾ..

ಸೋನ್ಸ್: ಏಯ್ ಶಭಾಷ್..

ಎಲ್ಲವೂ: ಐಸಾ..

(ಈ ಸರ್ತಿ ದಿಮ್ಮಿ ಸ್ವಲ್ಪ ಅಲುಗಾಡಿ ಮುಂದೆ ಹೋದೆ. ಅಷ್ಟೊತ್ತಿಗೆ ಸೋನ್ಸ್ ಕೈಲಿದ್ದ ಸಬ್ಬಲ್ (ಬಡಿಗೆ) ಜಾರಿ ದಿಮ್ಮಿಯ ಭಾರ ಭೈರಪ್ಪ ಮತ್ತು ಸುಬ್ಬಯ್ಯನ ಬೆನ್ನಿನ ಮೇಲೆ ಬಿದ್ದದೆ. ಬಾರ ಸಂಕಟ ಬೇನೆ ತಡ್ಯಕ್ಕಾಗದೆ ಅವು

ಇಬ್ಬರೂ ಬೊಬ್ಬೆ ಹೊಡ್‌ದವೆ)

ಭೈರಪ್ಪ: ಅಯ್ಯಯ್ಯಪ್ಪೋ... ಬುಡ್‌ಬ್ಯಾಡಿ ಸಡೀಲ.. ಹೋತ್ ನಮ್ಮ ಬೆನ್ನ್..

ಸುಬ್ಬಯ್ಯ: ಸತ್ತಪ್ಪೋ.. ಸತ್ತ.. ಮುರ್‌ದೋತ್ ನಮ್ಮ ಬೆನ್ನ್..

ಸೋನ್ಸ್: (ಗಾಬರಿಲಿ) ಏಯ್ ಕಾಳೇಗೌಡ.. ಅದ್ ಹಿಂದಕ್ಕೆ ಬಾರದಂಗೆ ಆ ಸಬ್ಬಲ್ ಕೊಡು ಬೇಗ. (ಕಾಳೇಗೌಡ ಎಂತದೂ ಅರ್ಥ ಆಗದವನ ಹಾಂಗೆ ಅಲ್ಲಿ ಇಲ್ಲಿ ಹುಡುಕಿ ಒಂದು ಸಬ್ಬಲ್‌ನ ಸೋನ್ಸ್‌ಗೆ ಕೊಟ್ಟದೆ) ಏಯ್ ಮಲಯಾಳಿ.. ಉಷಾರ್.. ದಿಮ್ಮಿ ಸ್ವಲ್ಪ ಹಿಂದೆ ವಾಲಿರೂ ಎಲ್ಲಾ ಅಪ್ಪಚ್ಚಿ ಆಗಿ ಹೋದವೆ ಜಾಗ್ರತೆ... ಜಾಗ್ರತೆ..

ಭೈರಪ್ಪ: ಅಯ್ಯಯ್ಯೋ... ಉಳಿಸ್ಯಪ್ಪಾ.. ಉಳ್ಸಿ..

ಸುಬ್ಬಯ್ಯ: (ಸೋನ್ಸ್ ಮತ್ತು ಮಲಯಾಳಿ ಸಬ್ಬಲ್‌ಂದ ಗಟ್ಟಿಯಾಗಿ ದಿಮ್ಮಿನ ತಡ್‌ದವೆ. ಭೈರಪ್ಪ ಮತ್ತು ಸುಬ್ಬಯ್ಯ ಬದ್‌ಕಿರೆ ಸಾಕೂಂತ ಅಲ್ಲಿಂದೆದ್ದು ಓಡಿ ಬಂದು ಮೂಲೆಗೆ ಬಂದು ಕುಸ್ದು ಬಿದ್ದವೆ. ದಿಮ್ಮಿ ಎಲ್ಲಿ ನಮ್ಮ ಮೈಮೇಲೆ ಬಿದ್ದದೇಂತ ಸೋನ್ಸ್ ಮತ್ತು ಮಲಯಾಳಿ ಬಡಿಗೆನ ಅಲ್ಲೇ ಬುಟ್ಟು ಪಕ್ಕಕ್ಕೆ ಹಾರುವೆ. ಅಲ್‌ಗಾಡಿ ಮುಂದೆ ಹೋದ ದಿಮ್ಮಿ ಮತ್ತು ಸುರುನ ಜಾಗಕ್ಕೆ ಬಂದ್ ನಿಂತದೆ)

ಕಾಳೇಗೌಡ: ಪುಣ್ಯಕ್ಕೆ ನೀವ್‌ಗೇನು ಆತ್ಲೆ. ಎದ್ರಿ.. ಇನ್ನ್ ಈ ಮರದ ಸಾವಾಸವೇ ಬೇಡ ನಾವ್ಗೆ.

ಭೈರಪ್ಪ: ಅದರ ಸಹವಾಸ ನಾವ್ಗೆ ಬೇಡಾಂತೇಂಳ್ರೂ... ಅದು ನಮ್ಮ ಬುಡಕಿಲೆ.

ಸುಬ್ಬಯ್ಯ: ಆ ದಿಮ್ಮಿಗೆ ಬೆನ್ನು ಕೊಟ್ಟು ಕುದ್ದದ್ದೇ ತಪ್ಪಾತ್.. ನನ್ನ ಸೊಂಟವೇ ಮುರ್‌ದೋತ್.

ಭೈರಪ್ಪ: ಹೌದಪ್ಪ... ಎದ್ರುವಾಂಗಿಲ್ಲೆ... ಕುದ್ರುವಾಂಗಿಲ್ಲೆ... ಬೆನ್ನ್‌ನ ನರ ಕಳಕ್ ಅಂತ ಹಿಡ್ಕಂಡುಟು.

ಕಾಳೇಗೌಡ: ಏಯ್... ಎದ್ರಿ... ಎದ್ರಿ.. ಸೊಂಟ ಏನ್ ಮುರ್ದ್ತಲೆ. ಸ್ವಲ್ಪ ಉಳ್‌ಕಿರ್ದು ಅಷ್ಟೆ. ಎಣ್ಣೆ ತಿಕ್ಕಿಸಿಕಂಡ್ ಬೆಚ್ಚ ಬೆಚ್ಚ ನೀರ್ ಹಾಕಿಕಂಡ್ರೆ ಎಲ್ಲಾ ಸರಿ ಹೋದೆ.

ಸುಬ್ಬಯ್ಯ: ಅಪ್ಪಾ... (ನರ್‌ಕುವೆ) ಅಷ್ಟು ಸುಲಭಲಿ ನಮ್ಮ ಬೆನ್ನು ಉಳ್‌ಕ್ ಹೋದು ಕಾಂಬದ್ಲೆ. ಬಗ್ಗಿರೆ ಸಾಕ್ ಪ್ರಾಣ ಹೋದಂಗೆ ಆದೆ.

ಸೋನ್ಸ್: ಅಕ್ಕಿ ಗಂಟ್‌ನ ತಲೆ ಕೆಳಗೆ ಇಲ್ಲರೆ ಬೆನ್ನ್‌ನ ಕೆಳಗೆ ಇಸಿಕಂಡ್ ಮಲಗಿರೆ ಸಾಕ್. ಬೊಳ್ಪಿಗಾಕ್‌ನ ಎಂಥ ಉಳ್‌ಕಿದ್ದರೂ ಓಡಿಹೋದೆ. ಅದ್ಕೆ ಯಾಕೆ ಸುಮ್ಮಂಗೆ ಹೆದರುಕು. ಪೋಯಿ.. ಪೋಯಿ...

ಕಾಳೇಗೌಡ: ಅಷ್ಟೆಲ್ಲಾ ಯಾಕಪ್ಪ? ನಮ್ಮ ಕುಳ್ವಾಡಿ ಕರಿಯ ಇಲ್ಲೆನ. ಕಣ್ಣು ಮುಚ್ಚು ಬುಡುದ್ರ ಒಳಗೆ ಉಳುಕು ಮಂತ್ರ ಹಾಕಿ ಗುಣಮಾಡಿ ಬುಟ್ಟದೆ.

ಭೈರಪ್ಪ: ಅಯ್ಯಪ್ಪಾ... ಬೇಡ್ಲೇ ಬೇಡ. ಹೊಲ್ಯರ ಸವಾಸನೇ ಬೇಡ.

ಕಾಳೇಗೌಡ: ಆತ್ ಮಾರಾಯ.. ಪೋಯಿ ಬೇರೆ ಏನಾರು ಯೋಚಿಸುಮ.

(ಮೇಲೆ ಎದ್ರಿಸಿಕೆ ಪ್ರಯತ್ನ ಪಟ್ಟವೆ ಆದರೆ ಭೈರಪ್ಪ, ಸುಬ್ಬಯ್ಯ ಎದ್ರಿಕಾಗದೆ ಒದ್ದಾಡುವೆ)

ಸೋನ್ಸ್: ಕಾಳೇಗೌಡ... ಇದ್ಯಾಕೋ ಬಾರಿ ಸೀರಿಯಸ್ ಅಂತ ಕಂಡದೆ. ಒಂದು ಕೆಲ್ಸ ಮಾಡುಮ. ಇಲ್ಲಿಂದ ಸೀದ ನಾವು ಪೇಟೆಲಿರುವ ಅಣ್ಣಪ್ಪ ಡಾಕ್ಟ್ರ ನರ್‌ಸಿಂಗ್ ಹೋಂಗೆ ಕರ್‌ಕಂಡ್ ಪೋಯಿ. ಅವು ಎಕ್ಸ್‌ರೇ ಪೋಟಾ ಎಲ್ಲಾ ತೆಗ್ಸಿ ಏನಾತೂಂತ ನೋಡಿ ಸರಿಯಾದ ಮದ್ದ್ ಕೊಟ್ಟವೆ.

ಕಾಳೇಗೌಡ: ಆತ್ ಹಂಗೇ ಮಾಡುಮ ಪೋಯಿ.

(ಅವರಿಬ್ಬರ ಎದ್ರಿಸಿ ಕಷ್ಟ ಪಟ್ಟ್‌ಕಂಡ್ ಕರ್‌ಕಂಡ್ ಹೋದವೆ)

(ರಂಗದ ಮೇಲೆ ಕತ್ತಲಾದೆ)

ದೃಶ್ಯ–17

(ನಾಡ್‌ದಾರಿ, ಕರಿಯ ಜೋರ್‌ಲಿ ನಡ್ಯತಾ ಹೋಗ್ತುಟ್ಟು. ಕಾಳೇಗೌಡ ಅವನ ಬುಡದೇ ಹಿಂದೆದನೇ ಬಂದ್ ಅಡ್ಡಕಟ್ಟಿ ನಿಲ್ಲಿಸಿದೆ)

ಕಾಳೇಗೌಡ: ಕರಿಯ, ಕರಿಯ, ನಾಡ್‌ಗೆಲ್ಲಾ ಉಳ್ಕು ತೆಗ್ಯಕೆ ಅಂತ ಹೋಗಿ ಬಂದ್ಯ. ಹಾಂಗಿರಿಕನ ನಿನ್ನ ಆಚೆ ಈಚೆಲಿ ಇರುವವರ ಉಳ್ಕು ತೆಗೆಯುದ್ಲೆತೇಂಲ್ರೆ ಹೇಂಗೆ? ಅವರ ಅವಸ್ಥೆ ನೋಡಿಕೆ ಆದ್ಲೆ. ಸ್ವಲ್ಪ ಕರುಣೆ ತೋರ್ರುಸ ಮಾರಾಯ.

ಕರಿಯ: ನಾ ಆಗಲೇ ಹೇಳ್ತ್‌ಲೆನಾ? ಇದ್ ನನ್ನಿಂದ ಆಗುವ ಕೆಲ್ಸ್ ಅಲ್ಲಾಂತ.

ಕಾಳೇಗೌಡ: ಹಾಂಗೆ ಹೇಳ್ಬೇಡ ಕರಿಯ. ಅವೂ ಮಾಡ್‌ದರೆಲ್ಲ ಮಾಡ್ಯಳ. ಎಂಥ ಪ್ರಯೋಜನನೂ ಕಂಡತ್ಲೆ. ಪೇಟೆ ಡಾಕ್ಟ್ರ ಅಪ್ಪಣ್ಣನ ಹಕ್ಕಲೆನೂ ಹೋಗಿ ಬಂದ. ವಿಲ್‌ಜಾಲು ಎಣ್ಣೆ, ಕಡಂಜಾಲು ಎಣ್ಣೆ, ನಾರಾಯಣ ತೈಲ, ಅಯೋಡೆಕ್ಸ್, ಅಮೃತಾಂಜನ ಹೀಂಗೆ ಎಲ್ಲಾ ಮೆತ್ತಿ ಆತ್, ಇನ್ನ್ ಅಲೋಪತಿ, ಏಲೋಪತಿ, ಯೇನಿಯೋಪತಿ ಅದ್ ಇದ್ ಮಣ್ ಮಸಿ ಅಂತ ಮಾಡಿನೂ ಆತ್. ಈಗ ಉಳ್‌ದವ ನೀ ಒಬ್ಬನೇ... ಯೋಚನೆ ಮಾಡು ಕರಿಯ..

ಕರಿಯ: ಅವರಿಬ್ಬರ ಸೊಂಟ ಉಳ್‌ಕಿ ತುಂಬಾ ದಿನ ಆವುಟು. ಓಣಿಲಿ, ಮಾರ್ಗಲಿ ಹೋಗುವವೆಲ್ಲಾ ಅವರ ಉಳ್ಕು ನಾ ತೆಗ್ದೆನೆ ನಾ ತೆಗ್ದೆನೆ ಅಂತ ಸವಾಲ್ ಹಾಕಿಕಂಡ್ ಎಳ್ ದಾಡುವೆ. ಒಂದು ವೇಳೆ ಎಲುಬುಗೆ ಪೆಟ್ಟಾದರೆ ನಾ ಯಾಕೆ ಅಲ್ಲಿಗೆ ಹೋಗಿ ಸಿಕ್ಕಿ ಹಾಕಣಲಿ? ನನ್ನ

ಗ್ರಾಚಾರನೂ ಸರಿ ಇಲ್ಲೆ. ಅಂದ್ ಶಂಕರಪ್ಪನ ಮಾತ್ ಕೇಳಿ ಗದ್ದೆ ಹಾಳಾದಕ್ಕೆ ಅರ್ಜಿ ಕೊಟ್ಟೆ. ಆಮೇಲೆ ಎಂಥಾತ್ ಅಂತ ನೀವ್ಗೆ ಗೊತ್ತುಟಲ್ಲ. ಒಂದು ಮಾಡಿಕೆ ಹೋದರೆ ಇನ್ನೊಂದು ಆದೆ. ಗದ್ದೆ ಪೂರಾ ಹಾಳಾಗಿ ಹೋತ್. ಈ ವರ್ಷ ಊಟಕ್ಕೆ ಏನ್ ಮಾಡಲಿ ಅಂತ ತಲೆ ಬಿಸಿ ಆಗ್ತಾ ಉಟ್ಟು.

ಕಾಳೇಗೌಡ: ಮದ್ದ್ ಮಾಡ್‌ದಕ್ಕೆ ನಿಂಗೇನು ದುಡ್ಡು ಕೊಡ್‌ದುಲೆ ಅಂತ ಅನುಮಾನನ ನಿಂಗೆ? ಬರೀ ಬೇನೆಯ ಎಣ್ಣೆಗೆ ನೂರಾರು ರೂಪಾಯಿ ಸುರ್ಯಕನ ನಿಂಗೆ ಮೋಸ ಮಾಡ್ವೆನಾ..?

ಕರಿಯ: ಎಂತ ಹೇಳ್ಯ ನೀ? ಇಲ್ಲಿಯವರೆಗೂ ಉಳ್ಕು ತೆಗ್ಸಿ ಕಂಡವರ ಹಕ್ಕಲೆ ಒಂದು ನಯಾ ಪೈಸೆ ತಕ್ಕಂಡಳೆ ಅಂತ ಯಾರ ಹಕ್ಕಲೆ ಆದರೂ ಹೇಳಿಸಿರೆ. ನಾ ಇಲ್ಲೆ ಜಾತಿ ಬುಟ್ಟನೆ. ನಮ್ಮಜ್ಜ ಉಳ್ಕು ಮಂತ್ರ ಹೇಳಿಕೊಟ್ಟುಕಂಡೇ ನನ್ನ ಕೈಲಿ ಭಾಷೆ ತಕಂಡಿತ್ತ್ ಗೊತ್ತಾತ? ಅದ್ಕೆನೇ ಇಂದಿಗೂ ಮರ್ಯಾದೆ ಕೊಟ್ಟು ಮನೆಗೆ ಬಂದು ಕರ್ಕಂಡು ಹೋದವೆ. ಹಂಗೆ ದುಡ್ಡು ತಕೊಂದುತಾರೆ ನಾ ಯಾಕೆ ಹಿಂಗಿರ್ತಿದ್ದೆ? ಮಾಳಿಗೆ ಮನೆ ಕಟ್ಟಿಕಂಡ್ ಪೇಟೆಲಿ ಇರ್ತಿದ್ದೆ. ನಾ ಏನ್ ದುಡ್ಡಿಗೆ ಹುಟ್ಟಿದವಾಂತ ಅಂದ್‌ಕಂಡರಾ..?

ಕಾಳೇಗೌಡ: ಕರಿಯಾ... ನೀ ಎಂಥ ಹೇಳ್ರೂ ನಿನ್ನ ಮಾತುನ ನಾ ಒಪ್ಪುದ್ಲೆ. ನಿನ್ನ ಹಕ್ಕಲೆನೆ ಮದ್ದು ತಕಂಡ್ ನೀ ಅದರ ಮಾಡದೇ ಹೋದರೆ, ನಾಳೆ ಒಂದು ವೇಳೆ ಅವ್ಕೇನಾರ್ ಅತೂಂತ ಇಸಿಕ. ಅದರ ಪಾಪತ್ತು ಯಾರ ತಲೆಗೆ ಅಂಟಿದೆ ಗೊತ್ತುಟಾ?

ಕರಿಯ: ಯಾರ ತಲೆಗೆ? ನನ್ನ ತಲೆಗಾ?

ಕಾಳೇಗೌಡ: ಮತ್ತಿನ್ನೇನು ನನ್ನ ತಲೆಗಾ? ನಿನ್ನ ತಲೆಗೆನೇ.

ಕರಿಯ: ಅದ್ ಹೇಂಗೆ ನನ್ನ್ ತಲೆಗೆ ಬಂದದೆ? ನಾನೇ ಮದ್ದ್ ಮಾಡಕೂಂತ ಏನಾರ್ ಕಾನೂನು ಉಟ್ಟಾ? ಉಳ್ಕು ತೆಗ್ಯಕೆ

ಕಲ್ತದೇ ತಪ್ಪು ತೇಂಳುವಾಂಗೆ ಮಾತಾಡಿಯಲ್ಲ ನಂಗೇನ್ ಉಳ್ಕ್ ತೆಗ್ಯಕೆ ಸರ್ಕಾರ ಸಂಬ್ಳ ಕೊಟ್ಟದೆನಾ?

ಕಾಳೇಗೌಡ: ಆ ಮಾತೆಲ್ಲಾ ಯಾಕೆ ಕರಿಯ? ಒಟ್ಟಾರೆ ನಿನ್ನ ಮನ್‌ಸ್‌ಲಿ ಏನುಟ್ಟೊಂತ ನಂಗೆ ಗೊತ್ತುಟು ಬುಡು. ನಮ್ಮೂರ ದಿಕ್ಕಂಗ (ಹರಿಜನ) ನಿಂಗೆ ಹೇಳಿ ಕೊಟ್ಟಿರಕು ಕಂಡದೆ. ಅವ್ಕೆ ಉಳ್ಕು ತೆಗ್ಯಬೇಡ ಸರಿಯಾಗಿ ಬುದ್ಧಿ ಕಲ್ಸು ಅಂತ.. ನೋಡ್ ಕರಿಯಾ ಇಂತದ್ರಲ್ಲೆಲ್ಲಾ ದ್ವೇಷ ತೀರ್ಸ್ಕೆ ಹೋಕೆ ಬೊತ್ತ್ ಮಾರಾಯಾ..

ಕರಿಯಾ: ನಿಂಗ್ಯಾಕೋ ಇಂದ್ ಬುದ್ಧಿ ಸರಿ ಇಲ್ಲೆ ಕಾಳಪ್ಪ. ಸೊಂಟದ ಉಳ್ಕು ತೆಗ್ಯುದುತೇಂಳ್ರೆ ಬಾಳೆಹಣ್ಣು ನುಂಗಿದಷ್ಟು ಸುಲಭ ಅಂತ ತಿಳ್‌ಕಂಡನಾ? ಬಾರಿ ಕಷ್ಟ ಉಟ್ಟು ನೋಡು. ಎದ್ದು ಕೈ ಸೇರ್ಸಿ ಕುತ್ತಿಗೆ ಸುತ್ತ ಬರ್ಸಿ ಗಟ್ಟಿ ಹಿಡ್ಯಕು. ಎರಡೂ ಕೈ ತಲೆ ಮೇಲೆ ಬಂದ ಹಾಂಗೆನೆ ಕೆಳಗೆ ಮಲ್‌ಗಿಸಿ ಮೊಣಕೈನ ಕಾಲ್‌ಲಿ ಮೆಟ್ಟಕು. ಆಗ ಬೆನ್ನು ಹುರಿ ಗಟ್ಟಿ ಬಂದು ತಲೆಂದ ಕಾಲ್‌ನವರೆಗೆ ನರನ ಎಳ್‌ದದೆ. ಕಾಲ್‌ಲಿ ಮೆಟ್ಟಿಸಿ ಕಂಡ್ ಆಮೇಲೆ ನೀವು ಏನ್ ಹೇಳ್‌ರಿ..? ನಿನ್ನಂದ ಜಾತಿ ಕೆಟ್ಟತ್ ಅಂತ ಹೇಳಿರೆನಾ ಇಲ್ಲೆನಾ..?

ಕಾಳೇಗೌಡ: ಅದೆಂತಕೆ ಕಾಲ್‌ಲಿ ಮೆಟ್ಟುದು?

ಕರಿಯ: ಯಾಕೇಂತೇಂಳ್ರೆ ಎಲ್ಲದಕ್ಕೂ ಒಂದು ಕ್ರಮ ಅಂತ ಉಟ್ಟು ಒಂದೊಂದು ಉಳ್ಕಿಗೆ ಒಂದೊಂದು ಕ್ರಮ.

ಕಾಳೇಗೌಡ: ಸುಮ್ಮಂಗೆ ನನ್ನ ಹಕ್ಕಲೆ ಲಾಟ್‌ಬೂಟ್ ಮಾತಾಡ್‌ಬೇಡ. ಇಲ್ಲೀವರ್ಗೂ ಒಂದು ದಿನಾನೂ ನೀ ಕಾಲ್‌ಲಿ ಮೆಟ್ಟಿ ಉಳ್ಕು ತೆಗ್‌ದದರ ನಾ ನೋಡ್ತ್‌ಲೆ. ಬೇರೆಯವ್ಕೆ ತೆ–ಗ್‌ದಂಗೆ ಅದ್ಯಾಕೆ ಕೈಲಿ ಒತ್ತಿಕಾದ್ಲೆ ನಿಂಗೆ?

ಕರಿಯ: ಏ.... ಹೋಗಿ ಅತ್ತ, ಕೈಲಿ ಒತ್ತಿ ನೋಡಿ. ಉಳ್ಕು ಬುಟ್ಟರೆ ಸಂತೋಷ. ಆಮೇಲೆ ನನ್ನ ಹಕ್ಕಲೆ ಬಂದವೆ ಅಲ್ಲ.

ಅವರನ್ನೂ ನಿನ್ನ ಹಕ್ಕಲೇನೇ ಕಳ್ಸಿನೆ.

ಕಾಳೇಗೌಡ: ನೋಡು ಕರಿಯ ಅರ್ಜಿ ಕೊಟ್ಟು ನಮ್ಮ ಲಾಕಪ್ಪಿಗೆ ಹಾಕ್ಸಿದಲ್ಲದೇ ಈಗ ದಿಕ್ಕಂಗಳ (ಹರಿಜನರ) ಕಾಲ್‌ಲಿ ಮೆಟ್ಟಿಸಿಕೊಂಡ ಅಂತ ಮಾನ ಮರ್ಯಾದೆ ತೆಗ್ಯಕು ಅಂತ ಅಂದ್‌ಕಂಡೊಳನಾ?

ಕರಿಯ: ಒಟ್ಟಾರೆ ನನ್ನ ಗ್ರಾಚಾರ ಸರಿ ಇಲ್ಲೆ. ಇದ್ದದರ ಇದ್ದಾಂಗೆ ಹೇಳ್ರೆ ನೀವ್ಗೆ ಪಿತ್ತ ನೆತ್ತಿಗೇರ್ದೆ. ಗದ್ದೆ ಹಾಳಾಗಿ ಎರಡ್ ಹೊತ್ತ್‌ನ ಗಂಜಿಗೆ ನಾ ಏನ್ ಮಾಡ್‌ದಪ್ಪ ದೇವ್ರೇ ಅಂತ ನಂಗೆ ತಲೆ ಬಿಸಿ. ಅಂತದ್ರಲ್ಲಿ ಜಾತಿ ಕೆಡ್ಸಿಕೆ ಉಪಾಯ ಮಾಡ್ಯಳಾ ಅಂತ ಹೇಳ್ಯನಾ? ನೋಡು ನಾ ಯಾರಿಗೂ ಉಳ್ಕು ತೆಗ್ಯಕೆ ಹೋದ್ಲೆ. ಇದ್ರಂದನೇ ಗೈದ್ ಹೆಣ್ಣ್ ಮಕ್ಕಳ ನಾ ಸಾಕಕೂಂತ ಏನ್ ಇಲ್ಲೆ. ಈ ಹೇಲ್ ತಿಂಬ ಕೆಲ್ಸನೇ ಬೇಡ ನಂಗೆ (ಬೇಗ ಹೊರ್‌ಟು ಹೋದೆ)

ಕಾಳೇಗೌಡ: ಲೇ... ಕರಿಯಾ... ಕರಿಯಾ... ಮಾರಾಯಾ... ಥತ್ ಸುಟ್ಟವ. ನಾ ನಿನ್ನ ಹಕ್ಕಲೆ ಬಂದ್ ಬುಟ್ಟೆಲ್ಲಾ ನನ್ನ ಬುದ್ದಿಗೆ ನಾ ಮೆಟ್ಟಲಿ ಹೊಡ್ಕಣಕು.

(ಇದ್ದಕ್ಕಿದ್ದ ಹಾಂಗೆ ಕಾಳೇಗೌಡನ ತಲೆಲಿ "ಪಟಕ್" ಅಂತ ಏನೋ ಹೊಳ್ದದೆ. ಒಳಗೊಳಗೆ ಲೆಕ್ಕಾಚಾರ ಹಾಕಿ ನಾನೇ ಏಕೆ ಉಳ್ಕು ತೆಗ್ಯಕೆ ಪ್ರಯತ್ನಿಸಿಕಾಗದ್.. ಅಂತ ಭಾವನೆ ಅವನ ಮೊರೆಲಿ ಬಂದದೆ)

ದೃಶ್ಯ–18

(ಭೈರಪ್ಪನ ಮನೆ, ಸೊಂಟ ಉಳ್‌ಕಿಸಿಕೊಂಡ ಭೈರಪ್ಪ ಮತ್ತು ಸುಬ್ಬಯ್ಯ ನೆಲಕ್ಕೆ ಕವ್‌ಚಿ ಮಲಗ್ಯಳ ಎರಡು ಜನ ಅವ್ಕೆ ಎಣ್ಣೆ ಪೂಜುತ್ತಾ ಒಳ ಸೀಗೇಗೌಡನೂ ಅಲ್ಲಿದ್ದದೆ)

ಸೀಗೇಗೌಡ: ಅಲ್ಲಾ... ಅಣ್ಣಪ್ಪ ಡಾಕ್ತ್ರ ಹಕ್ಕಲೆ ಕರೆಂಟ್ ತಕಂಡರೆ ಒಂದು ಕ್ಷಣಲಿ ಉಳ್ಕು ಹೋದೆ ಅಂತ ಆ ವಾಸಾಚಾರಿ ಹೇಳ್ತ್. ನೀವು ಕೇಳ್ದರಿ. ಆ ಅಣ್ಣಪ್ಪ ಡಾಕ್ಟರ್ ಸಾಮಾನ್ಯದವ ಏನೂ ಅಲ್ಲ. ಒಂದು ಸರ್ತಿ ಸತ್ತೋದ ಹೆಣಕ್ಕೂ, ಇಂಜೆಕ್ಷನ್ ಕೊಟ್ಟು ದುಡ್ಡು ತಕಂದ್ ನೀವ್ಗೂ ಗೊತ್ತುಟು. ಹಾಂಗಿರಕನ ಗೊತ್ತಿದ್ದೂ... ಗೊತ್ತಿದ್ದೂ.. ಅವನ ಕೈಗುಣ ಲ್ಯಾಕ್ ಉಟ್ಟೂಂತ ಅವನಕ್ಕಲೆನೆ ಹೋಗ್ಯಳರಿ. ನೀವ್ಗೆ ಎಷ್ಟು ಕಡಿಮೆ ಮಾಡಿಟು ಅವ? ಎಕ್ಸರೆ, ಪೋಟಾ ತೆಗ್ಸಿ, ಹೇಲ್, ಉಚ್ಚೆ, ರಕ್ತ ಎಲ್ಲಾ ಪರೀಕ್ಷೆ ಮಾಡ್ಸಿ, ಊರ್‌ಲಿ ಇರ್‌ದೇ ಇರುವ ಎಣ್ಣೆಗಳ ಕೊಟ್ಟು ನಿಮ್ಮಕ್ಕಲೆನೂ ಎಷ್ಟೊ ದುಡ್ಡು ತಿಂಬಕೆ ಅದೆನೋ ಅಷ್ಟು ತಿಂದ್ ಕಳ್ಸಿಟು.

ಸುಬ್ಬಯ್ಯ: ನಾವ್ಗೇನ್ ಗೊತ್ತಿತಾ ಅವ ಮೋಸ ಮಾಡ್ದೇಂತ. ಏನೋ ರೋಗ ಗುಣ ಆದರೆ ಸಾಕೂಂತ ಹೋಗಿದ್ದ.

ಸೀಗೇಗೌಡ: ಹಾಂಗೆ ಅಂದ್‌ಕಂಡೆ. ಇನ್ನೂ ಅವ ಕೊಟ್ಟ ಎಣ್ಣೇನೇ ತಿಕ್ಕಿಸಿಕಂಡ್ ಇರಿ.

ಭೈರಪ್ಪ: ಬೇರೇನ್ ಮಾಡಿಕಾದೆ? ಅಷ್ಟು ದುಡ್ಡು ಕೊಟ್ಟು ತಂದದರ ಕಣಿಗೆ ಬಿಸಾಡಿಕೆ ಆದೆನಾ?

ಸೀಗೇಗೌಡ: ತಥ್ ಮುಂಡೆ ಮಕ್ಕ... ಬೆನ್ನ್ ಉಳ್ಕಿಗೆಲ್ಲಾ ಇಷ್ಟೊಂದು ಮದ್ದ್ ಮಾಡ್ವೆನಾ.. ಒಂದು ಚೂರು ಉದಾಸೀನ ಮಾಡಿ ಸುಮ್ಮನಿದ್ದಿದ್ದರೆ ಅದರಷ್ಟಕ್ಕೆ ಹೋಗ್ತಿತ್ತ್.

ಸುಬ್ಬಯ್ಯ: ಇಷ್ಟೆಲ್ಲಾ ಮಾಡಿರುನೂ ಹೋಗದೆ ಇರ್‌ದು, ಸುಮ್ಮಂಗೆ ಉದಾಸೀನ ಮಾಡಿಕಂಡ್ ಕುದ್ದರೆ ಹೋದೆಗಡ! ನಿನ್ನ ಮಾತ್ ಕೇಳಿರೇ ನಾವೇ ಮೇಲೆ ಹೋದವೆ ಅಷ್ಟೆ!

ಸೀಗೇಗೌಡ: ನೋಡಿ ಮಾಡ್ದು ಮಾಡ್ತ್ಯೊಳರಿ. ಎಂಥದೋ ಮಾಡಿರೆ ಹೋದೆನಾ? ಈಗನೂ ಹೇಳಿನೆ ಕೇಳಿಕಣಿ. ಹಳೇ ಜಗಳ, ಕೋಪ, ಬೇಸರನ ಕಟ್ಟಿಕಂಡ್ ಕುದ್ದರೆ ಏನೂ ಆದುಲೆ. ಹೋಗಿ ಕರಿಯನ ಕೈಲಿ ಉಳ್ಕು ತೆಗ್ಸಿಕಂಡ್ ಬನ್ನಿ. ಎಲ್ಲೆಲ್ಲೆಗೂ ಉಳ್ಕು ತೆಗ್ಯಕೆ ಅವನ ಕರ್‍ಕಂಡ್ ಹೋದವೆ. ಹಾಂಗಿರಕನ ನೀವ್ಗೇನು ಬುಡ್‌ದುಟು ರೋಗ? ಮನೆ ಹಿತ್ಲಲ್ಲೇ ಡಾಕ್ಟ್ರು ಇರಿಕಾಕನ ಆಸ್ಪತ್ರೆಗೆ ಹೋಗಿ ಸೇರ್‍ಯಳರಲ್ಲಾ... ನೀವ್ಗೆ ಭಾಷೆ ಇಲ್ಲೆನಾ?

ಕಾಳೇಗೌಡ: (ಒಳಗೆ ಬಂದ್) ನಂಗೂ ಇವರ ಅವತಾರ ನೋಡಿ–ಕಾಗದೆ ನಾನೇ ನನ್ನ ಮರ್ಯಾದಿ ಹೋದರೂ ತೊಂದರೆ ಇಲ್ಲೆಂತ ಕುಲ್ವಾಡಿ ಕರಿಯನ ಹಕ್ಕಲೆ ಹೋಗಿದ್ದೆ.

ಸೀಗೇಗೌಡ: ಏನು ಹೇಳ್ತ್?

ಕಾಳೇಗೌಡ: ಹಿಂದೆಲ್ಲಾ ಯಾರಿಗಾರ್ ಉಳ್ಕು ಆವ್‌ಟುತೇಂತ್ರೆ ಸಾಕ್ ಕೂಡ್ಲೆ ಹೊರಡ್‌ತ್ತಿತ್ತು. ಆದರೆ ಇವರ ವಿಷಯಲಿ ಯಾ–ಕೋ ಸ್ವಲ್ಪನೂ ಆಸಕ್ತಿ ತೋರ್‌ಸ್‌ತ್ಲೆ.

ಸೀಗೇಗೌಡ: ನೀ ಎಂಥ ಹೇಳ್ತ್‌ಲೆನಾ?

ಕಾಳೇಗೌಡ: ನಾ ಹೇಳುವಷ್ಟು ಹೇಳ್ದೆ, ಕೇಳಿಕಂಡೆ, ಬೇಡಿಕಂಡೆ. ಇಷ್ಟು ಮಾಡಿನೂ ಇನ್ನ್ ಮೇಲೆ ನಾ ಯಾರಿಗೂ ಉಳ್ಕು ತೆಗ್ಯಕೆ ಹೋದುಲೆ. ಇದರ್‌ಂದ ನನ್ನ ಹೆಣ್ಣು ಮಕ್ಕಳ ಸಾಕಕಾನಾ? ಈ ಹೇಲ್ತಿಂಬ ಕೆಲ್ಸ ನಂಗೆ ಬೇಡ, ಹೋಗು ಅಂತೇಳ್ತು.

ಸುಬ್ಬಯ್ಯ: ಇದರ ಕೇಳಿಕಂಡ್ ಸುಮ್ಮಂಗೆ ಬಂದನಾ?

ಕಾಳೇಗೌಡ: ನಂಗೂ ಪಿತ್ತ ನೆತ್ತಿಗತ್ತಿತ್. ಬೇರೇನಾರ್ ಹೆಚ್ಚುಕಮ್ಮಿ ಆಗಿ ಮತ್ತೆ ಆ ಸುಟ್ಟವ ಅರ್ಜಿ ಕೊಟ್ಟು ಲಾಕಪ್ಪಿಗೆ ಹಾಕಿಸಿಬುಟ್ಟಾರೆ ಅಂತ ಸುಮ್ಮಂಗೆ ಬಂದೆ. ನನ್ನ ಬುಟ್ಟರೆ ಈ ಊರ್‌ಲಿ ಉಳ್ಕು ತೆಗೆಯವ್ರು ಬೇರೆ ಯಾರೂ ಇಲ್ಲೇಂತ ತಿಳ್ಕಂಟು ಅವ. ಭೈರಪ್ಪ.. ಬಾ ಇಲ್ಲಿ ಕುತ್ತಿಗೆ ಹಿಂದೆಂದ ಕೈ ಒಟ್ಟಿಗೆ ಸೇರ್‍ಸಿ ಗಟ್ಟಿ ಹಿಡ್ಕಂಡ್ ಮಲ್ಕ ನೋಡುವ. ನನ್ನ ಕೈಗುಣ ಲ್ಯಾಕಿದ್ದ್ ನಿನ್ನ ಗಳಿಗೆ ಸರಿ ಇದ್ದರೆ ಯಾಕೆ ಉಳ್ಕು ಹೋಕಾಗದು ನೋಡುಮ.

ಭೈರಪ್ಪ: ಬೇಡ ಬುಡು. ಈಗೇನು ಅಷ್ಟು ಬೇನೆ ಇಲ್ಲೆ. ವಿಷಯ ಏನೂಂತೇಳ್ರೆ ಸೊಂಟ ಬಗ್ಗಿಸಿಕಾಗದು ಅಷ್ಟೆ. ಹೀಂಗೆ ಇದ್ದರೆ ಇನ್ನೊಂದು ನಾಲ್ಕು ದಿನಲಿ ಸರಿ ಅದು.

ಕಾಳೇಗೌಡ: ಅದೇನ್, ಆ ದಿಕ್ಕನ (ಹೊಲಿಯುನ) ಕಾಲ್‌ಲಿ ಮೆಟ್ಟಿಸಿಕಂಡ್ ಹೋಕೂಂತ ದೇವ್‌ರೇನಾರ್ ಹೇಳಿಟಾ? ಎಲ್ಲಿ ನೋಡುಮಾ.

ಭೈರಪ್ಪ: ಏಯ್.. ಬೇಡಾಂತ ಹೇಳ್ದಿಲ್ಲಾ ಮಾರಾಯ.

ಕಾಳೇಗೌಡ: ನನ್ನ ಮಾತ್ ಸ್ವಲ್ಪ ಕೇಳಿ ಇಲ್ಲಿ. ಅದರ ಹಂಗೇ ಬುಟ್ಟರೆ... ಕಡೇಗೆ ಜೀವಮಾನ ಇಡೀ ಹಾಂಗೆ ಸೊಂಟ ಹಿಡ್ಕಂಡ್ ಕಾಲ ದೂಕಾಡದೆ ನೋಡಿ.

(ಕರಿಯ ಹೇಳ್‌ದರ ನೆನ್‌ಪಿಸಿಕಂಡ್ ಅದರ ಭೈರಪ್ಪನ ಮೇಲೆ ಪ್ರಯೋಗ ಮಾಡ್‌ದೆ. ಭೈರಪ್ಪ ಕುತ್ತಿಗೆ ಹಿಂದೆಂದ ಕೈ ಸೇರ್‍ಸಿಕಂಡ್ ಗಟ್ಟಿ ಹಿಡ್ಕಂಡ್ ಮಲ್‌ಗಿದೆ. ಕಾಳೇಗೌಡ ಅವನ ಮೊಣಕೈ ಮೇಲೆ ಭಾರ ಇಸಿ ಒತ್ತಿಕಂಡ್ ಹೋದಂಗೆ ಭೈರಪ್ಪ ನರಳಿದೆ)

ಭೈರಪ್ಪ: ಅಯ್ಯೋ... ಮಾರಾಯ ಸ್ವಲ್ಪ ಮೆಲ್ಲೆ ಮೆತ್ತಂಗೆ ಮಾಡ್.

ಕಾಳೇಗೌಡ: ಆತ್.. ಆತ್.. ಮೆತ್ತಂಗೆ ಮಾಡಿನೆ.. (ಮತ್ತೆ ಮತ್ತೆ ಎಳ್‌ದದೆ) ಎಷ್ಟ್ ಎಳ್‌ದರೂ ಬೆನ್ನು ಮೂಳೆಂದ ಲಟಕೆ

ಸದ್ದು ಬರ್ತಾ ಇಲ್ಲೆಲ್ಲಾ ಭೈರಪ್ಪ.. ಉಳ್ಕು ಬುಟ್ಟತಾ?

ಭೈರಪ್ಪ: ಇಲ್ಲೆ..

ಕಾಳೇಗೌಡ: ಓ... ಕರಿಯ ಹೇಳ್ದಂಗೆ ಇದರ ಕಾಲ್‌ಲೇ ಮೆಟ್ಟಕು.

ಭೈರಪ್ಪ: ಎಂತೇಳ್ದ..?

ಕಾಳೇಗೌಡ: ಏನಿಲ್ಲೆ..

(ಮತ್ತೆ ಮತ್ತೆ ಎಳ್‌ದದೆ ಭೈರಪ್ಪನ ಬೆನ್ನಿಗೆ ಬದಲಾಗಿ ಅವನ ಬೆನ್ನ್‌ಲ್ಲೇ "ಕಳಕ್" ಅಂತ ಸದ್ದಾದೆರ ಕೇಳಿ ಕಾಳೇಗೌಡ ಬೇನೆ ತಡ್ಯಕೆ ಆಗದೆ ಕೆಳಗೆ ಹೊಣ್‌ಕಿದೆ)

ಭೈರಪ್ಪ: ಓ.. ಬುಟ್ಟುತ್ ಅಂತ ಕಂಡದೆ. ಕಳಕ್ ಅಂತ ಸದ್ ಕೇಳ್ತ್.

ಕಾಳೇಗೌಡ: ಕಳಕ್ ತೇಂಳ್ದು ನನ್ನ ಬೆನ್ನಲಿ ಮಾರಾಯಾ.. ನನ್ನ ಸೊಂಟಕ್ಕೂ ಬಾತ್ ಅಯ್ಯೋ..

ಸುಬ್ಬಯ್ಯ: ಇಬ್ಬರೇ ಇದ್ದ... ಈಗ ನೀನೂ ಒಟ್ಟಿಗೆ ಸೇರ್ಕಂಡ ಬಾ.. ಮಲ್ಕ ಉಜ್ಜುವೆ.

ಸೀಗೇಗೌಡ: ಸರೀ ಆತ್. ಇದೆಂತಾ ಉಳ್ಕು? ಬುಡ್ಸಿಕೆ ಹೋದವ್ಕೆ... ಹಿಡ್‌ಕಂತಲ್ಲಪ್ಪ.

ಭೈರಪ್ಪ: ಕಾಳೇಗೌಡ.. ಎಂತ ಯೋಚನೆನೂ ಮಾಡ್‌ಬೇಡ. ನಮ್ಮಕ್ಕಲೆ ಬೇಕಾದಷ್ಟು ಮದ್ದ್‌ನ ಕುಪ್ಪಿಗ ಉಟ್ಟು. ನೀನೂ ಒಂದೆರಡು ತಕಂಡ್ ಹೋಗಿ ನಿನ್ನ ಹೆಣ್ಣ್‌ನ ಕೈಗೆ ಕೊಟ್ಟು ಲಾಯ್‌ಕಲಿ ಪೂಜಿಸಿಕಂಡ್ ಬೆಚ್ಚ ಬೆಚ್ಚ ನೀರ್‌ಲಿ ಮೀ. ಎಲ್ಲಾ ಸರಿ ಹೋದೆ.

(ಸೀಗೇಗೌಡ ಕಾಳೇಗೌಡನ ಕೈಲಿ ಒಂದೆರಡು ಮದ್ದ್‌ನ ಕುಪಿ ಕೊಟ್ಟು, ಅವನ ಮೇಲೆ ಎದ್ರಿಸಿ, ಕರ್‌ಕಂಡ್ ಹೋದೆ)

ಸೀಗೇಗೌಡ: ಎದ್ರೆದ್ರು.... ಇನ್ ಮೇಲೆ ನಿನ್ನನ್ನೂ ಒಬ್ಬ ಹಿಡ್‌ಕಂಡ್

ಹೋಗುವವ ಬೇಕು. ಮನೆವರೆಗೆ ಬುಟ್ಟು ಬಂದನೆ.. ಪೋಯಿ.

ಸುಬ್ಬಯ್ಯ: ಮುಂದೇ ಕಿರ್‌ಗೂರಿನ ಗಂಡು ಜನಂಗತೇಂಳ್ರೆ ಕುಡ್‌ಕಂಗ ಸೋಮಾರಿ ಗಾಂತ ಹೆಸರು ಮಾಡ್ಯಳ. ಇನ್ನು ಹಿಂಗಾದರೆ ಅಷ್ಟೆ ಮತ್ತೆ.

ಭೈರಪ್ಪ: ಬಗ್ಗಿರೆ ಎದ್ರಿಕಾದ್ಲೆ.. ಎದ್ದರೆ ಕುದ್ರಿಕಾದ್ಲೆ.. ಅದೆಂಥಾ ರೋಗನೋ ದೇವ್‌ರಿಗೇ ಗೊತ್ತ್.

ಸುಬ್ಬಯ್ಯ: ಈಗಾಗಲೇ ಜನಂಗ ಪೂರಾ ಮಾತಾಡಿ ತಮಾಷೆ ಮಾಡಿಕೆ ಸುರು ಮಾಡ್ಯಳ. ರೋಗಿಗೆ ಬೇಕಾದ್ದ್ ಹಾಲೇ, ಡಾಕ್ಟ್ರು ಹೇಳ್ದೂ ಹಾಲೇ, ಅತ್ತ ರೋಗನೂ ಅಲ್ಲ, ಇತ್ತ ಹುಷಾರೂ ಅಲ್ಲ. ಕೆಲಸ ಮಾಡಿಕೆ ಕಾಯಿಲೆ ತಿಂಬಕೆ ಏನೂ ತೊಂದರೆ ಇಲ್ಲೆ. ಹಂಗಾತ್ ಒಟ್ಟಾರೆ ಎಲ್ಲಾ ಕೆಲ್ಸ ನಮ್ಮ ಹೆಣ್ಣುಗಳ ತಲೆಗೆ ಬೀತ್. (ಮಲಗಿ ಎಣ್ಣೆ ಪೂಜಿಸಿ ಕಂಡವೆ)

ದೃಶ್ಯ–19

(ಕಾಳೇಗೌಡನ ಮನೆ. ಹೆಣ್ಣು ನಾಗಮ್ಮ ಕಾಳೇಗೌಡಂಗೆ ಬೇನೆ ಎಣ್ಣೆ ಸೊಂಟಕ್ಕೆ ಪೂಜುತ್ತಾ ಉಟ್ಟು. ಅವಳಿಗೆ ನರ್‌ಳಿಕಂಡ್ ಬೈದದೆ)

ಕಾಳೇಗೌಡ: ಸರಿಯಾಗಿ ಉಜ್ಜುನೇ... ಸುಟ್ಟದ್.. ಅದೆಂಥಾ ಉಜ್ಜಿಯೇನೋ.. ನಾಲ್ಕು ದಿನಂದ ನಿನ್ನ ಕೈಲಿ ಎಣ್ಣೆ ಉಜ್ಜಿಸಿಕಂಡ್ ಬೆಚ್ಚಂಗೆ ನೀರ್ ಹಾಕಿಕಂಡರೂ.. ಎಂಥ ಸಾವೂನು ಆತ್ಲೆ.

ನಾಗಮ್ಮ: ಈಗಲೇ ಆ ಶಂಕರಪ್ಪನ ಅಂಗಡಿ ಕಳ್ಳ್ ಕುಡ್ದು ಕುಡ್ದು ಮೈಯೆಲ್ಲಾ ಒಣಗಿ ಮುರುಟಿ ಹೋಗುಟು. ಇದೆಂಥಾ ಮೈ? ಹಿಂಗಿರಿಕನ ನೀವ್ಯಾಕೆ ಅವರ ಉಳ್ಳು ತೆಗ್ಯವ ಕೆಲ್ಸಕ್ಕೆ ಹೋಕಾಗಿತ್ತ್?

ಕಾಳೇಗೌಡ: ಏಯ್.. ಬಾಯಿ ಮುಚ್ಚಿಕಂಡ್ ಸುಮ್ಮನೆ ಉಜ್ಜಿಕಂಡ್ ಇದ್ದಾ ಸರಿ.. ನಂಗೇ ಹೇಳಿಕೆ ಬಂದ್ಯನಾ? ಮೊದ್ವೆ ಆಗಿ ಇಷ್ಟು ವರ್ಷ ಆದರೂ... ನಿಂಗೆ ಒಂದು ಕೂಸು ಹೆರಿಕೆ ಆತ್ಲೆ... ಮತ್ತೆ ಮಾತಾಡ್ದೆ.. ಪೂಜು ಸುಮ್ಮನೆ.

(ಶಂಕರಪ್ಪ "ಕಾಳೇಗೌಡ.. ಕಾಳೇಗೌಡ" ಅಂತ ಬಾಯಿ ಬಡ್ಕಂಡ್ ಕೇರಳದ ನಂಬೂದಿರಿ ಪಂಡಿತರೊಟ್ಟಿಗೆ ಒಳಗೆ ಬಂದದೆ. ನಾಗಮ್ಮ ಎದ್ದ್ ನಿತ್ತದೆ)

ಕಾಳೇಗೌಡ: ಬಾ... ಶಂಕರಪ್ಪ.. ಬಾ..

ಶಂಕರಪ್ಪ: ಕಾಳೇಗೌಡ ಕೋಟೇಕ್ಕಲ್ ನಂಬೂದಿರಿ ಪಂಡಿತರ ಕರ್ಕಂಡು ಬಂದೊಳೆ.

ಕಾಳೇಗೌಡ: ಮೊನ್ನೆ ಶಂಕರಪ್ಪನ ಕಳ್ಳುನ ಅಂಗಡೀಲಿ ಕಳ್ಳ್ ಕುಡ್ಕಂಡ್ ಹೇಳಿದ್ದೆ "ಎಂಥೆಂಥಾ ರೋಗಕ್ಕೆ ಮದ್ದು ಕಂಡು

ಹಿಡಿದಳಾ.. ಆದ್ರೆ ಈ ಉಳ್ಕಿಗೆ ಮಾತ್ರ ಒಂದೇ ಒಂದು ಮದ್ದ್ ಇನ್ನೂ ಇಲ್ಲೆಲ್ಲಾಂತ" ಹೇಳ್ದೆ. ಆಗನೇ ಶಂಕರಪ್ಪ ನಿಮ್ಮ ಹೆಸರ್ ಹೇಳ್ದ. ನಿಮ್ಮ ಕೈಲಿ ಎಂಥ ಉಳ್ಕಾದ್ರೂ ಹೋದೆ ಗಡ?

ನಂಬೂದಿರಿ: (ಮಲಯಾಳಿ ಕನ್ನಡಲಿ ಮಾತಾಡಿದೆ) ಇನ್ನೂ... ನೀವು ತಲೆ ಬೆಚ್ಚ ಮಾಡ್‌ಬೇಡಿ.. ನಾ ಒಳೆ. ಮತ್ತೆ.. ಇದ್ ಎಂತದ್ದ್? (ಸಣ್ಣ ಸಣ್ಣ ಔಷಧಿ ಕುಪ್ಪಿಗಳ ನೋಡಿ)

ಕಾಳೇಗೌಡ: ಇದ್ ಮದ್ದ್‌ನ ಎಣ್ಣೆ. ಸುಬ್ಬಯ್ಯನ ಹಕ್ಕಲೇಂದ ತಂದಿದ್ದ.

ನಂಬೂದಿರಿ: ಇನ್ನು ಇದರ ಅತ್ತ ಕಣಿಗೆ ಬಿಸಾಡಿ. ನೀವ್ಗೆ ಈ ಎಣ್ಣೆ ಗಿಣ್ಣೆ ಎಂಥದ್ದೂ ಬೇಡ. ನಾ ನಾಡ್ ಮದ್ದ್ ಕೊಟ್ಟನೆ. ಒಂದು ನಾಕ್ ದಿನ ಇಲ್ಲಿ ವೊಳ್ಯಕೆ ಜಾಗೆ ಕೊಡಕು ಅಷ್ಟೆ.

ಶಂಕರಪ್ಪ: ನಾಕ್ ದಿನ ಎಂಥ... ನಾಕ್ ವಾರನೇ ಇರಿ ಬೇಕಾರೆ. ಅಲ್ಲಾ.. ಕಾಳೇಗೌಡ.

ಕಾಳೇಗೌಡ: ಹೌದು.. ಹೌದು.. ನೀವು ಯಾವುದಕ್ಕೂ ತಲೆ ಕೆಡ್ಸಿಕಂಬೇಡಿ ಎಂಥ ಬೇಕರೂ ಕೇಳಿ. ಒಟ್ಟಾರೆ ನನ್ನ ಉಳ್ಕು ಹೋಕು ಅಷ್ಟೆ.

ನಂಬೂದಿರಿ: ನನ್ನ ಪ್ರಕಾರ... ಒಂದು ಕಾಯಿಲೆ ಗುಣ ಆಕಾರೆ.. ಯಾರಿಗೆ ರೋಗ ಬಂದುಟೋ ಅವು ಆ ಮದ್ದ್‌ನ ಮೇಲೆ ನಂಬಿಕೆ ಇಸಕು. ಒಬ್ಬಂಗೆ ವಾಸಿ ಆದ ಇದೇ ಮದ್ದ್ ಮತ್ತೊಬ್ಬಂಗೆ ವಾಸಿ ಆತ್ಲೇತೇಂಳ್ರೆ. ನಂಬಿಕೆ ಇಸದಿರ್‌ದೇ ಅದ್ಕೆ ಕಾರಣ ಬೇರೇನೂ ಅಲ್ಲ.

ಕಾಳೇಗೌಡ: ನೋಡಿ ಕಾಯಿಲೆ ಗುಣ ಆದರೆ ಮದ್ದ್‌ನ ಮೇಲೆ ರೋಗಿಗೆ ನಂಬಿಕೆ ಬಂದದೆನೋ.. ನಂಬಿಕೆ ಇರ್‌ದರ್‌ಂದ ಕಾಯಿಲೆ ಗುಣ ಆದೆನೋ.. ಅದೆಲ್ಲಾ ನಂಗೊತ್ತಿಲ್ಲೆ. ನೀವು ಎಂಥ ಕೊಟ್ಟರೂ ಸರಿನೇ ಒಟ್ಟಾರೆ ನನ್ನ ಸೊಂಟ ಸುರುನ ಹಾಂಗೆ ಆಕು ಅಷ್ಟೆ.

ನಂಬೂದಿರಿ: ನೋಡಿ ಈಗ ಮದ್ದ್ ತಯಾರ್ ಮಾಡಿಕೆ ಯಾರಾರೊಬ್ಬ ಸಹಾಯಕ್ಕೆ ನಂಗೆ ಬೇಕು. ನಿಮ್ಮ ಮನೇಲಿ ಯಾರಾರು ಹೈದಂಗೆ ಇದ್ದರೆ ಒಳ್ಳೆದು. ಯಾರೂ ಇಲ್ಲೆನಾ?

ಶಂಕರಪ್ಪ: ಪಾಪ... ಇವ್ಕೆ ಮಕ್ಕಳೇ ಇಲ್ಲೆ. ಅದ್ಕೆ ಇನ್ನೊಂದು ಮದ್ವೆ ಮಾಡ್ಕಂತ ಒಳ.

ಕಾಳೇಗೌಡ: ಮಕ್ಕ ಇಲ್ಲದಿದ್ದರೆ ಏನ್? ನನ್ನ ಹೆಣ್ಣು ಉಟ್ಟಲ್ಲ. ಅದ್ ನೀವ್ಗೆ ಸಹಾಯ ಮಾಡ್ದೆ.

ನಂಬೂದಿರಿ: ಆತ್.. ಆತ್... ಅದರ ಹೆಸರು ಎಂಥ?

ಶಂಕರಪ್ಪ: "ನಾಗಮ್ಮ" ಅಂತ.

ನಂಬೂದಿರಿ: ಓಹೋ... ನಾಕಮ್ಮ... ನಾಕಮ್ಮ... ಹಾ.. ಹಾ.. ನೋಡು ನಾಕಮ್ಮ. ನೀ ಇಷ್ಟು ಕೆಲ್ಸ ಮಾಡಿರೆ ಸಾಕ್. ನಾ ಮದ್ದ್ ತಯಾರ್ ಮಾಡಿಕಾಕನ. 'ನಾಕಮ್ಮ ಅದು ತಕಂಬಾ.. ಇದು ತಕಂಬಾ..' ಅಂತ ಕೇಳಿನೆ. ಆಗ ನೀ ಅದರ ತಂದ್ ಕೊಟ್ಟರೆ ಸಾಕ್. ಒಂದ್ ನಾಕ್ ದಿನ ನಾಕಮ್ಮ. ಆಮೇಲೆ ನಿನ್ನ ಗಂಡನ ಸೊಂಟ ಬುಟ್ಟು ಹೋದೆ.. ಗೊತ್ತಾತಾ..

(ರಂಗದ ಮೇಲೆ ಕತ್ತಲಾದೆ)

ದೃಶ್ಯ–20

(ಕತ್ತಲೆ ಕಾಳೇಗೌಡನ ಮನೆ. ಕಾಳೇಗೌಡ ಮಲ್‌ಗಿಟು. ನಿದ್ದೆಲೂ ಬೇನೆಂದ ನರ್‌ಳಿದ. ಅತ್ತನ ಬದಿಗೆ ನಂಬೂದಿರಿ ಎಂಥದೋ ಕುಟ್ಟಿಕಂಡ್ ಮದ್ದು ಮಾಡ್ತಾ ಉಟ್ಟು. ನಾಗಮ್ಮ ಅವಂಗೆ ಸಹಾಯ ಮಾಡ್‌ತ್ತುಟ್ಟು)

ನಂಬೂದಿರಿ: ನಾಕಮ್ಮಾ... ಬಾ... ವ್ವಾ... ಒಂದು ಚೊಂಬುಲಿ ನೀರ್ ತಕಂಬಾ (ನಾಗಮ್ಮ ನೀರ್ ತಂದಿಸಿ ಹೊದೆ) ನಾಕಮ್ಮಾ... ಒಂದು ಸ್ವಲ್ಪ ಸುಣ್ಣಕಾಯಿ ಬೆಲ್ಲನ ತಕಂಬಾ (ನಾಗಮ್ಮ ಸುಣ್ಣ ಬೆಲ್ಲ ತಂದಿಸಿ ಹೋದೆ) ನಾಗಮ್ಮ.. ಸ್ವಲ್ಪ ಜೇನು ಬೇಕಲ್ಲವ್ವ.. (ನಾಗಮ್ಮ ಜೇನುತುಪ್ಪ ತಂದ್ ಹೊರಟದೆ. ಅಷ್ಟಾಕನ) ನಾಕಮ್ಮಾ ಇತ್ತ ಬಾ... ಎತ್ತ ಹೋದು ನೀ.. ಇಲ್ಲಿ ಕುದ್ರು (ನಂಬೂದಿರಿ ಅವನ ಹಕ್ಕಲೆ ಕುದ್ರಿಗೆ ಹೇಳ್ದೆ. ನಾಗಮ್ಮ ಇಲ್ಲೆ ಕುದ್ರುದ್ಲೇಂತ ತಲೆ ಆಡ್ಸಿಸಿ ಮಲ್‌ಕಂಡಿದ್ದ ಗಂಡನ ನೋಡ್ದೆ) ಅಯ್ಯೋ.. ಅವಂಗೆ ನಾಡ್‌ಮದ್ದ್ ಕೊಟ್ಟಳೆ ಮಾರಾಯ್ತಿ. ಅವ ನಾಳೆ ಬೆಳಿಗ್ಗೆ ಆದರೂ ಎದ್ರುದ್ಲೆ.. ಬಾ ಕುದ್ರು. (ನಾಗಮ್ಮ ದೂರಲಿ ಕುದ್ದದೆ. ನಂಬೂದ್ರಿ ಮದ್ದು ಕುಟ್ಟಕಂಡ್ ಕುಟ್ಟಿಕಂಡ್ ಅದರ ಹಕ್ಕಲೆ ಬಂದದೆ) ನಾಕಮ್ಮ ಎಲ್ಲಿ ನೋಡುಮ, ನಿನ್ನ ಕೈ ತೋರ್ಸು.. (ನಾಗಮ್ಮ ಒಪ್ಪುದ್ಲೆ) ನೀ ಎಂತ ಚಿಂತಿ ಮಾಡ್ತ ಒಳಾಂತ ನಂಗೆ ಗೊತ್ತುಟು. ನಿಂಗೆ ಮಕ್ಕ ಆದೆನಾ ಇಲ್ಲೆನಾಂತ ನೋಡಿನೆ ಅಷ್ಟೆ. (ನಾಗಮ್ಮ ಕೈ ಕೊಟ್ಟದೆ ನಂಬೂದಿರಿ ಕೈನ ಪೂಜಿ ಪೂಜಿ ನೋಡ್ದೆ) ಓ.. ಹೋ.. ನಾಕಮ್ಮ ನಿಂಗೆ ಒಂದಲ್ಲ ಹತ್ತು ಮಕ್ಕ ಆಗುವ ಯೋಗ ಉಟ್ಟು. ಆದ್ರೆ ಕೊಡುವವಂಗ ಯೋಗ್ಯತೆ ಇರಕಲ್ಲಾ? ನೀ ನನ್ನ ಮಾತ್ ಕೇಳ್ದಾರೆ ನಾ ನಿಂಗ್ ಕೊಟ್ಟನೆ. (ನಾಗಮ್ಮ

ಹೆದರಿಕಂಡ್ ಕೈ ಹಿಂದೆ ಎಳ್‌ಕಂಡದೆ) ಆ.. ಅದ್.. ಹೇಳ್ದ್.. ಮಕ್ಕಳಾಗುವ ಮದ್ದ್ ಕೊಟ್ಟನೇಂತ ಹೇಳ್ದೆ.. (ನಾಗಮ್ಮ ಹೆದರಿ ಮಲ್‌ಕಂಡಿದ್ದ ಗಂಡನ ಮೋರೆ ನೋಡ್ದೆ) ಇದ್ ಇವ್ಕೆ ಗೊತ್ತಾದು ಬೇಡ. ಈಗಲೇ ನನ್ನ ಒಟ್ಟಿಗೆ ಬಾ. ಪೇಟೆಗೆ ಹೋಗಿ ಮದ್ದು ತಕಂಡ್ ಬರುಮ. (ನಾಗಮ್ಮ ಆಕಿಲೇಂತ ತಲೆ ಆಡ್ಸಿದೆ) ನೋಡು.. ನಿಂಗೆ ಮಕ್ಕ ಬೇಕಾ ಬೇಡನಾ? ತಲೆ ಓಡ್ಸು ಸ್ವಲ್ಪ ಇನ್ನು ಜಾಸ್ತಿ ಹೇಳ್‌ದ್ಲೆ ಬೇಕಾ.. ಬೇಡನಾ..? (ನಾಗಮ್ಮ ಮೆಲ್ಲಂಗೆ ತಲೆ ಎತ್ತಿ ಬೇಕು ಅಂತ ತಲೆ ಆಡ್ಸಿದೆ)

ನಂಬೂದಿರಿ: ಆಂ... ಜಾಣೆ ಒಳನೀ... ಜಾಣೆ ಜಾಣೆ.. ಬೊಳ್‌ಪೊಳ್ಗಿಗೆ ಬಂದ್ ಬುಡುಮಾ..

(ನಂಬೂದಿರಿ ನಾಗಮ್ಮನ ಕೈ ಹಿಡ್‌ದದೆ. ತಲೆ ಬುಡ ಅರ್ಥ ಆಗದೆ ಒದ್ದಾಡ್‌ದೆ. ಕೊನೆಗೂ ನಂಬೂದಿರಿ ಅದರ ಪುಸಲಾಯಿಸಿ ನಿಧಾನಕ್ಕೆ ಎಳ್‌ಕಂಡ್ ಹೋದೆ.)

ದೃಶ್ಯ–21

(ಊರ್‌ನ ಎದುರಿಗಿರುವ ಕಟ್ಟೆ. ಅಲ್ಲಿ ಕರಿಯ, ಮಾರ, ಸಿದ್ದ ಅಲ್ಲದೆ ಇನ್ನೊಂದಷ್ಟು ಜನ ಮಾತಾಡಿಕಂಡ್ ಕುದ್ದಳ)

ಮಾರ: ಕಾಳೇಗೌಡ ಎಂಥದೋ ಒಂದು ಪಂಚಾಯ್ತಿ ಇಸಿಟುಗಡ?

ಕರಿಯ: ಹೂಂ... ಕಾಳೇಗೌಡನ ಉಳ್ಕು ತೆಗ್ಯಕೆ ಬಂದಿತ್ತಲ್ಲಾ ಆ ನಂಬೂದಿರಿ ಪಂಡಿತ ಅವನೊಟ್ಟಿಗೆ ಇವನ ಹೆಣ್ಣು ನಾಗಮ್ಮ ಓಡಿ ಹೋಗಿಟು ಗಡ.

ಸಿದ್ದ: ಏಯ್ ಹಾಂಗೆಲ್ಲ ಹೇಳ್ಬೇಡ. ನಾಗಮ್ಮ ಅಂಥ ಹೆಣ್ಣು ಅಲ್ಲ ಆತ.

ಕರಿಯ: ಅದೆಂಥದ್ದೋ... ಒಟ್ಟಾರೆ ಪೇಟೆಗೆ ಹೋಗಿ ಮದ್ದು ತಂದನೇಂತ ಅವನೊಟ್ಟಿಗೆ ಇದುನೂ ಯಾರಿಗೂ ಹೇಳದೇ ಹೊರ್ಟು ಹೋಗಿಟು ಗಡ.

ಮಾರ: ಹಂಗಾರೆ ಆ ಸುಟ್ಟ ನಂಬೂದಿರಿನೆ ಏನೋ ಮಾಡಿರಕು ಕಂಡದೆ. ಈ ಮಳ್ಯಾಳದವು ಒಳಲ್ಲಾ.. ಭಯಂಕ ಮದ್ದು ಮಾಟ ತಂತ್ರ ಮಂತ್ರ ಮಾಡುವವು ಗಡ.

ಒಬ್ಬ: ಅದ್ ಬುಡು. ಆಮೇಲೆ ಎಂಥಾತ್?

ಕರಿಯ: ವಿಷಯ ಗೊತ್ತಾದ ಹಂಗೆ ಕಾಳೇಗೌಡ ಬಾಯಿ ಬಡ್ಕಂಡ್ ಬಾವಿಗೆ ಹಾರಿಕೆ ಹೋಗಿತ್ತ್‌ಗಡ. ಆಮೇಲೆ ಅತ್ತ ಇತ್ತ ಇದ್ದವು ಅವಂಗೆ ಸಮಾಧಾನ ಹೇಳಿ. ಆ ನಂಬೂದ್ರಿಗೆ ನಾಲ್ಕು ಇಸಿ ನಾಗಮ್ಮನ ಕರ್ಕಂಡ್ ಬನ್ನೇಂತ ಪೇಟೆಗೆ ಹೋಗ್ಯಳ ಗಡ.

ಇನ್ನೊಬ್ಬ: ನಂಬೂದ್ರಿ ಸಿಕ್ಕಿತಾ?

ಕರಿಯ: ಎಲ್ಲಿ ಸಿಕ್ಕಿದೆ? ಇವ್ ಪೇಟೆಗೆ ಹೋಗಿ ಮುಟ್ಟಿಕಾಕೆ ಮುಂದೆನೇ ಅದರ ಸರ, ವಾಲೆ ಎಲ್ಲಾ ಎಳ್ದು ತೆಗ್ದು ಊರು ಬುಟ್ಟು ಓಡಿಹೋತ್ ಗಡ.

ಮತ್ತೊಬ್ಬ: ಪಾಪ.... ಆಮೇಲೆ ಅದರ ಕಥೆ ಎಂಥಾತ್ ಮಾರಾಯಾ..?

ಕರಿಯ: ನಂಬೂದಿರಿಗೆ ಶೀನಪ್ಪಶೆಟ್ಟಿ ಅಂತ ಒಬ್ಬ ರೂಮು ಕೊಟ್ಟಿತ್‌ಗಡ. ಅವ ನಾಗಮ್ಮನ ಅವಸ್ಥೆ ನೋಡಿಕ್ಕಾಗದೆ ಅದ್ಕೆ ಊಟ ಕೊಟ್ಟು ಮನೇಲಿ ಇಸಿಕಂಡಿತ್‌ಗಡ. ಕೊನೆಗೆ ನಾಲ್ಕು ಒಳ್ಳೆ ಬುದ್ಧಿ ಹೇಳಿ ಕರ್ಕಂಡ್ ಬಂದ ಗಡ.

ಮಾರ: ಅದ್ ಸರಿ.. ಇಂಥದಕ್ಕೆಲ್ಲಾ ಪಂಚಾಯ್ತಿ ಯಾಕೆ ಮಾಡ್ ದಪ್ಪ..?

ಕರಿಯ: ಪಂಚಾಯ್ತಿಗೆ ಮಾಡದಿದ್ದರೆ, ನಾಗಮ್ಮನ ಮನೆಗೇ ಸೇರ್ಸುದ್ಲೇಂತ ಕಾಳೇಗೌಡನೇ ಹೇಳ್ತ್‌ಗಡ.

ಮಗದೊಬ್ಬ: ಅದ್ಯಾಕೆ?

ಸಿದ್ದ: ಆ... ಹಾ.. ಬಾಯಿ ಮುಚ್ಚಿಕಂಡಿದ್ದರೆ ನನ್ನಕ್ಕಲೇ ಏನೋ ದೋಷ ಉಟ್ಟು ಅಂತ ತಿಳ್ಕಂಡವ ಅಂತಾಗಿರಕು.

ಮಾರ: ಹೂಂ. ಅವನೂ ಎರಡನೇ ಮದ್ವೆ ಆಕೂಂತ ಹೇಳ್ತುಟ್ಟು ಬೇರೆ! ಆಗ ಪಂಚಾಯ್ತಿಗೆ ಮಾಡ್ಸಿರೆ ನನ್ನದೇನೂ ತಪ್ಪಿಲ್ಲೇಂತ ಅಂತ ಸಾಧಿಸಿಕೆ ಹೊರ್‌ಟಿರಕು ಕಂಡದೆ.

ಒಬ್ಬ: ಅಲ್ಲ... ಈ ಪಂಚಾಯ್ತಿಗೆ ಕೇಸ್ ಹಾಕಿದವ್ ಯಾರ್?

ಕರಿಯ: ಇನ್ಯಾರ್ ಮಾಡ್ವೆ? ಅದೇ ಆ ಶಂಕರಪ್ಪನೂ ಭೂತವೈದ್ಯ ಹೆಗ್ಡೆನೂ.

ಸಿದ್ದ: ವಾ... ಹಂಗಾರೆ ಪಂಚಾಯ್ತಿಗೆ ಜೋರಾಗೇ ಇದ್ದದೆ..

ಕರಿಯ: ಏಯ್.. ಆಗಲೇ ಜನಾಂಗ ಬಾಕೆ ಶುರು ಆದ. ನಾವುನೂ

ಅತ್ತ ಪೋಯಿ ಬನ್ನಿ ಹೋಗುಮ. (ಒಬ್ಬೊಬ್ಬನೇ ಜನಂಗ ಬಂದ್ ಸೇರ್ವೆ. ಮಾರ, ಸಿದ್ದ, ಕರಿಯ, ಒಂದು ಕಡೆ ನಿತ್ತವೆ. ಸೊಂಟ ಉಳ್‌ಕಿಸಿಕಂಡ್ ಮೂವರ್ ಬೇರೆಯವರ ಸಹಾಯ ತಕಂಡ್ ಕಷ್ಟಲಿ ಬಂದ್ ಕುದ್ದವೆ. ಹೆಣ್ಣುಗಳ ಪೈಕಿ ಸುಬ್ಬಮ್ಮ, ರುದ್ರಿ, ಒಂದೆರಡು ಜನ ಮಾತ್ರ ಬಂದೊಳ. ಜನಗ ಗುಜು ಮಾಡ್ತಾ ಒಳ. ಶಂಕರಪ್ಪ ಮತ್ತು ಭೂತವೈದ್ಯ ಹೆಗ್ಡೆ ಒಂದು ಮೂಲೆಂದ ಬರ್ತಾ ಒಳ. ಮಾತ್ ಕಡಿಮೆ ಆದೆ)

ಶಂಕರಪ್ಪ: (ದೊಡ್ಡ ಸ್ವರಲಿ) ಕಳ್ಳ್‌ಮುಂಡೆಗಳಿಗೆ ಬಾರಿ ಸೊಕ್ಕು. ನಿನ್ನ ಕೈಂದ ನಾಲ್ಕು ಬಿಗ್‌ದಾಕನನೇ ಇವ್ ಬಗ್ಗದು. ಇವ್ಕೆಲ್ಲಾ ಬುದ್ಧಿ ಕಲ್ಸುಕೆ ನೀನೇ ಸರಿ. ಹೆಂಗೂ ಸ್ವಲ್ಪ ಕಳ್ಳ್ ಕುಡ್‌ದಳ. ಕೈಲಿ ಬೆತ್ತ ಬೇರೆ ಉಟ್ಟು. ಇಂದ್ ಈ ಕಿರ್‌ಗೂರ್‌ನ ಗಯ್ಯಾಳಿಗಳಿಗೆ ಪುಕ್ಲಿ ಬಿಸಿ ಮಾಡಕು ನಡೀ.. (ಶಂಕರಪ್ಪ ಮತ್ತೆ ಹೆಗ್ಡೆ ಪಂಚಾಯ್ತಿ ಜವಾಬ್ದಾರಿ ತಕಂಡವೆ. ಜನಂಗ ಗಲಾಟೆ ಮಾಡಿಕಂಡೆ ಒಳ) ಇಲ್ಲಿ ಕೇಳಿ.. ಯಾರೂ ಗಲಾಟೆ ಮಾಡ್ಬೇಡಿ.. ನಮ್ಮ ಊರುಳ್ಳಿ ಭೂತವೈದ್ಯ ಹೆಗ್ಡೆಯವ್ರು ಪಂಚಾಯ್ತಿಗೆ ಮಾಡಿಕೆ ಬಂದೊಳೆ..

ಸುಬ್ಬಮ್ಮ: ಇದಕ್ಕೆಲ್ಲಾ ಪಂಚಾಯ್ತಿಗೆ ಯಾಕೆ? ಆದದ್ದ್ ಆಗಿ ಹೋವುಟು. ಎಂಥದೋ ವಿಷ ಘಳಿಗೆ ನಾಗಮ್ಮ ಆ ತರದ ಹೆಣ್ಣು ಅಲ್ಲಾಂತೇಂಳ್ದು ನೀವ್ಗೆಲ್ಲಾ ಗೊತ್ತಿರುವ ವಿಷಯಾನೆ. ನಾ ನೋಡ್ದಂಗೆ ಕಾಳೇಗೌಡ ಹೇಳ್‌ದರ್ನೆಲ್ಲಾ ಹೇಳಿಸಿಕೊಂಡ್ ತಲೆಕೆಳಗೆ ಹಾಕಿ ಬಾಳ್ ನಡ್‌ಸಿಕಂಡ್ ಹೋಗುವವ್‌ಳ್. ನನ್ನ ಕೇಳಿರೆ... ಎಲ್ಲಾ ಮರ್ತ್ ಬಾಳ್‌ದು ಒಳ್ಳೆದೂಂತ ಹೇಳ್‌ನೆ.

ಶಂಕರಪ್ಪ: ಹಾ... ಹಾ... ಆದದ್ದ್ ಆಗಿ ಹೋತೂಂತ ಇನ್ನೊಬ್ಬರ ಮನೆ ಹೆಣ್ಣು ಓಡಿ ಹೋಕುನ ಹೇಳಿಕೆ ಸುಲಭ! ನಿಮ್ಮನೇಲಿ ಇಂಥ ಕೆಲ್ಸ ಆಗಿದ್ದರೆ ಆದ್ ಆಗಿ ಹೋತ್

ಏನ್ ಮಾಡ್ದೂಂತ ಬಾಯಿ ಮುಚ್ಚಿಕಂಡ್ ಸುಮ್ಮಂಗೆ ಇರ್ತಿದ್ದರಾ? ಅಲ್ಲಾ... ಪಾಪ ಆ ಕಾಳೇಗೌಡ ಸೊಂಟ ಹಿಡ್ಕಂಡ್ ಹುಷಾರಿಲ್ಲೇಂತ ಹೇಳಿ, ಕಾಲ ದೂಡಿಕಂಡ್ ಇರ್‌ಕನ ಇದರ ನಡು ನೀರ್‌ಲಿ ಕೈ ಬುಟ್ಮಂಗೆ ಆದ್ಲೇನಾ?

ಹೆಗ್ಡೆ: ಆತ್ ಸುಬ್ಬಮ್ಮ. ನೀ ಹೇಳ್ದಂಗೆ ಆಗಲಿ. ಆದದ್ದ್ ಆಗೋತ್ ಸರಿ. ಇನ್ನು ಮುಂದೆ ಇಂಥದ್ದ್ ಆಕಾಗದ್ ಅಲ್ಲ? ಅದಿಕ್ಕೇನೇ ಇದ್ ಯಾಕಾತ್? ಎಂಥ ಕಾರಣ? ಹಿಂಗೆಲ್ಲಾ ವಿಚಾರಿಸಿಕೆತೇಂಳಿನೆ ನಾವು ಇಲ್ಲಿಗೆ ಬಂದದ್ದ್. (ಜನಗಳ ಕಡೆ ನೋಡಿ ಹೇಳಿಕಂಡದೆ) ಇದ್ ನಾಗಮ್ಮನ ಸ್ವಂತ ಬುದ್ಧಿ ಅಂತೂ ಅಲ್ಲ. ಆ ಪಂಡಿತ ಏನೋ ಮಂಗ ಮಾಡಿ ಬುಟ್ಟಿಗೆ ಹಾಕಿಕಂಡಿರಕ್ಕು. ನಾವ್ ಇದರ ಹಿಂಗೇ ಬುಟ್ಟರೆ ನಾಳೆ ನಾವೂ ನಮ್ಮ ಹೆಣ್ಣ್‌ನ ಹೀಂಗೆ ಹುಡ್‌ಕಿಕಂಡ್ ಹೋಕಾದೆ. ಅದ್ಕೆ ವಿಚಾರಣೆ ಆಕೂಂತ ಹೇಳ್ದು.

ಜನಂಗ: ಹೌದು... ಹೌದು... ಹೆಗ್ಡೆವು ಹೇಳ್ದು ಸರಿನೇ.

ಹೆಗ್ಡೆ: ಆತ್.. ಆತ್.. ಪಂಚಾಯ್ತಿಗೆ ಮಾಡುಮ. ಎಲ್ಲವೂ ಸುಮ್ಮನಿರಿ. ಎಲ್ಲಿ ನಾಗಮ್ಮ ಇಲ್ಲಿ ಬರಲಿ.

ರುದ್ರಿ: ನಾಗಮ್ಮ ಇಲ್ಲಿ ಇಲ್ಲೆ.

ಹೆಗ್ಡೆ: ಕಾಳೇಗೌಡ... ನಾಗಮ್ಮ ಎಲ್ಲಿ?

ಕಾಳೇಗೌಡ: ಪಂಚಾಯ್ತಿ ಆಗುವವರೆಗೂ ಮನೆ ಒಳಗೆ ಬರ್‌ಬೇಡಾಂತ ಹೇಳ್ಯಲೆ. ಅದ್ಕೆ ದಾನಮ್ಮನ ಒಟ್ಟಿಗೆ ಉಟ್ಟು ಕಂಡದೆ.

ಶಂಕರಪ್ಪ: ಏಯ್... ಕುಳ್ವಾಡಿ ಹೋಗಿ ಬಾಕೆ ಹೇಳ್. (ಕುಳ್ವಾಡಿ ಕರಿಯ ಎದ್ದು ಹೋದೆ)

ಹೆಗ್ಡೆ: ನನ್ನ ಬೆತ್ತ ಇಲ್ಲೆ ಎಲ್ಲೋ ಇಸಿದ್ದೆ ಅಲ್ಲ.. ಎತ್ತೋತ್?

ಸುಬ್ಬಮ್ಮ: ಮಾರಾಯ ನೀ ಹೊಡ್ಯದು ಬಡ್ಯದು ಮಾಡ್‌ದೂಂತಾರೆ

ಸುರುಗೆ ಹೇಳ್ ನಾ ಇಲ್ಲಿಂದ ಹೋದನೆ. ಆಮೇಲೆ ಏನ್ ಬೇಕಾರ್ ಮಾಡಿಕಣಿ. ನಂಗಂತೂ ಹೆಣ್ಣು ಮಕ್ಕಳಿಗೆ ಹೊಡ್ಯದರ ನೋಡಿಕೆ ಆದ್ಲೆ.

ಹೆಗ್ಡೆ: ಹಂಗಲ್ಲ ಸುಬ್ಬಮ್ಮ. ನನ್ನ ಕೈಲಿ ಬೆತ್ತ ಇದ್ದರೇನೆ ದೆವ್ವ ಪಿಶಾಚಿಗ ಬಗ್ಗದು. ನಾ ಯಾಕೆ ಇದ್ದವರ ಹೆಣ್ಮಕ್ಕಳ ಮೇಲೆ ಹೊಡ್ಯಕೆ ಹೋಗಲಿ? ನಂಗೇನ್ ಮರ್ಲಾ? (ಕುಳ್ವಾಡಿ ಕರ್‌ಕಂಡ್ ಬಂದದೆ. ದಾನಮ್ಮನೊಟ್ಟಿಗೆ ನಾಗಮ್ಮ ಬಂದ್ ದೂರಲಿ ನಿಂತದೆ. ಇಡೀ ಗುಂಪು ನಾಗಮ್ಮನ ನೋಡ್ದೆ. ನಾಗಮ್ಮ ಮತ್ತು ದಾನಮ್ಮರ ಮೋರೆಲಿ ಸ್ವಲ್ಪನೂ ಭಯ ಅಥವಾ ಹೆದರಿಕೆ ಕಾಂಬೊದ್ಲೆ)

ಹೆಗ್ಡೆ: ನಾಗಮ್ಮ.... ತಪ್ಪು ನೀ ಮಾಡ್‌ತ್ಲೆ. ಆದರೆ ನೀ ಬೇರೆಯವರ ಕೈಲಿ ಸಿಕ್ಯಾಕಂಡ್ ಹಾಂಗೆ ಮಾಡ್ಯೋಳಾಂತ ನಂಗೊತ್ತುಟು. ಇಲ್ಲಿಗೆ ಬಂದ್ ಹತ್ತ್ ಜನರ ಎದುರ್‌ಗೆ ಹೌದೋ.. ಅಲ್ಲಾಂತ.. ಹೇಳ್ ಬಾ. (ನಾಗಮ್ಮ ಬಾದ್ಲೆ. ಅಲ್ಲೆ ನಿಂತದೆ. ಹೆಗ್ಡೆಗೆ ಪಿತ್ತ ನೆತ್ತಿಗೇರ್‌ದೆ) ಅಲ್ಲಾ... ಈ ಊರ್‌ನ ಪಂಚಾಯ್ತಿಗೆ ನಾವ್ ಅಷ್ಟು ದೂರಂದ ಬಂದರೂ.. ನಮ್ಮ ಮಾತ್‌ಗೆ ಬೆಲೆನೇ ಇಲ್ಲೆಲ್ಲ. ಈ ಹೆಂಗ್ಸ್‌ಗೆ! ಶಂಕ್ರಪ್ಪ... ಹೋಗಿ ಕರ್‌ಕಂಡ್ ಬಾ ಅದರ. ಅದ್ಕೆ ಎಷ್ಟು ದೆವ್ವಗ ಮೈಗೆ ಬಂದುಟೋ ಅದರ ಪೂರಾ ಇಳ್ಸಿನೆ ಇಂದ್. ಒಳ್ಳೆದರ್ಲಿ ಹೇಳ್ದ ಮಾತಿಗೆ ಮರ್ಯಾದೆ ಕೊಟ್ಟ ದೆವ್ವನ ನಾ ಅಂತೂ ಇಲ್ಲಿವರೆಗೂ ನೋಡ್‌ತ್ಲೆ.

(ಶಂಕರಪ್ಪ ನಾಗಮ್ಮನ ರಟ್ಟೆ ಹಿಡ್ಕಂಡ್ ದರದರಾಂತ ಎಳ್ಕಂಡ್ ಹೋದೆ. ಹೆಗ್ಡೆ ಅವನ ಕೈಲಿದ್ದ ಬೆತ್ತಂದ ಎರಡ್ ಬಾರ್‍ಸಿದೆ) ಯಾರ್ ನೀ? ಬಾಯಿ ಬುಟ್ಯನಾ ಇಲ್ಲೆನಾ..? ಇಲ್ಲೆ ಇನ್ನು ನಾಲ್ಕು ಬಿಗ್ಯಕಾ? ಕರ್‌ದರೆ ಮರ್ಯಾದೆಲಿ ಬಾಕೆ ಆದ್ಲೆನಾ? (ಹೆಗ್ಡೆ ಮೈಮೇಲೆ ಬಂದವರ ಹಾಂಗೆ ಕಣ್ಣು ಕುತ್ತ ಮಾಡಿ ಬೊಬ್ಬೆ ಹೊಡ್‌ದದೆ. ಶಂಕರಪ್ಪ ಅವನ

ಎದುರಿಗೆ ಮೊಣಕಾಲ್ ಬಗ್ಗಿಸಿ ಬೇಡಿಕಂಡದೆ)

ಶಂಕರಪ್ಪ: ದೇವರೇ.. ಈ ಹೆಣ್ಣ್ ಕೂಸ್ ಮಾಡ್ದ್ ತಪ್ಪಾ.. ಸರಿನಾ.. ಗೊತ್ತಿಲ್ಲೆ.. ಎಲ್ಲಾ ನೀವೇ ಹೇಳಿ ಉರುನಾ ಕಾಪಾಡಿ ಯಪ್ಪೋ.. ದೇವರೇ.. (ಹೆಗ್ಡೆ ಗುರ್ ಗುರ್ ಕುಣಿಕಂಡ್ ನಾಗಮ್ಮಂಗೆ ಇನ್ನೂ ಹೊಡೆದದೆ)

ಹೆಗ್ಡೆ: ಹೇಳ್.. ಹೇಳ್.. ಬಾಯಿ ಬುಡ್.. ಹೇಳ್..

ದಾನಮ್ಮ: (ರಪಕ್ಕಂತ ಹೆಗ್ಡೆ ಹಕ್ಕಲೆ ಬಂದ್) ನಿಲ್ಸಿ ಸಾಕ್.. ಥೂ ನಿಮ್ಮ! ಆಚಾರ ವಿಚಾರಗ ಪಂಚಾಯ್ತಿಗ ಎಲ್ಲಾ ನಂಗೆ ಗೊತ್ತುಟು. (ಶಂಕರಪ್ಪ ಮತ್ತು ಹೆಗ್ಡೆ ಅದರ ಬಾಯಿಗೆ ಹೆದರಿ ತಮ್ಮ ಕಳ್ಳಾಟನ ನಿಲ್ಲ್‌ಸುವೆ) ಹೇಳ್.. ಎಂಥ ಬಾಯಿ ಬುಡಕು ನಿಂಗೆ?

ಹೆಗ್ಡೆ: ಅದೆಂಥಾಂತ ಹೇಳ್ದ್? ಪಂಡಿತನ ಹಿಂದೆ ಓಡಿ ಹೋತೂಂತ ಹೇಳಕಾ?

ದಾನಮ್ಮ: ನಿಂಗ್ಯಾಕೆ ಹೇಳಕು? ಹೆಂಗ್ಸುಗ... ಗಂಡಸರ ಹಿಂದೆ ಓಡಿ ಹೋದು ಯಾಕೇಂತ ಹೆಂಗ್ಸರ ಬಾಯಿಂದಾನೇ ಕೇಳಕಾ ನಿಂಗೆ? ಹೋಗಿ ನಿನ್ನ ಹೆಣ್ಣ್‌ನ ಕೇಳಿಕಂಡ್ ಬಾ. ಇಲ್ಲಿ ಯಾಕೆ ಬೆತ್ತ ಅಲ್‌ಗಿಸಿಕಂಡ್ ನಿತ್ತುಳಾ?

ಶಂಕರಪ್ಪ: ಕೈ ಹಿಡ್ದ ಗಂಡ ಇರಿಕಾಕನ ಅದ್ಯಾವನ ಹಿಂದೆ ಓಡಿ ಹೋಗಿ ಊರುನ ಮರ್ಯಾದೆ ಎಲ್ಲಾ...

ದಾನಮ್ಮ: ಅದೆಂಥ ಹೇಳಕೋ.. ಅದರ ಗಟ್ಟಿಯಾಗಿ ಹೇಳ್ ಅದ್ಯಾಕೆ ಒಳಗೊಳಗೆ ನುಂಗಿಯಾ? ಎಂಥದ್ದೆಲ್ಲಾ ಹೇಳ್ಯರೋ ಅದರೆಲ್ಲಾ ಕೇಳಿಕೇಂತನೇ ಇಲ್ಲಿಗೆ ಬಂದೊಳೆ. ಕೈ ಹಿಡ್ದ ಗಂಡ ಅಂತ ಹೇಳಿಯಾ.. ನಿನ್ನ ಬಾಯಿಗೆ ಮಣ್ಣಾಕ. ಮಕ್ಕಳಾತ್ಲೇಂತ ಇನ್ನೊಂದರ ಇವ ಕಟ್ಟಿಕಣಕಾ? ಥೂ... ಇಂವಾ ಗಂಡಸಾ..? (ಕಾಳೇಗೌಡನ ಮೋರೆಗೆ ಉಗ್‌ದದೆ)

ಕಾಳೇಗೌಡ: ಮಕ್ಕಳಾಗದಿದ್ದರೆ ಮತ್ತೆಂಥ ಮಾಡಕು ನಾ?

ಶಂಕರಪ್ಪ: ಬಂಜೆನ ಕಟ್ಟ್‌ಕಂಡ್ ಕಾಲ ದೂಡ್‌ಕಾ?

ದಾನಮ್ಮ: ಥೂ... ನಿನ್ನ ಮುಸುಂಡಿಗೆ. ನಿನ್ನ ಅಂಗಡೀಲಿ ಕಳ್ಳ್ ಕುಡ್ದು ಕುಡ್ದು ಓತಿಕ್ಯಾತನಂಗೆ ಆಗ್ಯಳ.. ಹಿಚ್ಕಿರೆ ಪುಕ್ಲಿಲಿ ಮೂರು ತೊಲ ಮಾಂಸ ಇಲ್ಲೆ. ಕುಡ್ಕಂಡ್ ರಾತ್ರಿ ಪೂರಾ ಮಾರ್ಗಲೋ.. ಕಣಿಲೋ.. ಬಿದ್ದ್ ಬಂದರೆ ಮಕ್ಕ ಹೇಂಗೆ ಆದವೆ ನಿಂಗೆ? ಮಕ್ಕಳಾತ್ಲೆ ಗಡ.. ಮಕ್ಕ! ಅಮಾಸೆಗೊಮ್ಮೆ ಹುಣ್ಣಿಮೆಗೊಮ್ಮೆ ಹೆಣ್ಣನಾ ನೆನ್‌ಪಿಸ್‌ಕಂಡರೆ ಮಕ್ಕ ಆದವೆನಾ? ಥೂ ಬೇವರ್ಸಿ.. ನೀ ನಿನ್ನ ಅಪ್ಪಂಗೆ ಹುಟ್ಟಿದವ ಆಗಿದ್ದರೆ ಹೋಗಿ ಕೇಳಿಕಂಡ್ ಬಾ.. ಹೇಂಗೆ ಹುಟ್ಟಿಸಿದಾಂತ. (ಸೊಂಟ ಉಳ್ಕಿಸಿಕೊಂಡವನ ಕಡೆ ನೋಡಿ) ಒಳ್ಳೆ ಮಾತ್‌ಲಿ ಕರಿಯನ ಹಕ್ಕಲೆ ಉಳ್ಕ್ ತೆ–ಗ್ಸಿಕಂಡಿರೋ ಇಲ್ಲೆ.. ನಿಮ್ಮ ಹೆಣ್ಣ್‌ಗ ಸಂತೇಲಿ ಸೀರೆ ಬಿಚ್ಚಿ ಯಾರಿಗಾರ್ ಬಸುರಿ ಆದರ ನೋಡುಕಾ ಯೋಚಿಸಿ.. ಉಳ್ಕು ತೆಗ್ಸಿ ಕಂಡರಾ..? (ಬೈಯ್ದು ಬೈಯ್ದು ಸಾಕಾಗಿ ಹೋಗಿ ದಾನಮ್ಮ ಸುಮ್ಮನಾದೆ)

ಹೆಗ್ಡೆ: ಇದೆಂಥ ಹೆಣ್ಣು ಮಕ್ಕ ಹೇಳ್ವ ಮಾತಾ? ಏಯ್ ಇಲ್ಲಿ ಕುದ್ದಿರುವವಕ್ಕೆ ಮರ್ಯಾದೆ ಕೊಟ್ಟು ಮಾತಾಡ್. (ಹೆಗ್ಡೆ ದಾನಮ್ಮಂಗೆ ಹೊಡ್ಯಕೆ ಹೋದೆ. ದಾನಮ್ಮ ಬೆತ್ತನ ಎಳ್ದು ಬಿಸಾಡಿ ಕೆಳಗೆ ದೂಡಿದೆ. ಶಂಕರಪ್ಪ ಬೆತ್ತ ತಕಂಡ್ ದಾನಮ್ಮಂಗೆ ಹೊಡ್‌ದದೆ. ಗಂಡು ಜನಂಗೆ ಹುರಿದುಂಬಿ ಸುವೆ. ಶಂಕರಪ್ಪ ಇನ್ನೂ ಬಡ್‌ದದೆ ಇದ್ದಕ್ಕಿದ್ದ ಹಾಂಗೆ “ನಿಲ್ಸಿ... ಸಾಕ್” ಅಂತ ದೊಡ್ಡ ಸ್ವರ ಕೇಳಿ ಬಂದದೆ ಎಲ್ಲವೂ ಹಂಗೇ ಬಾಯಿ ಬುಟ್ಟು ನೋಡುವೆ. ಕೈಲ ವ್ಯಾಪುನ ಹಿಡ್ಕಂಡ ಹೆಣ್ಣು ಜನಂಗಳ ಗುಂಪು ಇವರಕ್ಕಲೆ ಓಡಿ ಬಂದದೆ ಸುಬ್ಬಮ್ಮ, ರುದ್ರಿ ಇವರೊಟ್ಟಿಗೆ ಸೇರಿಕಂಡವೆ)

ಕಾಳಿ: ಗಂಡು ಜನಗಳಿಗೆಲ್ಲಾ ಕಳ್ಳ್ ಕುಡ್ಸಿ ನಾಡ್‌ನ, ಊರ್‌ನ ಹಾಳ್ ಮಾಡ್‌ದಲ್ಲದೇ ಹೆಣ್ಣು ಜನಂಗಳ ಮೇಲೆ ಕೈ ಬೇರೆ ಮಾಡಿಯಾ..?

ಈರಿ: ನಾಗಮ್ಮನ ಬಂಜೆ ಅಂತ ಹೇಳಿಯಾ.. ಹೊಡ್‌ದಿಯಾ.. ಸುಟ್ಟವ..

ರುದ್ರಿ: ಇಂದ್ ನಿನ್ನ.. ನಿನ್ನ್ ಕಳ್ಳ್ ಅಂಗಡಿನ ಹಾಳು ಮಾಡಿ ತೆಗ್ದ್ ಬಿಸಾಡ್‌ತ್ಲೇಂತಾರೆ ನಾವು ಯಾಕೆ ಇರ್‍ದು ಹೇಳ್?

ದಾನಮ್ಮ: ಎಂಥಾ ಮೋರೆ ನೋಡಿರೆ.. ಬಡ್ದು ಹಾಕಿ ಅವರ.. ಮಣ್ಣು ಮುಕ್ಕಿಸಿ ಅವರ..

(ಅವರವರ ಕೈಲಿ ಇರುವ ಮ್ಯಾಪುಂದ ಶಂಕರಪ್ಪ, ಹೆಗ್ಡೆ ಮತ್ತೆ ಅಲ್ಲಿದ್ದ ಗಂಡಸರನ್ನೆಲ್ಲಾ ಬೇಕಾದಂಗೆ ಹೊಡ್‌ದದೆ. ಇಡೀ ಪಂಚಾಯ್ತಿ ಕಟ್ಟೆ ರಣರಂಗ ಆದೆ. ಶಂಕರಪ್ಪ ಮತ್ತು ಹೆಗ್ಡೆ ಬದ್‌ಕಿರೆ ಸಾಕೂಂತ ಓಡಿರೆ. ಪೆಟ್ಟು ತಿಂದ್ ಉಳ್‌ದ ಗಂಡ್ ಜನಂಗ ಹೆಣಗಳ ಹಾಂಗೆ ಆದವೆ. ಹೆಂಗಸರ ಕೋಪ ಇಳ್ದಂಗೆ ಎಲ್ಲ... ಸುಮ್ಮನಾದವೆ)



ದೇವಜನ ಗೀತಾ ಮೋಂಟಡ್ಕ

ಎಮ್ಮೆಸ್ಸ್ ಗೀತಾಂತೇಳಿಯೇ ಹೆಸ್ರಾಗಿದ್ದ ದೇವಜನ ಗೀತಾ ಮೋಂಟಡ್ಕ ಸುಳ್ಯದ ಮಗ, ಕೊಡ್ಗ್‌ನ ಸೊಸೆ. ಕಳ್ದ 34 ವರ್ಸಂದ ಮೈಸೂರ್ನ ರಂಗಾಯಣಲಿ ಹಿರಿಯ ಕಲಾವಿದೆ ಆಗಿರ್ವ ಇವು ಬಹುಮುಖ ಪ್ರತಿಭೆ. ನಾಟಕಲಿ ಪಳ್ಂಗಿದವು. ನಿರ್ದೇಶನ, ನಟನೆ, ಪದ್ಯ, ನಾಟಕ ಬರ್ಯದು, ರಂಗ ಸಾಹಿತ್ಯ, ಕನ್ನಡ ಮತ್ತೆ ಅರೆಭಾಷೆ ಬರಹಗಾರ್ತಿ ಆಗಿ ಭಾರೀ ಪೆಸ್ರಾದವು. ನಾಟಕಂತೇಳ್ರೆ ಹೆಣ್ಮಕ್ಕಳ ಪೈಕಿ ನೆಂಪಾದೇ ಇವು. ಅದಲ್ಲೂ ಅಣುಕು ಕಲಾವಿದೆ ಆಗಿ ಭಾರೀ ಜನಪ್ರಿಯತೆ ಪಡ್ದವು.

ಇವು ಇಂದ್ ನಿನ್ನೆ ಅಲ್ಲ. ಸುಮಾರ್ 40 ವರ್ಸಂದ ತನ್ನದೇ ಪ್ರಯತ್ನಂದ ಪಳ್ಂಗಿದ ಮಿಮಿಕ್ರಿ ಕಲಾವಿದೆ. ಸುಮಾರ್ 700ಕ್ಕೂ ಹೆಚ್ಚಿ ಕಾರ್ಯಕ್ರಮ ಕೊಟ್ಟೊವು. ತಾಲೂಕು, ಜಿಲ್ಲೆ, ರಾಜ್ಯ, ದೇಶದ ಹಲವು ಕಡೆ ಮಿಮಿಕ್ರಿ ಕಾರ್ಯಕ್ರಮ ಕೊಟ್ಟ್ ಚಪ್ಪಾಳೆ, ಸನ್ಮಾನ ಪ್ರಶಸ್ತಿ ಬಾಚಿಕಂಡೊಳೋ.

ರಂಗಾಯಣಲಿ ಮಾಡ್ದ ಸುಮಾರು 200ಕ್ಕೂ ಹೆಚ್ಚಿ ನಾಟಕಗಳ್ಲಿ ಎಲ್ಲಾ ನಮೂನೆನ ಪಾರ್ಟ್ ಮಾಡಿ ಚಪ್ಪಾಳೆ ಹೊಡ್ಸಿಕೊಂಡವು. ಪೂರ್ಣಚಂದ್ರ ತೇಜಸ್ವಿ ಅವರ ಕಿರಗೂರಿನ ಗಯ್ಯಾಳಿಗ ಸಿನಿಮಾ ಆಕೆ ಮುಂದೇನೇ ಅದರ ನಾಟಕ ರೂಪಕ್ಕೆ ಇಳ್ಸಿದೋ. ಅದರ ಅರೆಭಾಷೆಗೆ ತರ್ಜಿಮೆ ಮಾಡಿ ಪುಸ್ತಕದ ರೂಪಲಿ ಈಗ ನಿಮ್ಮ ಕೈಲಿ ಇಸ್ಸೊಳೋ. ಇವು ನಿಸ್ಸಂಶಯವಾಗಿಯೂ ಒಬ್ಬ ಅರೆಭಾಷೆನ ಆಸ್ತಿ.

ಮೈಸೂರು ಯೂನಿವರ್ಸಿಟಿಂದ ಪತ್ರಿಕೋದ್ಯಮ ಡಿಪ್ಲೊಮಾ, ಇತಿಹಾಸ ಎಂಎ ಪದವಿ ಪಡ್ದೊಳೊ. ಬೆಂಗ್ಳೂರು ದೂರದರ್ಶನದ ವಾರ್ತಾ ವಿಭಾಗಲಿ ಅರೆಕಾಲಿಕ ನಿರ್ಮಾಣ ಸಹಾಯಕಿಯಾಗಿ, ಕೊಡ್ಗ್ ಸಂಗಾತಿ ಪಾಕ್ಷಿಕ ಪತ್ರಿಕೆನ ಕಾರ್ಯನಿರ್ವಾಹಕಿ ಆಗಿದ್ದವು. ರಾಜ್ಯ ಸರ್ಕಾರದ ತೂಕ ಮತ್ತೆ ಅಳ್ತೆ ವಿಭಾಗದ ಮಡ್ಕೇರಿ ಆಫೀಸ್‌ಲಿ ಕೆಲ್ಸ ಮಾಡ್ತಿದ್ದವು ಮೈಸೂರ್ನ ರಂಗಾಯಣಲಿ ಅವಕಾಶ ಸಿಕ್ಕಿಕನ ಕೆಲ್ಸ ಬುಟ್ಟ್ ಅಲ್ಲಿಗೆ ಸೇರ್ದೊ.

ಈ ಅದ್ಭುತ ಕಲಾವಿದೆನ ಎಷ್ಟೋ ಸಂಘ-ಸಂಸ್ಥೆಗ ಸನ್ಮಾನ ಮಾಡ್ಯೊಳೊ, ಪ್ರಶಸ್ತಿ ಕೊಟ್ಟೊಳೋ, ಗೌರವಿಸ್ಯೊಳೋ. 2015ರ್ಲಿ ಕನ್ನಡ ಮತ್ತೆ ಸಂಸ್ಕೃತಿ ಇಲಾಖೆನ ಅರೆಭಾಷೆ ಅಕಾಡೆಮಿನ ಗೌರವ ಪ್ರಶಸ್ತಿ ಇವುಕೆ ಸಿಕ್ಕಿಟು. ಪತಿ ದೇವಜನ ಗಣೇಶ್ ಉತ್ತಯ್ಯ, ಮಗ ಜಗತಿನೊಟ್ಟಿಗೆ ಸಂತೋಷದ ಸಂಸಾರ ಜೀವನ. ಮೈಸೂರ್ಲಿ ನೆಲೆನಿತ್ತ್ ಕಲಾಸೇವೆ ಮಾಡ್ತಾ ಇರುವ ಇವು ಬಹುಮುಖ ಪ್ರತಿಭೆಯ ಕಲಾವಿದೆಯಾಗಿನೂ, ನಾಟಕ ರಂಗಲಿನೂ ಭಾರೀ ದೊಡ್ಡ ಹೆಸ್ರ್!

ಪ್ರಕಾಶಕರು:
ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಕೇರಿ, ಕೊಡುಗು ಜಿಲ್ಲೆ

ರೂ. 100/-